ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 13, 2013 ಪುಟ 20 ರೂ. 14/-


ಉತ್ತರ ಕನ್ನಡ

ವಿಶಿಷ್ಟ ಸಾಹಿತಿ ವಿಡಂಬಾರಿ



ಆದಿಚುಂಚನಗಿರಿ

ವಿಲ್ ವಿವಾದ



ಕುಕ್ಕೆ ಸುಬ್ರಹ್ಮಣ್ಯ



ಶೈವ ದೇಗುಲ ಮಾಧ್ವರಿಂದ ಹೈಜಾಕ್!

ಹಾನಗಲ್

ಮೋಹನ್‌ಕುಮಾರ್

ಎಂಟ್ರಿ

ಹಶೀಲ್ದಾರ್, ಉದಾಸಿಗೆ

ತಿಸೆಂಟ್ರಿ

ಬಿಜೆಪಿ ಪೋಲೀಸರಿಗೆ ಮಾನಭಂಗ






ದಾವಣಗೆರೆ

ಬಿಜೆಪಿ ವಿರುದ್ಧ ಮಠ ಸಮರ

ನಗರಪಾಲಿಕೆಯಲ್ಲಿ

400 ಕೋಟಿ ನುಂಗಿದ ಚೆಡ್ಡಿಗಳು



ಪಾರ್ವತೀಶ ಬಿಡಿ ಚಿತ್ರಗಳು


bparvateesha@gmail.com

ಈತನ ಹೆಸರು ನಾರಾಯಣ ರಾವ್ ನಿಕ್ಕಂ.

ಎರಡನೇ ವಿಶ್ವ ಮಹಾಯುದ್ಧದಲ್ಲಿ ಹೋರಾಡಿದ ಈ ಸೈನಿಕನ ಬಗ್ಗೆ ತಿಳಿಯಲು, ಪೂರ್ವೋತ್ತರಗಳನ್ನು ಪತ್ತೆ ಹಚ್ಚಲು ನಾನು ನಡೆಸಿದ ಪ್ರಯತ್ನಕ್ಕೆ ಇದುವರೆಗೂ ಯಶ ಸಿಕ್ಕಿಲ್ಲ.

ನನಗೀ ಉಮೇದು ಬರಲು ಕಾರಣವೂ ಇದೆ. ಈ ನಿಕ್ಕಂ ನಮ್ಮೂರು ಬಿಳಿದಾಳೆಯ ಪಕ್ಕದ ನೇರಳೆಹಟ್ಟಿ ಗ್ರಾಮದವರು.

ಇದು ಹೇಗೆ ಶುರುವಾಯಿತೆಂದರೆ ನಾವೆಲ್ಲಾ ಹೈಸ್ಕೂಲ್ ಓದುತ್ತಿದ್ದಾಗ 'ಸೋವಿಯತ್ ರಷ್ಯಾ' ಎಂಬ ಮಾಸಪತ್ರಿಕೆಯೊಂದು ಓದಲು ಸಿಗುತ್ತಿತ್ತು. ಅರೆಮನಸ್ಸಿನಿಂದ ರಷ್ಯಾದ ಬೆಂಬಲಕ್ಕೆ ನಿಂತಿತ್ತು. ಆಗ ಸಂಕಷ್ಟದಲ್ಲಿದ್ದ ರಷ್ಯನ್ನರಿಗೆ ಭಾರತದಿಂದ ಆಹಾರ, ಔಷಧ, ಉಕ್ಕು, ರೇಷ್ಮೆ, ಜ್ಯೂಟ್, ನಿಕ್ಕಲ್ ಮುಂತಾದ ಯುದ್ಧ ಸಾಮಗ್ರಿಗಳನ್ನು ಅಫಘಾನಿಸ್ತಾನ ಹಾಗೂ ಇರಾನ್ ಮೂಲಕ ಸಾಗಿಸಲು ಏರ್ಪಾಡಾಗಿತ್ತು. ಈ ನಿಕ್ಕಂ ಮತ್ತವರ ಸೈನಿಕರ ತಂಡವು 'East Persia Route' ಎಂಬ ಏಳುನೂರಾ ಎಪ್ಪತ್ತು ಕಿಲೋಮೀಟರ್ ಉದ್ದದ ಹೊಸ ರಸ್ತೆಯೊಂದನ್ನೇ ಇದಕ್ಕಾಗಿ ನಿರ್ಮಿಸುವ ಹೊಣೆ ಹೊತ್ತಿದ್ದರು. ಅನೇಕ ನದಿ, ಕಣಿವೆ, ಪರ್ವತಶ್ರೇಣಿಗಳನ್ನು ಹಾದುಹೋಗುವ ಈ ರಸ್ತೆ ನಿರ್ಮಾಣ ಆಗಿನ ಯುದ್ಧದ ಕಾಲದಲ್ಲಿ ಅತ್ಯಂತ ಕಷ್ಟದ ಕೆಲಸವಾಗಿದ್ದರೂ ನಿಕ್ಕಂರ ತಂಡ ಅದನ್ನು ಸಾಧಿಸಿತ್ತು. ಈ Supply Route ಅವತ್ತಿನ ನಿರ್ಣಾಯಕ ಯುದ್ಧದಲ್ಲಿ ಎಷ್ಟು ನೆರವಾಗಿತ್ತೆಂದರೆ ಯುದ್ಧ ಮುಗಿದು ರಷ್ಯಾ ಗೆದ್ದನಂತರ ನಿಕ್ಕಂರಿಗೆ ರಷ್ಯಾದ ಅತ್ಯುನ್ನತ 'Order of Red Star' ಮಿಲಿಟರಿ ಪದಕ ದೊರೆಯಿತು.



ನಾರಾಯಣ ರಾವ್ ನಿಕ್ಕಂ

ಈ ವಿಚಾರಗಳನ್ನೆಲ್ಲ ಮತ್ತೆ ಓದಿದ ನಾನು ನಿಕ್ಕಂರ ಬಗ್ಗೆ ತಿಳಿಯಲು ಈಗ್ಗೆ ಮೂರು ವರ್ಷಗಳ ಹಿಂದೆ ನೇರಳೆಹಟ್ಟಿಗೆ ಹೋದೆ. ನನ್ನ ಹಳ್ಳಿಯ ಮಿತ್ರರಾದ ರಾಜಣ್ಣ, ನಿರಂಜನ್‌ಗೂ ನಿಕ್ಕಂ ಬಗ್ಗೆ ಹೇಳಿದ್ದೆನಾದ್ದರಿಂದ ಅವರೂ ಜೊತೆಗಿದ್ದರು. ಕನಕಪುರದ ಗಡಿ ಗ್ರಾಮವಾಗಿರುವ ನೇರಳೆಹಟ್ಟಿ ಸಂಪೂರ್ಣ ಮರಾಠಿಗರ ನೆಲೆ. ಬಹುಶಃ ಇವರ ಪೂರ್ವಿಕರು ಟೀಪೂವಿನ ಸೇನೆಯಲ್ಲಿದ್ದವರಿರಬೇಕು. ಅಲ್ಲಿ ನಾವು ಏನೇ ಪ್ರಯತ್ನಿಸಿದರೂ ನಿಕ್ಕಂ ಬದುಕಿನ ಬಗ್ಗೆ ಮಾಹಿತಿ ಸಿಗಲಿಲ್ಲ. ಆದರೇನು ನಮ್ಮವನೊಬ್ಬ ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ಅಂತಾರಾಷ್ಟ್ರೀಯ ಬ್ರಿಗೇಡ್ ಸೇರಿ ಅಫಘಾನಿಸ್ತಾನ-ಇರಾನ್‌ನಲ್ಲಿ ಹೋರಾಡಿದ್ದ ಎಂಬ ನೆನಪೇ ಹೆಮ್ಮೆ ತರುವಂತಿತ್ತು.

...ಭಯೋತ್ಪಾದಕನೆಂಬ ಆರೋಪ ಹೊತ್ತಿದ್ದ ಪತ್ರಕ[ರ್ತ] ರೆಹಮಾನ್ ಸಿದ್ದಿಕಿ ಈಗ ನಿರಪರಾಧಿಯೆಂದು ಬಿಡುಗಡೆಯಾಗಿರುವ ಸಂದರ್ಭದಲ್ಲಿ ಈ ಮೇಲಿ[ನ] ಸಂಗತಿಗಳನ್ನು ನೆನೆಯಲು ಕಾರಣಗಳಿವೆ.

2012ರ ಆಗಸ್ಟ್ 29 ರಂದು ಬೆಂಗಳೂರಿನ ಸಿಸಿಬಿ ಪೊಲೀಸರು ರೆಹಮಾನ್ ಸಿದ್ದಿಕಿ ಸೇರಿದಂತೆ ಒಟ್ಟು ಹದಿನೆಂಟು ಮುಸ್ಲಿಂ ಯುವಕರನ್ನು ಅರೆಸ್ಟ್ ಮಾಡಿ ಅವರೆಲ್ಲ ಲಷ್ಕರ್-ಎ-ತೋಯ್ಬಾ ಹಾಗೂ ಹೂಜಿ ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಬಂಧ ಹೊಂದಿದ್ದರೆಂದು ಆರೋಪಿಸಿದ್ದರು. ಇವರು ಪತ್ರಕರ್ತ ಬಾಲಕ ಪ್ರತಾಪ ಸಿಂ[ಹ] ಸೇರಿದಂತೆ ರಾಜ್ಯದ ಅನೇಕ 'ಗಣ್ಯ ದೇಶಪ್ರೇಮಿ'ಗಳನ್ನು ಕೊಲ್ಲಲು ಸಂಚು ನಡೆಸಿದ್ದರೆಂತಲೂ ಸುದ್ದಿ ಹಬ್ಬಿಸಲಾಗಿತ್ತು.

ಇದೆಲ್ಲಾ ಎಂತಾ ಕಟ್ಟುಕತೆ ಎಂಬುದನ್ನು ಅದೇ ವಾರದ 'ಲಂಕೇಶ್' ಸಂಚಿಕೆಯಲ್ಲಿ 'ಎಸಿಪಿ ಜಿತೇಂದ್ರನ ಸಾಹಸವೂ ಉತ್ತರವಿಲ್ಲದ ಪ್ರಶ್ನೆಗಳು' ಎಂದ ತನಿಖಾ ವರದಿ ಪ್ರಕಟಿಸಿದ್ದೆವು. ಈಗ ಶಂಕಿತರ ತಂಡದ ಮಾಸ್ಟರ್ ಮೈಂಡ್ ಎಂದೇ ಬಿಂಬಿತನಾಗಿದ್ದ ರೆಹಮಾನ್ ಸಿದ್ದಕಿಯೇ ನಿರಪರಾಧಿ ಎಂದು ಬಿಡುಗಡೆಯಾಗುವ ಮೂಲಕ 'ಲಂಕೇಶ್'ನ ನಿಲುವು ಸರಿ ಇತ್ತೆಂಬುದು ಸಾಬೀತಾಗಿದೆ.

ಓರ್ವ ಸೈನಿಕನ ಹುಡುಕಾಟದಲ್ಲಿ ಗೋಚರಿಸಿದ ಮೆಚ್ಚುಗೆ ಮತ್ತು ದ್ವೇಷ

ವರ್ಷಕ್ಕೆ ಇಪ್ಪತ್ತೋ-ಮೂವತ್ತೋ ರೂಪಾಯಿ ನೀಡಿ ಚಂದಾದಾರರಾದರೆ ಆ ಪತ್ರಿಕೆ ವರ್ಷವಿಡೀ ಮನೆಗೆ ಬಂದು ತಲುಪುತ್ತಿತ್ತು. 'ಕಮ್ಯೂನಿಸಂ ಬಂದರೆ ಬಡವ ಶ್ರೀಮಂತ-ಅಂತಾ ಇರಲ್ಲವಂತೆ, ಎಲ್ಲರೂ ಒಂದೇ ಅಂತೆ' ಎನ್ನುವ ಮಾತು ಆಗೀಗ ಕಿವಿಗೆ ಬೀಳುತ್ತಿತ್ತಾದ್ದರಿಂದ ನಾನಂತೂ ಆಗಲೇ ಬಾಲಕ ಕಮ್ಯೂನಿಸ್ಟ್ ಆಗಿಹೋಗಿದ್ದೆ. ಊಟದ ಹಸಿವಿನ ಜೊತೆಗೆ ಓದಿನ ಹಸಿವು ಸೇರಿ ನಮ್ಮ ಸುತ್ತಮುತ್ತಲಿನ ಸಾಹುಕಾರರೆಲ್ಲಾ ನಮ್ಮ ಹಾಗೆ ಬಡವರಾದಂತೆ ಕಲ್ಪಿಸಿಕೊಂಡು ಆನಂದಿಸುತ್ತಾ ಆ ಪತ್ರಿಕೆಯ ಓದನ್ನು ಮುಂದುವರೆಸಿದಾಗ ಒಂದು ದಿನ ಈ ನಿಕ್ಕಂ ವಿಚಾರ ಓದಲು ಸಿಕ್ಕಿತು.

ನಿಜಕ್ಕೂ ಅದೊಂದು ರೋಮಾಂಚಕಾರಿ ಕ್ಷಣ.

ಈ ಜಗತ್ತಿನ ಇನ್ನೊಂದು ಮೂಲೆಯ ರಷ್ಯಾದ ಪತ್ರಿಕೆಯೊಂದರಲ್ಲಿ ದಕ್ಷಿಣ ಭಾರತದ ಕುಗ್ರಾಮವೊಂದರ ಅದರಲ್ಲೂ ನಮ್ಮೂರಿನ ಪಕ್ಕದ ಸೈನಿಕನ ಫೋಟೋ ಸಹಿತ ಪ್ರಿಂಟಾಗಿದ್ದ ಬರಹವು ನನಗೆ ಬೆರಗು ತಂದಿತ್ತು. 'Fidelity to their Internationalist duty' ಎಂಬ ಇಂಗ್ಲಿಷ್‌ನಲ್ಲಿದ್ದ ಅದನ್ನು ಕಷ್ಟಪಟ್ಟು ಓದಿ ನಂತರ ಇಷ್ಟಪಟ್ಟು ನನ್ನ ಟ್ರಂಕಿನಲ್ಲಿ ಎತ್ತಿಟ್ಟುಕೊಂಡಿದ್ದೆ. ಇದಾಗಿ ಎರಡು ದಶಕಗಳ ನಂತರ ಹಳೆಯದೇನನ್ನೋ ಹುಡುಕುತ್ತಿದ್ದಾಗ ಈ ನಗುಮೊಗದ ನಿಕ್ಕಂ ಮತ್ತೆ ಸಿಕ್ಕರು.



ಇಂದಿರಾ ಗಾಂಧಿ

ಈತನ ಸೈನಿಕ ಬದುಕಿನ ಕತೆ ಹೀಗಿವೆ.

ಬ್ರಿಟಿಷರ ಆಡಳಿತದ ಕಾಲದಲ್ಲಿ ಸುಬೇದಾರ್ ಆಗಿದ್ದ ನಾರಾಯಣ ರಾವ್ ನಿಕ್ಕಂ ಎರಡನೇ ವಿಶ್ವ ಮಹಾಯುದ್ಧದಲ್ಲಿ ಮೈತ್ರಿಕೂಟದ ಪರವಾಗಿ ಅಫಘಾನಿಸ್ತಾನ ಹಾಗೂ ಇರಾನ್‌ನಲ್ಲಿ ಹೋರಾಡಿದ್ದರು. ನಾಜಿ ಜರ್ಮನಿಯು ರಷ್ಯಾದ ಮೇಲೆ ದಾಳಿ ನಡೆಸಿದಾಗ ಬ್ರಿಟನ್

ನಿಕ್ಕಂರಿಗೆ ಇದು ಅವರ ಸೈನಿಕ ಬದುಕಿನ ಭಾಗವಾಗಿತ್ತು ನಿಜ. ಆದರೆ ಅನೇಕರು ಫ್ಯಾಸಿಸಂ ಹಾಗೂ ಸಾಮ್ರಾಜ್ಯವಾದದ ವಿರುದ್ಧದ ಹೋರಾಟಗಳಲ್ಲಿ ತಮ್ಮ ದೇಶ-ಭಾಷೆಗಳ ಗಡಿ ದಾಟಿ ಇಂಟರ್‌ನ್ಯಾಷನಲ್ ಬ್ರಿಗೇಡ್‌ಗಳಲ್ಲಿ ಸೇರಿ ಹೋರಾಡಿದ, ಪ್ರಾಣತೆತ್ತ ಘಟನೆಗಳೂ ಇವೆ. 1936 ರಿಂದ 1939 ರವರೆಗೆ ನಡೆದ ಸ್ಪೇನ್‌ನ ಸಿವಿಲ್‌ವಾರ್‌ನಲ್ಲಿ ಸ್ವತಃ ಇಂದಿರಾ ಗಾಂಧಿ ರಿಪಬ್ಲಿಕನ್ನರ ಪರವಾಗಿ ಹಾಗೂ ಸರ್ವಾಧಿಕಾರಿ ಜನರಲ್ ಫ್ರಾಂಕೊ ವಿರುದ್ಧ ಹೋರಾಡಿದ ಇಂಟರ್‌ನ್ಯಾಷನಲ್ ಬ್ರಿಗೇಡ್ ನಲ್ಲಿ ಸೇರಿ ಕೆಲಸ ಮಾಡಿದ್ದರು. ಮತ್ತದನ್ನು ನೆಹರೂ ಕೂಡ ಬೆಂಬಲಿಸಿದ್ದರು. ಇದೇ ಸಿವಿಲ್ ವಾರ್‌ನಲ್ಲಿ ಹೋರಾಡಿ ಮಡಿದ ಇನ್ನೊಬ್ಬ ಪ್ರಖ್ಯಾತನೆಂದರೆ ಕ್ರಿಸ್ಟೋಫರ್ ಕಾಡ್‌ವೆಲ್. ಬ್ರಿಟನ್‌ನ ಹೆಸರಾಂತ ಮಾರ್ಕ್ಸಿಸ್ಟ್ ಬುದ್ಧಿಜೀವಿ ಹಾಗೂ ಬರಹಗಾರನಾಗಿದ್ದ ಕಾಡ್‌ವೆಲ್ ಸ್ಪೇನ್‌ನ ನರಭಕ್ಷಕ ಫ್ರಾಂಕೋ ವಿರುದ್ಧ ಹೋರಾಡಲು ಸೀದಾ ಸ್ಪೇಯ್ ನೆಲಕ್ಕೆ ಕಾಲಿಟ್ಟು ಕೈಗೆ ಮೆಷಿನ್‌ಗನ್ ತೆಗೆದುಕೊಂಡಿದ್ದ. ಆ ಯುದ್ಧದಲ್ಲಿ ಕಾಡವೆಲ್ ಸತ್ತಾಗ ಅವನಿಗಿನ್ನೂ ಮೂವತ್ತು ವರ್ಷವಾಗಿತ್ತಷ್ಟೆ.



ಕಾಡ್‌ವೆಲ್

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರವಿದೆ.

ಈ ಮುಸ್ಲಿಂ ಯುವಕರು ಅರೆಸ್ಟ್ ಆಗಿದ್ದು ಕೇಂದ್ರ ಸರ್ಕಾರದ ಇಂಟಲಿಜೆನ್ಸ್ ಬ್ಯೂರೋ ನೀಡಿದ್ದ ಮಾಹಿತಿಯ ಕಾರಣದಿಂದ.

ನಡೆದಿದ್ದ ಅಸಲಿ ಸಂಗತಿ ಏನೆಂದರೆ...

ಈ ಬಂಧಿತ ಯುವಕರಲ್ಲಿ ಕೆಲವರು ಅಫಘಾನಿಸ್ತಾನಕ್ಕೋ, ಇರಾಕಿಗೊ ಹೋಗಿ ಅಲ್ಲಿ ಅಮೆರಿಕನ್ ಸೈನಿಕರ ವಿರುದ್ಧ ಹೋರಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು ಅಷ್ಟೆ!

War on Terrarism ಹೆಸರಲ್ಲಿ ಸ್ವತಃ ಅಮೆರಿಕಾ ದೇಶವೇ ಈಗ ಇರಾಕ್ ಹಾಗೂ ಅಫಘಾನಿಸ್ತಾನದಲ್ಲಿ ಸಾವಿರಾರು ಅಮಾಯಕ ನಾಗರೀಕರನ್ನು ಕೊಂದೆಸೆಯುತ್ತಿದೆಯಷ್ಟೆ. ಈ ಹತ್ಯೆ ದೌರ್ಜನ್ಯಗಳ ಬಗ್ಗೆ ಯಮನ್ ದೇಶ ಮೂಲದ 'Inspirer' ಎಂಬ ವೆಬ್‌ಸೈಟ್‌ನಲ್ಲಿ ಆಕ್ರೋಶಭರಿತ ವಿವರಗಳನ್ನು ಹಾಕುತ್ತಿರುತ್ತಾರೆ. ಬೆಂಗಳೂರಿನ ಈ ಯುವಕರಲ್ಲಿ ಕೆಲವರು ಯಾವಾಗಲೋ ಈ ವೆಬ್‌ಸೈಟ್‌ಗೆ ವಿಸಿಟ್ ಮಾಡಿಬಂದಿದ್ದು, ಇದೇ ವೆಬ್‌ಸೈಟ್ ಮೇಲೆ ಕಣ್ಣಿಟ್ಟಿರುವ IB ಗಮನಕ್ಕೆ ಬಂದಿತ್ತು. 'ಈ ಯುವಕರ ಬಗ್ಗೆ ಕೊಂಚ ನಿಗಾ ಇಡಿ' ಎಂದು IB ಸೂಚಿಸಿದ್ದೇ ತಡ, ಇಲ್ಲಿನ ಬಿಜೆಪಿ ಪೊಲೀಸರಿಗೆ ಥ್ರಿಲ್ ಆಗಿ ಅವರು ರೇಡು ಬಿದ್ದು ಎಲ್ಲರಿಗೂ ಟೆರರಿಸ್ಟ್ ಹಣೆಪಟ್ಟಿ ಹಾಕಿಬಿಟ್ಟರು.

ಈ ಪ್ರಕರಣದ ಉಳಿದ ವಿಚಾರಗಳು ಕೋರ್ಟ್‌ನಲ್ಲಿ ತೀರ್ಮಾನವಾಗಲಿದೆ ಬಿಡಿ. ಆದರೆ ಕೇಳಬೇಕಾದ ಪ್ರಶ್ನೆ ಏನೆಂದರೆ ಅಫಘಾನಿಸ್ತಾನ ಹಾಗೂ ಇರಾಕ್‌ನಲ್ಲಿ ಅಮೆರಿಕಾ ನಡೆಸುತ್ತಿರುವ ನರಮೇಧವನ್ನು ರೆಹಮಾನ್ ಸಿದ್ದಿಕಿ ಸೇರಿದಂತೆ ನಾವೆಲ್ಲರೂ ಯಾಕೆ ವಿರೋಧಿಸಬಾರದು?

ಅಮೆರಿಕನ್ನರ ವಿರುದ್ಧ ಹೋರಾಡಲು ಇಲ್ಲಿಂದ ಯಾರಾದರೂ ಹೋಗಿ ಭಾಗಿಯಾಗದಿದ್ದರೂ ಅಲ್ಲಿನ ನರಹತ್ಯೆ ದಮನದ ಕುರಿತಂತೆ ಸಿಗುವ ವೀಡಿಯೋ, ಪುಸ್ತಕ, ವೆಬ್‌ಸೈಟ್‌ಗಳನ್ನು ಯಾಕೆ ನೋಡಬಾರದು?

ಸ್ವತಃ ಭಯೋತ್ಪಾದಕರಾಗಿರುವ ಅಮೆರಿಕನ್ ಸೈನಿಕರನ್ನು ಇಲ್ಲಿ ವಿರೋಧಿಸಿದ ಮಾತ್ರಕ್ಕೆ ಅದು ಹೇಗೆ ಅಂತವರೆಲ್ಲಾ ಟೆರರಿಸ್ಟರಾಗಿ ಬಿಡುತ್ತಾರೆ?

ಅಫಘಾನಿಸ್ತಾನ ಹಾಗೂ ಇರಾಕ್‌ನಲ್ಲಿನ ಯುದ್ಧವನ್ನು ಅಮೆರಿಕಾ ತಾನೇ ಮೈಮೇಲೆಳೆದುಕೊಂಡಿದೆ. ಹಾಗೆಂದಮಾತ್ರಕ್ಕೆ ಈ ಯುದ್ಧ ನಮ್ಮ ಯುದ್ಧವೂ ಯಾಕಾಗಿಬಿಡಬೇಕು? ಅಂದು ನಾರಾಯಣ ನಿಕ್ಕಂ, ಇಂದಿರಾ ಗಾಂಧಿ, ಕಾಡ್‌ವೆಲ್ ಮುಂತಾದವರು ಫ್ಯಾಸಿಸಂ ವಿರುದ್ಧ ಇಂಟರ್‌ನ್ಯಾಷನಲ್ ಬ್ರಿಗೇಡ್ ಸೇರಿ ಹೋರಾಡಿದ್ದನ್ನು ಮೆಚ್ಚುವ ಜಗತ್ತು ಇಂದು ಅಮೆರಿಕನ್ ಫ್ಯಾಸಿಸ್ಟ್ ಆಕ್ರಮಣವನ್ನು ವಿರೋಧಿಸುವ ಅಭಿಪ್ರಾಯ ಹೊಂದಿದ್ದರೆಂಬ ಒಂದೇ ಕಾರಣಕ್ಕೆ ಇಲ್ಲಿನ ಯುವಕರನ್ನೇಕೆ ಟೆರರಿಸ್ಟರೆಂದು ಬ್ರಾಂಡ್ ಮಾಡುತ್ತಿದೆ!


ಹಾಗೆ ನೋಡಿದರೆ ಇಂಡಿಯಾದಲ್ಲಿ ಈಗ ಕಾಣಿಸಿಕೊಳ್ಳುತ್ತಿರುವ ಮುಸ್ಲಿಂ ಉಗ್ರ ಸಂಘಟನೆಗಳಿಗೆ ಎರಡು ಆಯಾಮಗಳಿವೆ. ಒಂದು, ಆಂತರಿಕವಾಗಿ ಹಿಂದುತ್ವವಾದಿ ಟೆರರಿಸ್ಟರು ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಬಿಟ್ಟೂಬಿಡದೆ ನಡೆಸುತ್ತಿರುವ ಹಲ್ಲೆ, ದೌರ್ಜನ್ಯ ಹಾಗೂ ಹತ್ಯೆಗಳಿಗೆ ಪ್ರತೀಕಾರವೆಂಬಂತೆ ವರ್ತಿಸುವುದು. ಇನ್ನೊಂದು ಅಂತರರಾಷ್ಟ್ರೀಯ ಆಯಾಮ ಹೊಂದಿರುವಂತದ್ದು.

ಅದು ಅರಬ್ ಜಗತ್ತಿನಲ್ಲಿ ಅಮೆರಿಕಾ ನಡೆಸುತ್ತಿರುವ ನರಹತ್ಯೆಗಳಿಗೆ ಹಾಗೂ ಅದಕ್ಕೆ ಬೆಂಬಲ ನೀಡುತ್ತಿರುವ ಇರಾಕ್, ಪಾಕಿಸ್ತಾನ್ ಮತ್ತು ಇಂಡಿಯಾದ ಸರ್ಕಾರಗಳ ನಿಲುವಿಗೆ ವಿರೋಧ ವ್ಯಕ್ತಪಡಿಸುವ ಪ್ರತಿಕ್ರಿಯೆಯಾಗಿದೆ. ನಾವು ಹಿಂದೂ ಟೆರರಿಸಂ ಹಾಗೂ ಅಮೆರಿಕನ್ ಟೆರರಿಸಂ ಅನ್ನು ನಿರ್ಲಕ್ಷಿಸಿ ಕೇವಲ ಇಸ್ಲಾಮಿಕ್ ಟೆರರಿಸಂ ಬಗ್ಗೆ ಹುಯಿಲೆಬ್ಬಿಸುವುದರಲ್ಲಿ ಅರ್ಥವಿಲ್ಲ.

→ 4

ಪ್ರಕಾಶ್ ಪಡುಕೋಣೆ ಮಗಳಿಗೆ ಹೇಳಿದ್ದು

"ಮನೇಲಿ ನೀನು ಮಗಳೇ ವಿನಃ ಸೂಪರ್ ಸ್ಟಾರ್ ಅಲ್ಲ"



ಸುಧಾ ಮೆನನ್ ಎಂಬ ಪತ್ರಕರ್ತೆ ಸಿದ್ಧಪಡಿಸಿರುವ ಹೊಸದೊಂದು ಪುಸ್ತಕ ಇನ್ನೇನು ಬಿಡುಗಡೆಯಾಗಲಿದೆ. ಇವತ್ತು ಸಿನಿಮಾ, ರಂಗಭೂಮಿ ಕ್ರೀಡೆ, ಬ್ಯುಸಿನೆಸ್ ರಂಗದಲ್ಲಿ ಹೆಸರು ಮಾಡಿರುವ ಪ್ರಖ್ಯಾತ ಮಹಿಳೆಯರ ಬಗ್ಗೆ ಅವರ ಪೋಷಕರು ಪತ್ರರೂಪದಲ್ಲಿ ಬರೆದಿರುವುದೆಲ್ಲಾ ಈ ಪುಸ್ತಕದಲ್ಲಿರುತ್ತದೆ.

ಅದರಲ್ಲಿ ನಟಿ ದೀಪಿಕಾ ಪಡುಕೋಣೆ ಬಗ್ಗೆ ತಂದೆ ಪ್ರಕಾಶ್ ಪಡುಕೋಣೆ ಹೇಳಿರುವುದು ಇಲ್ಲಿದೆ.

ದೀಪಿಕಾ,

ಸಿನಿಮಾ ಪ್ರೀತಿಯಿಂದಾಗಿಯೇ ನೀನು ಚಿತ್ರರಂಗದಲ್ಲಿದ್ದೀಯಾ ಎಂಬುದು ನಮಗೆ ಗೊತ್ತು. ನೀನು ಹತ್ತು ವರ್ಷದವಳಿದ್ದಾಗಲೇ ಮಾಡೆಲಿಂಗ್‌ನತ್ತ ಹೋಗುತ್ತಿ, ಸದಾ ಪ್ರಜ್ವಲಿಸುವ ಲೈಟ್‌ಗಳ ನಡುವೆ ಇರಲು ಬಯಸುತ್ತೀಯ ಅನಿಸಿತ್ತು. ನಿನಗೆ ಹದಿನೆಂಟು ವರ್ಷ ಆದಾಗ 'ಮಾಡೆಲಿಂಗ್‌ನಲ್ಲಿ ಅವಕಾಶ ಹುಡುಕಿಕೊಂಡು ಮುಂಬೈಗೆ ಹೋಗುತ್ತೇನೆಂದಿದ್ದೆ.' ನಿನ್ನ ನಿರ್ಧಾರವನ್ನು ಬೆಂಬಲಿಸಲು ನಮಗೆ ಕಷ್ಟವಾದರೂ ನಮಗೆ ಬೇರೆ ಆಯ್ಕೆ ಇರಲಿಲ್ಲ. ನೀನೀಗ ಯಶಸ್ವಿ ನಟಿಯಾಗಿದ್ದೀಯ. ಆದರೂ ನಮ್ಮ ಮನೆಗೆ ಬಂದಾಗ ನಾವು ನಿನ್ನನ್ನು ಸೂಪರ್ ಸ್ಟಾರ್ ತರ ಟ್ರೀಟ್ ಮಾಡುವುದಿಲ್ಲ. ಇಲ್ಲಿಗೆ ಬಂದಾಗ ನಿನ್ನ ಹಾಸಿಗೆ ಹೊದಿಕೆಗಳನ್ನು ನೀನೇ ಜೋಡಿಸಬೇಕು. ಊಟ ಮುಗಿಸಿದ ಮೇಲೆ ನಿನ್ನ ತಟ್ಟೆಯನ್ನು ನೀನೇ ಎತ್ತಿಡಬೇಕು. ನೀನು ಬಂದಿರುವಾಗ ಮನೆಯಲ್ಲಿ ಬೇರೆ ಅತಿಥಿಗಳೇನಾದರೂ ಇದ್ದರೆ ಅವರಿಗೆ ನಿನ್ನ ರೂಂ ಬಿಟ್ಟುಕೊಟ್ಟು ನೆಲದ ಮೇಲೂ ಮಲಗಬೇಕಾಗಬಹುದು. ನಮ್ಮ ಮನೆಯಲ್ಲಿದ್ದಾಗ ನೀನು ಸೂಪರ್‌ಸ್ಟಾರ್ ಅಲ್ಲ ಎಂಬುದನ್ನು ನೆನಪಿಡು. ನಾವು ನಿನಗೆ ಸದಾ ವಾಸ್ತವಕ್ಕೆ ಹತ್ತಿರವಿರುವುದನ್ನು ಮನಗಾಣಿಸಲು ಯತ್ನಿಸಿದ್ದೇವೆ. ನೀನು



ಪ್ರಜ್ವಲಿಸುವ ಬೆಳಕಿನ ಮಧ್ಯೆ ಇರುವಾಗ, ಯಶಸ್ಸಿನ ತುದಿಯಲ್ಲಿರುವಾಗ ಪ್ರತಿಯೊಬ್ಬರು ನೀನು ಹೇಳಿದಂತೆ ಮಾಡಲು ಸಿದ್ಧರಿರುತ್ತಾರೆ. ಆದರೆ ಸದಾ ನಿನ್ನನ್ನು ಹಿಂಬಾಲಿಸುವ ಕ್ಯಾಮರಾಗಳು ಒಂದು ದಿನ ನಿನ್ನ ಪಾಲಿಗೆ ಮಸುಕಾಗುತ್ತವೆ. ಆಗ ಏನು ಉಳಿದಿರುತ್ತದೋ ಅದೇ ವಾಸ್ತವ ಎಂಬುದನ್ನೂ ನೆನಪಿಟ್ಟುಕೊ. ನಾವು ನಿನ್ನನ್ನು ಸೂಪರ್ ಸ್ಟಾರ್ ತರ ಪರಿಗಣಿಸುತ್ತಿಲ್ಲ ಯಾಕೆ ಎಂದು ನಿನಗೆ ಆಶ್ಚರ್ಯವಾಗಿರಬಹುದು. ಆದರೆ ನೀನು ಮೊದಲು ನನ್ನ ಮಗಳು. ಆಮೇಲೆ ಸೂಪರ್ ಸ್ಟಾರ್ ಗೊತ್ತಾಯಿತೆ...


- ಪ್ರಖ್ಯಾತ ಬ್ಯಾಡ್ಮಿಂಟನ್ ಚಾಂಪಿಯನ್ ಆಗಿದ್ದ ಪ್ರಕಾಶ್ ಪಡುಕೋಣೆ ಸಭ್ಯ ಪ್ರಬುದ್ಧ ವ್ಯಕ್ತಿಯೂ ಹೌದಲ್ಲವೆ?

ಹೈದರಾಬಾದ್ ಪೊಲೀಸರಿಗೆ ಕೆಲವು ಪ್ರಶ್ನೆಗಳು

ಕಳೆದ ವಾರ ಹೈದರಾಬಾದಿನ ಜನನಿಬಿಡ ಪ್ರದೇಶದಲ್ಲಿ ಬಾಂಬ್‌ಗಳು ಸ್ಫೋಟಗೊಂಡು 16 ಜನ ಅಮಾಯಕರು ಬಲಿಯಾಗಿದ್ದರೆ ನೂರಾರು ಜನ ಗಾಯಗೊಂಡಿದ್ದಾರೆ. ಪೊಲೀಸರು ಸೂಕ್ತವಾದ ತನಿಖೆ ಮಾಡಿ ಈ ಅಮಾನುಷ ಕೃತ್ಯದ ಹಿಂದೆ ಇರುವವರನ್ನು ಬಂಧಿಸಿ ಅವರಿಗೆ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕಿದೆ. ಇದು ಎಲ್ಲಾ ಪ್ರಜ್ಞಾವಂತರ ಅಭಿಪ್ರಾಯ.

ಆದರೆ ಆಗುತ್ತಿರುವುದೇನು? ಪೊಲೀಸರು ಮತ್ತು ಮಾಧ್ಯಮಗಳು ವರ್ತಿಸುತ್ತಿರುವ ರೀತಿ ಹೇಗಿದೆ? ಎಂದು ನೋಡಿದರೆ ಆಘಾತವಾಗುತ್ತದೆ.

ಕಳೆದ ಗುರುವಾರ ನಿಮ್ಮ ಈ ಪತ್ರಿಕೆ ಮುದ್ರಣಕ್ಕೆ ಸಿದ್ಧವಾಗುತ್ತಿದ್ದಾಗ ಹೈದರಾಬಾದ್ ಬಾಂಬ್‌ಸ್ಫೋಟದ ಸುದ್ದಿ ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿತ್ತು. ಅವತ್ತಿನ ಮಟ್ಟಿಗೆ ಆ ಕೃತ್ಯದ ಹಿಂದೆ ಯಾರ ಕೈವಾಡ ಇರಬಹುದೆಂದು ಯಾರಿಗೂ ಗೊತ್ತಿರಲಿಲ್ಲ, ಆದರೆ ಮಾರನೆ ದಿನದ ಹೊತ್ತಿಗೆ ಅಲ್ಲಿನ ಪೊಲೀಸರು ಎಂದಿನಂತೆ ಹಲವು ಮುಸಲ್ಮಾನರನ್ನು



ಹೈದರಾಬಾದಿನ ಬಾಂಬ್ ಸ್ಫೋಟದಲ್ಲಿ ಮರಣಹೊಂದಿದ 30 ವರ್ಷ ವಯಸ್ಸಿನ ಯುವತಿ ಸ್ವಪ್ನಾ ರೆಡ್ಡಿಯ ಅಂತ್ಯಕ್ರಿಯೆ

ಬಂಧಿಸುತ್ತಾರೆಂದೂ, ಹಾಗೆಯೇ ಮಾಧ್ಯಮಗಳೂ ಎಂದಿನಂತೆ 'ಇಂಡಿಯನ್ ಮುಜಾಹಿದ್ದೀನ್', 'ಹೂಜಿ', 'ಲಷ್ಕರ್' ಎಂದೆಲ್ಲ ಅಬ್ಬರಿಸಲು ಪ್ರಾರಂಭಿಸುತ್ತವೆಂದೂ ನಾವೆಲ್ಲ ಆಫೀಸಿನಲ್ಲಿ ಚರ್ಚಿಸಿದೆವು. ನಾವು ನಿರೀಕ್ಷಿಸಿದ್ದಂತೆಯೇ ಎಲ್ಲವೂ ನಡೆಯಲಾರಂಭಿಸಿತು.

ಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳು ಈ ಬಾಂಬ್ ಸ್ಫೋಟದ ಹಿಂದೆ 'ಇಂಡಿಯನ್ ಮುಜಾಹಿದ್ದೀನ್', 'ಲಷ್ಕರ್' ಇದ್ದಾವೆಂದೂ, ಅವುಗಳು ಇಲ್ಲಿ ಹಲವಾರು 'ಸ್ಲೀಪರ್ ಸೆಲ್'ಗಳನ್ನು ಸ್ಥಾಪಿಸಿದ್ದು ಅವುಗಳ ಕಾರ್ಯಕರ್ತರು ಸೆಲ್‌ಗಳಲ್ಲಿ ಈ ಕೃತ್ಯವನ್ನು ಎಸಗಿದ್ದಾರೆಂದು ಮಾರನೆ ದಿನದಿಂದಲೇ ವರದಿ ಮಾಡಲಾರಂಭಿಸಿದವು. ಒಂದು ಇಂಗ್ಲಿಷ್ ಟಿವಿ ಚಾನೆಲ್ ಓರ್ವ ಗಡ್ಡದಾರಿಯ ಫೋಟೊ ತೋರಿಸಿ, ಆತ ಇಂಡಿಯನ್ ಮುಜಾಹಿದ್ದೀನಿನ ಸದಸ್ಯನೆಂದೂ, ಅವನೇ ಇದರ ಹಿಂದಿರುವನೆಂದೂ ಮತ್ತೆಮತ್ತೆ ಬಿತ್ತರಿಸಿತು. ಇದು ಪಾಕಿಸ್ತಾನದ 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಎಂಬ ಪತ್ರಿಕೆಯ ಗಮನವನ್ನು ಸೆಳೆಯಿತು. "ಅರೆರೆ, ಈ ಮುಖವನ್ನು ಎಲ್ಲೋ ನೋಡಿದ್ದೀನಲ್ಲ" ಎಂದು ಕುತೂಹಲಗೊಂಡ ಆ ಪತ್ರಿಕೆಯ ವರದಿಗಾರನೊಬ್ಬ ಕೊಂಚ ಕೆದಕಿ ನೋಡಿದಾಗ ಗೊತ್ತಾದ ಸಂಗತಿ ವಿಚಿತ್ರವಾಗಿತ್ತು. ಅದೇನೆಂದರೆ ಆ ಫೋಟೋ ಪಾಕಿಸ್ತಾನದ ರಾಜಕಾರಣಿ ಮಂಜರ್ ಇಮಾಮ್ ಎಂಬುವವನದ್ದಾಗಿದ್ದು, ಆತ ಸಿಂಧ್ ರಾಜ್ಯದ ವಿಧಾನಸಭೆಯಲ್ಲಿ ಶಾಸಕನಾಗಿದ್ದ. ಅದಕ್ಕಿಂತಲೂ ಮುಖ್ಯವಾದ ಅಂಶ ಯಾವುದೆಂದರೆ ಆ ಮಂಜರ್ ಇಮಾಮನನ್ನು ಒಂದು ತಿಂಗಳ ಹಿಂದೆಯೇ ತೆಹರೀಕ್ ಎ ತಾಲಿಬನ್ ಎಂಬ ಉಗ್ರಗಾಮಿ ಸಂಘಟನೆ ಕೊಂದು ಹಾಕಿತ್ತು.

ಎಲ್ಲಿಯ ಪಾಕಿಸ್ತಾನದ ಮಂಜರ್ ಇಮಾಮ್, ಎಲ್ಲಿಯ ಇಂಡಿಯನ್ ಮುಜಾಹಿದ್ದೀನ್, ಎಲ್ಲಿಯ ಹೈದರಾಬಾದ್ ಸ್ಫೋಟ, ಎಲ್ಲಿಯ ತಾಲಿಬಾನ್? ಒಂದಕ್ಕೊಂದು ಸಂಬಂಧವಿದೆಯಾ?

ಇದು ಮಾಧ್ಯಮಗಳ ಕಾರ್ಯವೈಖರಿಯಾದರೆ ಪೊಲೀಸರು ಎಂದಿನಂತೆಯೇ ವರ್ತಿಸಲಾರಂಭಿಸಿದರು. ಅವರು ಶಂಕಿಸಿ ಬಂಧಿಸಿದ ಪ್ರತಿಯೊಬ್ಬರೂ ಮುಸಲ್ಮಾನ ಸಮುದಾಯಕ್ಕೆ ಸೇರಿದವರೇ ಆಗಿದ್ದರು. ಹೈದರಾಬಾದ್ ಪೊಲೀಸರಂತೂ ತಮ್ಮ ಹೆಸರನ್ನು ಮರೆಮಾಚಿ ಮಾಧ್ಯಮಗಳ ಮೂಲಕ ಮುಸಲ್ಮಾನರತ್ತಲೇ ಎಲ್ಲರ ಗುಮಾನಿ ಹರಿಯುವಂತೆ ಸುದ್ದಿಗಳನ್ನು 'ಲೀಕ್' ಮಾಡಿದರು.

ವಿಚಿತ್ರವೆಂದರೆ, ಇದೇ ಹೈದರಾಬಾದಿನಲ್ಲಿರುವ ಮೆಕ್ಕಾ ಮಸೀದಿಯಲ್ಲಿ 2007ರಲ್ಲಿ ಬಾಂಬ್ ಸ್ಫೋಟಗೊಂಡು ಹನ್ನೊಂದು ಜನ ಸಾವನ್ನಪ್ಪಿದ್ದರು. ಆಗಲೂ ಅಲ್ಲಿನ ಪೊಲೀಸರು ಹತ್ತಾರು ಅಮಾಯಕ ಮುಸಲ್ಮಾನ ಯುವಕರನ್ನು ಬಂಧಿಸಿ ಅವರಿಗೆ ಚಿತ್ರಹಿಂಸೆ ನೀಡಿದ್ದರು. ಆದರೆ ಆ ನಂತರ ಗೊತ್ತಾಗಿದ್ದೇನೆಂದರೆ ಆ ಕೃತ್ಯದ ಹಿಂದೆ ಆರೆಸ್ಸೆಸ್‌ನ ಹಲವಾರು ಕಾರ್ಯಕರ್ತರು ಮತ್ತು ಕೆಲವು ನಾಯಕರೂ ಇದ್ದರೆಂಬುದು. ಮಾತ್ರವಲ್ಲ ಸ್ವಾಮಿ ಅಸೀಮಾನಂದ ಎಂಬ ಆರೆಸ್ಸೆಸ್ ಸಂಘಟನೆಯ ಪ್ರಮುಖ ವ್ಯಕ್ತಿ ದೆಹಲಿಯ ನ್ಯಾಯಾಲಯದ ಮುಂದೆ ತಾನು ಮತ್ತು ತನ್ನ ಸಂಗಡಿಗರು ಅಜ್ಮೇರ್‌ನಲ್ಲಿರುವ ದರ್ಗಾದಲ್ಲಿ, ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ ಮತ್ತು ಸಂಜೌತಾ ರೈಲಿನಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿದ್ದಾಗಿ ಒಪ್ಪಿಕೊಂಡಿದ್ದ. ಮಾತ್ರವಲ್ಲ ತಮ್ಮ ಇಂತಹ ಕೃತ್ಯದಿಂದಾಗಿ ಅಮಾಯಕ ಮುಸಲ್ಮಾನ ಯುವಕರು ಜೈಲುಪಾಲಾಗಿದ್ದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಿದ್ದ. ಇದಾದ ನಂತರ ಹೈದರಾಬಾದಿನ ಪೊಲೀಸರು ಅಂದು ಬಂಧಿಸಿದ್ದ ಮುಸಲ್ಮಾನ ಯುವಕರನ್ನು ಬಿಡುಗಡೆಗೊಳಿಸಿದ್ದರು.

ಆದರೂ ಈಗ ಅದೇ ಮುಸಲ್ಮಾನರನ್ನು ಬಂಧಿಸುತ್ತಿದ್ದಾರೆ. ಅಸೀಮಾನಂದ ಮತ್ತು ಆತನ ಹಿಂದುತ್ವವಾದಿ ಭಯೋತ್ಪಾದಕ ಆರೆಸ್ಸೆಸ್ ಸಂಘಟನೆಯ ಬಗ್ಗೆ ಗೊತ್ತಿದ್ದರೂ 2007ರಲ್ಲಿ ಮೆಕ್ಕಾ ಮಸೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿ ಆನಂತರ ನಿರಪರಾಧಿ ಎಂದು ಪೊಲೀಸರೇ ಬಿಡುಗಡೆ ಮಾಡಿದ್ದ ಮೊಹಮ್ಮದ್ ರಿಯಾಜುದ್ದೀನ್ ಎಂಬಾತನನ್ನು ಮತ್ತೆ ಬಂಧಿಸಿದ್ದಾರೆ. ಇದೆಂತಹ ತರ್ಕ.

ಪೊಲೀಸರ ಮತ್ತು ಮಾಧ್ಯಮಗಳ ಇಂತಹ ಪೂರ್ವಾಗ್ರಹ ನಿಲುವನ್ನು ಕಂಡು ರೋಸಿಹೋದ ಶಫೀಕ್ ರೆಹಮಾನ್ ಮಹಜಿರ್ ಎಂಬ ವಕೀಲರು ಹೈದರಾಬಾದಿನ ಪೊಲೀಸ್ ಕಮೀಷನರ್ ಅವರಿಗೆ ಒಂದು ಪತ್ರ ಬರೆದು-ಅದರಲ್ಲಿ 22 ಪ್ರಶ್ನೆಗಳನ್ನು ಕೇಳಿದ್ದಾರೆ. ಆ ಪತ್ರದ ಸಾರಾಂಶ ಹೀಗಿದೆ:

"ಪ್ರೀತಿಯ ಮಿಸ್ಟರ್ ಪೊಲೀಸ್ ಕಮೀಷನರ್,

ಪೊಲೀಸ್ ಕಮೀಷನರ್ ಆದ ತಾವು 'ಈ ಬಾಂಬ್ ಸ್ಫೋಟಗಳ ಹಿಂದೆ ಯಾರ ಕೈವಾಡ ಇದೆ ಎಂದು ಇನ್ನೂ ಗೊತ್ತಿಲ್ಲ' ಎಂದು ಹೇಳಿದ್ದೀರಿ ಎಂದು ಮಾಧ್ಯಮಗಳು ವರದಿ ಮಾಡಿವೆ. ಆದರೆ ಅದೇ ಮಾಧ್ಯಮಗಳು 'ಇದರ ಹಿಂದೆ ಇಂಡಿಯನ್ ಮುಜಾಹಿದ್ದೀನ್, ಲಷ್ಕರ್ ಕೈವಾಡ ಇದೆ ಎಂದು ಹೆಸರನ್ನು ಹೇಳಲು ಇಚ್ಛಿಸದ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ' ಎಂದೂ ವರದಿ ಮಾಡಿವೆ. ಇದರರ್ಥ ತಮಗಿಂತಲೂ ಮಾಧ್ಯಮದವರಿಗೆ ಈ ಕುರಿತು ಹೆಚ್ಚು ಮಾಹಿತಿ ಲಭ್ಯವಾಗಿವೆ ಎಂದಲ್ಲವೇ?

ನಾನು ಗಮನಿಸಿರುವಂತೆ ಮಾಧ್ಯಮಗಳಲ್ಲಿ ವರದಿ ಆಗಿರುವಂತೆ ಪೊಲೀಸರು ಬಂಧಿಸಿರುವವರ ಮತ್ತು ಶಂಕಿಸಿರುವ ಸಂಘಟನೆಗಳ ಹೆಸರುಗಳೆಲ್ಲ ಮುಸಲ್ಮಾನ ಹೆಸರುಗಳಾಗಿವೆ. ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ, ಆಡಳಿತಾಂಗ, ಕಾರ್ಯಾಂಗ ಮತ್ತು ಮಾಧ್ಯಮಗಳು ಪೂರ್ವಾಗ್ರಹಪೀಡಿತರಾಗಿರುವುದು ಎದ್ದು ಕಾಣಿಸುತ್ತಿದೆ. ಅವೆಲ್ಲವು ಮತ್ತೆ ಮುಸಲ್ಮಾನ ಸಮುದಾಯವನ್ನೇ ಗುರಿಯಾಗಿಸಿಕೊಂಡಿವೆ. ಭಾರತದಲ್ಲಿ ಇಂದು ರಾಜಕೀಯ ವ್ಯಾಖ್ಯಾನ ಎಷ್ಟು ಕುಸಿದಿದೆಯೆಂದರೆ ಅದರಲ್ಲಿ ಬುದ್ಧಿ, ಲಜ್ಜೆ, ಸತ್ಯ ಮತ್ತು ನ್ಯಾಯ ಎಂಬ ನಾಲ್ಕು ಮುಖ್ಯ ಅಂಶಗಳೇ ನಾಪತ್ತೆಯಾಗಿವೆ.

ಈ ಹಿಂದೆ ಭಯೋತ್ಪಾದನೆ ಆರೋಪದಲ್ಲಿ ಬಂಧಿಸಲ್ಪಟ್ಟಿದ್ದ ಮುಸಲ್ಮಾನರು ನಿರಪರಾಧಿಗಳು ಎಂದು ಗೊತ್ತಾದ ಮೇಲೂ, ಯಾವ ಕೃತ್ಯಕ್ಕೆ ಅವರನ್ನು ಬಂಧಿಸಲಾಗಿತ್ತೋ ಅದರ ಹಿಂದೂ ಮೂಲಭೂತವಾದಿ ಹಿಂದೂ ಸಂಘಟನೆಗಳ ಕೈವಾಡ ಇದ್ದದ್ದು ತನಿಖೆಯಿಂದ ಸಾಬೀತಾದ ಮೇಲೂ ಯಾಕೆ ಈಗ ಮುಸಲ್ಮಾನರನ್ನೇ ವಿಚಾರಣೆಗೆ, ತನಿಖೆಗೆ, ತಲಾಶೆಗೆ ಗುರಿಪಡಿಸಲಾಗಿದೆ? ಯಾಕೆ ನೀವು ಹಿಂದೂ ಭಯೋತ್ಪಾದಕ ಸಂಘಟನೆಗಳ ಬಗ್ಗೆ ಕಿಂಚಿತ್ತೂ ಶಂಕೆಯನ್ನು ಹೊಂದಿಲ್ಲ? ಯಾಕೆ ನೀವು ಬಂಧಿಸಿರುವವರಲ್ಲಿ ಒಬ್ಬನೇ ಒಬ್ಬ ಮುಸಲ್ಮಾನ ಅಲ್ಲದವನ ಹೆಸರಿಲ್ಲ?

ಕೇವಲ ಶಂಕೆಯ ಮೇಲೆ ಬಂಧಿಸಿರುವವರ ಹೆಸರುಗಳನ್ನೂ ಪೊಲೀಸರು ಬಹಿರಂಗಗೊಳಿಸಿರುವುದು ಎಷ್ಟು ಸರಿ? ಇಂತಹ ಭೀಕರ ಕೃತ್ಯದ ಆರೋಪ ಹೊತ್ತಿರುವುವವರು-ಆನಂತರ ನಿರಪರಾಧಿಗಳು ಎಂದು ಸಾಬೀತಾದರೂ-ಅವರ ಬದುಕಿನ ಮೇಲೆ ಇದೆಂತಹ ಪರಿಣಾಮ ಬೀರುತ್ತದೆಂದು ತಮಗೆ ಗೊತ್ತಿಲ್ಲವೇ?

ಪೊಲೀಸರು ಸಿಸಿಟಿವಿ ಕ್ಯಾಮೆರಾಗಳಲ್ಲಿರುವ ದೃಶ್ಯಗಳನ್ನು ಇನ್ನೂ ಪರಿಶೀಲಿಸುತ್ತಿರುವಾಗ ಮುಸಲ್ಮಾನರತ್ತ ಮಾತ್ರ ಎಲ್ಲರ ಗುಮಾನಿ ಕೇಂದ್ರೀಕೃತವಾಗುವಂತೆ ಪೊಲೀಸರು ಮಾಡುವುದು ಎಷ್ಟು ಸರಿ? ಅಥವಾ ಮುಸಲ್ಮಾನರು ಮಾತ್ರ ಇಂತಹ ಕೃತ್ಯಗಳ ಹಿಂದಿರಲು ಸಾಧ್ಯ, ಬೇರೆಯವರ ಪಾತ್ರವನ್ನು ತನಿಖೆಗೆ ಒಳಪಡಿಸುವ ಅಗತ್ಯವೇ ಇಲ್ಲ ಎಂದು ಪೊಲೀಸರು ಮುಂಚಿತವಾಗಿಯೇ ನಿರ್ಧರಿಸಿದ್ದಾರೆಯೇ?



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್


ಈ ಹಿಂದೆ ಸಂಜೌತಾ ರೈಲು, ಅಜ್ಮೇರ್ ದರ್ಗಾ, ಮಾಲೆಗಾಂವ್, ಹೈದರಾಬಾದ್ ಮತ್ತು ಇತರ ಕಡೆಗಳಲ್ಲಿ ಸಂಭವಿಸಿದ ಭಯೋತ್ಪಾದಕ ಕೃತ್ಯಗಳ ಹಿಂದೆ ಬಲಪಂಥೀಯ ಹಿಂದೂ ಗುಂಪುಗಳ ಕೈವಾಡ ಇದ್ದದ್ದನ್ನು ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ಪತ್ತೆಹಚ್ಚಿದೆ. ಹಾಗಿದ್ದೂ ಅಂತಹ ಸಂಘಟನೆಗಳನ್ನಾಗಲಿ, ಅವುಗಳ ಸದಸ್ಯರನ್ನಾಗಲಿ ಈ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ತಾವು ಯಾಕೆ ವಿಚಾರಣೆಗೆ ಒಳಪಡಿಸುತ್ತಿಲ್ಲ?

ಹಲವು ಮಾಧ್ಯಮಗಳು ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸುವ ಬಗ್ಗೆ ತಮಗೆ ಆಸಕ್ತಿ ಇಲ್ಲ ಎಂದು ವರದಿ ಮಾಡಿವೆ. ನೀವು ಯಾಕೆ ಇಂತಹ ಹಿಂಜರಿಕೆಯನ್ನು ತೋರುತ್ತಿದ್ದೀರಿ? ಅಕಸ್ಮಾತ್ ಎನ್‌ಐಎ ತನಿಖೆ ಮಾಡಿದರೆ ಬಹುಸಂಸ್ಕೃತಿಯನ್ನು ಒಪ್ಪದ, ಜಾತ್ಯತೀತ ಸಿದ್ಧಾಂತವನ್ನು ತಿರಸ್ಕರಿಸುವ, ಸಹಿಷ್ಣುತೆಯನ್ನು ವಿರೋಧಿಸುವ ಹಲವು ಭಾರತೀಯ ಸಂಘಟನೆಗಳಿಗೆ ಇರುಸುಮುರುಸಾಗುತ್ತದೆ ಎಂದೇ?

ಇವತ್ತು ಏಳು ಭಾರತೀಯರಲ್ಲಿ ಒಬ್ಬ ಮುಸಲ್ಮಾನ, ಜಗತ್ತಿನಾದ್ಯಂತ ಇರುವ ಎಂಟು ಮುಸಲ್ಮಾನರಲ್ಲಿ ಒಬ್ಬ ಭಾರತದ ನಿವಾಸಿ, ಪ್ರಸ್ತುತ ಭಾರತದಲ್ಲಿ 200 ಮಿಲಿಯನ್ ಮುಸಲ್ಮಾನರು ವಾಸಿಸುತ್ತಿದ್ದು ಬೇರೆ ಸಮುದಾಯದವರು ಹೇಗೆ ಭಾರತೀಯರೋ ಮುಸಲ್ಮಾನರೂ ಭಾರತೀಯರೆ. ಇದು ಪೊಲೀಸರಿಗೆ ಅರ್ಥವಾಗುದಿಲ್ಲವೇ?"

ಮೊನ್ನೆಯ ತನಕ ಭಯೋತ್ಪಾದಕ, ಲಷ್ಕರ್ ಎ ತೋಯಿಬಾ ಮತ್ತು ಹೂಜಿ ತರಹದ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವವನು, ಹಲವು ಪ್ರಮುಖ ಕನ್ನಡಿಗರನ್ನು ಕೊಲ್ಲಲು ಸಂಚು ರೂಪಿಸಿದ್ದವನು, ಜಿಹಾದಿ ಸಾಹಿತ್ಯವನ್ನು ಪ್ರಚಾರ ಮಾಡುತ್ತಿದ್ದವನು ಎಂದೆಲ್ಲ ಆರೋಪಗಳನ್ನು ಅಮಾಯಕ ಮತಿ ಉರ್ ರೆಹಮನ್ ಸಿದ್ಧಿಕಿ ಎಂಬ ಯುವಕನ ವಿರುದ್ಧ ನಮ್ಮ ಪೊಲೀಸರು ಮಾಡಿದ್ದರು. ಆದರೆ ಅದೆಲ್ಲ ಕಪೋಲಕಲ್ಪಿತ ಎಂದೂ, ಆತನ ವಿರುದ್ಧ ಪೊಲೀಸರ ಬಳಿ ಯಾವುದೇ ಸಾಕ್ಷ್ಯಾಧಾರಗಳಿಲ್ಲವೆಂದೂ ಎನ್‌ಐಎ ಆತನನ್ನು ಆರೋಪಮುಕ್ತನನ್ನಾಗಿಸಿದೆ. ಈ ಹಿನ್ನೆಲೆಯಲ್ಲಿ ಹೈದರಾಬಾದಿನ ವಕೀಲ ಶಫೀಕ್ ರೆಹಮಾನ್ ಮಹಜಿರ್ ಕೇಳುತ್ತಿರುವ ಪ್ರಶ್ನೆಗಳನ್ನು ನಾವೆಲ್ಲರೂ ಕೇಳಬೇಕಿದೆ. ■

ಆದಿಚುಂಚನಗಿರಿ ವಿಲ್ ವಿವಾದ




ಚುಂಚನಗಿರಿ ಮಠದ ಬಾಲಗಂಗಾಧರ ಸ್ವಾಮಿಗಳು ಕಾಲಭೈರವನ ಪಾದ ಸೇರಿಕೊಂಡು ಇನ್ನೂ ಸರಿಯಾಗಿ ಎರಡು ತಿಂಗಳೂ ಕಳೆದಿಲ್ಲ, ಶ್ರೀಮಠದ ಅನುಯಾಯಿಗಳು, ಭಕ್ತಾದಿಗಳು ಸ್ವಾಮಿಗಳ ಅಗಲಿಕೆಯ ನೋವಿನಿಂದ ಇನ್ನೂ ಹೊರಬಂದಿಲ್ಲ, ಆದರೆ ಮಠದ ನಡುಮನೆಯಲ್ಲಿ ಕೂತಿರುವವರಿಗೂ ಹಾಗೂ ಪಡಸಾಲೆಯಲ್ಲಿ ಕಾದು ಕೂತಿರುವವರಿಗೂ ನಡುವಿನ ಸಂಘರ್ಷ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ.


ಈ ಸಂಘರ್ಷ ಮಠದ ಕಾರ್ಯಕಲಾಪಗಳನ್ನು, ಸೇವಾಕಾರ್ಯಗಳನ್ನು ಇನ್ನೂ ಎಷ್ಟು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂಬ ಬಗ್ಗೆಯಂತೂ ಅಲ್ಲ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ, ಹಾಗಿದ್ದರೆ ಈ ಸಂಘರ್ಷಕ್ಕೆ ಕಾರಣ ಏನಿರಬಹುದು?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮುಂಚೆ ಚುಂಚನಗಿರಿ ಮಠದ ಆಸ್ತಿ ಪಾಸ್ತಿ ವಹಿವಾಟುಗಳ ಕಡೆ ಒಮ್ಮೆ ಕಣ್ಣು ಹಾಯಿಸೋಣ. ಎರಡು ಮೆಡಿಕಲ್ ಕಾಲೇಜುಗಳು, ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳು, 10 ಸಿ.ಬಿ.ಎಸ್.ಸಿ ಸ್ಕೂಲ್‌ಗಳು, ಆಯುರ್ವೇದ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು, ನರ್ಸಿಂಗ್ ಕಾಲೇಜುಗಳನ್ನೂ ಒಳಗೊಂಡಂತೆ 400 ಶಿಕ್ಷಣ ಸಂಸ್ಥೆಗಳು ಇಂದು ಮಠದ ಅಧೀನದಲ್ಲಿವೆ. ಬೆಂಗಳೂರು ಒಂದರಲ್ಲೇ ಸುಮಾರು 500 ಎಕರೆಗಳಿಗೂ ಹೆಚ್ಚಿನ ಜಮೀನು ಮಠದ ವಶದಲ್ಲಿದೆ. ಇನ್ನೂ ಜಿಲ್ಲಾ ಶಾಖಾ ಮಠಗಳ ಆಸ್ತಿಗಳಿಗೆ ಲೆಕ್ಕವೇ ಇಲ್ಲ.

ಇವುಗಳಲ್ಲದೆ ಹೊರ ರಾಜ್ಯಗಳಲ್ಲೂ, ವಿದೇಶಗಳಲ್ಲೂ ಬಾಲಗಂಗಾಧರ ಸ್ವಾಮಿಗಳು ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಇವುಗಳ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು 20,000 ಕೋಟಿಗಳಿರಬಹುದೆಂದು ಒಂದು ಅಂದಾಜು. ಈ ಎಲ್ಲ ಆಸ್ತಿಪಾಸ್ತಿಗಳು, ವಹಿವಾಟುಗಳನ್ನು ನೋಡಿಕೊಳ್ಳಲು ಆದಿಚುಂಚನಗಿರಿ ಟ್ರಸ್ಟ್ ಮತ್ತು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಎಂಬ ಎರಡು ಸೇವಾ ಟ್ರಸ್ಟ್‌ಗಳನ್ನು ದಿವಂಗತ ಸ್ವಾಮಿಗಳು ರೂಪಿಸಿದ್ದರು. ಪ್ರತಿವರ್ಷ ನೂರಾರು ಕೋಟಿ ಆದಾಯವಿರುವ ಮಠದ ವ್ಯವಹಾರಗಳನ್ನು ಇಂದಿಗೂ ಈ ಟ್ರಸ್ಟ್‌ಗಳೇ ನಿಯಂತ್ರಿಸುತ್ತಿವೆ. ಆದರೆ ಈ ಟ್ರಸ್ಟ್‌ಗಳನ್ನು ಈಗ ಯಾರು ನಿಯಂತ್ರಿಸುತ್ತಿದ್ದಾರೆ ಎಂಬುದೇ ಅಸಲಿ ಪ್ರಶ್ನೆ.



ಒಂದು ವೇಳೆ ಬಾಲಗಂಗಾಧರರು ತಾವು ಬದುಕಿದ್ದಾಗಲೇ, ತಾವು ತೀರಿಕೊಂಡನಂತರ ಪೀಠಾಧಿಪತಿ ಯಾರಾಗಬೇಕು ಎಂಬುದನ್ನು ನಿರ್ಣಯಿಸದೇ ಹೋಗಿದ್ದರೆ, ಈ ವಿಷಯ ಇಷ್ಟರಲ್ಲೇ ಭಾರೀ ವಿವಾದವಾಗಿ ಹಾದಿಬೀದಿ ಕದನವಾಗಿಬಿಡುತ್ತಿತ್ತು, ಆದರೆ ಅದ್ಯಾವುದಕ್ಕೂ ಆಸ್ಪದ ಕೊಡದೆ ನಿರ್ಮಲಾನಂದನಾಥರನ್ನು ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿಟ್ಟಿದ್ದ ಸ್ವಾಮಿಗಳ ನಿರ್ಧಾರವನ್ನು ಇಡೀ ಭಕ್ತಸಮೂಹ ಹಾಡಿಹೊಗಳುತ್ತಿದೆ. ಯಾಕೆಂದರೆ ಈಗಿನ ಮಠದ ಪರಿಸ್ಥಿತಿಯಲ್ಲಿ ನಿರ್ಮಲಾನಂದರೇ ಸೂಕ್ತ ಆಯ್ಕೆ ಎಂಬುದರಲ್ಲಿ ಯಾರಿಗೂ ಎರಡು ಮಾತಿಲ್ಲ, ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಲ್ಲ ಪಕ್ಷಗಳ ಒಕ್ಕಲಿಗ ನಾಯಕರೂ ಈ ಆಯ್ಕೆಯನ್ನು ಒಪ್ಪಿದ್ದಾರೆ. ಆದರೆ ಸಮಸ್ಯೆಯಿರುವುದು ಅಲ್ಲಲ್ಲ, ಶ್ರೀಮಠದ ಅನಭಿಷಕ್ತ ದೊರೆಯಾಗಿ ಆಯಕಟ್ಟಿನ ಜಾಗದಲ್ಲಿ ವಿರಾಜಮಾನರಾಗಿರುವ ಶೇಖರ್‌ಸ್ವಾಮಿ ಅಲಿಯಾಸ್ ಪ್ರಕಾಶನಾಥ ಸ್ವಾಮಿ ಎಂಬ ಆಸಾಮಿಯ ಬಗ್ಗೆ ಬಹುತೇಕ ಭಕ್ತಾದಿಗಳಲ್ಲಿ ನಾನಾ ಅನುಮಾನಗಳು ಹೊಗೆಯಾಡುತ್ತಿವೆ.



ಶೇಖರ್ ಸ್ವಾಮಿ

ಮಠದ ಅನುಯಾಯಿಗಳ ಆತಂಕಕ್ಕೆ ಕಾರಣವಾಗಿರುವ ಪ್ರಮುಖ ಅಂಶ ಸ್ವಾಮೀಜಿಯವರ ವಿಲ್‌ಗೆ ಸಂಬಂಧಿಸಿದ್ದು. ಸ್ವಾಮಿಗಳು ಮರಣಪೂರ್ವದಲ್ಲೇ ತಮ್ಮ ಮರಣ ಶಾಸನ ಅಥವಾ ಉಯಿಲನ್ನು ಮಾಡಿಸಿ ಬ್ಯಾಂಕ್ ಲಾಕರ್ ಒಂದರಲ್ಲಿ ಭದ್ರವಾಗಿರಿಸಿದ್ದರೆಂದೂ, ಅದರ ಪ್ರಕಾರವೇ ನಿರ್ಮಲಾನಂದರು ಪೀಠಾರೋಹಣ ಮಾಡಿದರೆಂಬುದು ತಿಳಿದಿರುವ ಸಂಗತಿ. ಆದರೆ ಈ ಉಯಿಲಿನ ಬಗ್ಗೆ ಯಾರಿಗೂ ತಿಳಿಯದ ಅನೇಕ ಸಂಗತಿಗಳಿವೆ. ಸದರಿ ಉಯಿಲಿನ ಪೂರ್ಣಪಾಠ ಆಯಕಟ್ಟಿನ ಸ್ಥಾನದಲ್ಲಿರುವವರಿಗೆ ಹೊರತುಪಡಿಸಿದರೆ ಇದುವರೆಗೂ ಬೇರೆ ಯಾರಿಗೂ ಗೊತ್ತಿಲ್ಲ.

ಸ್ವಾಮಿಗಳು ನಿಧನರಾದ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಸುದ್ದಿಯಾದ ಪ್ರಕಾರ ಸದರಿ ವಿಲ್ 29 ಪುಟಗಳಷ್ಟಿದೆ. ಆದರೆ ನಿರ್ಮಲಾನಂದರೇ ಉತ್ತರಾಧಿಕಾರಿಯಾಗಿರಬೇಕು ಎಂಬ ಒಂದು ಅಂಶವನ್ನು ಹೊರತುಪಡಿಸಿ ಇಪ್ಪತ್ತೊಂಬತ್ತು ಪುಟಗಳಲ್ಲಿ ಏನೇನು ಅಂಶಗಳಿವೆ ಎಂಬುದು ಒಂದು ಚಿದಂಬರ ರಹಸ್ಯವಾಗಿ ಉಳಿದಿದೆ. ಹೀಗಾಗಿ ಮಠದ ಅನುಯಾಯಿಗಳಲ್ಲಿ ಸಹಜವಾಗಿ ನಾನಾ ಗುಮಾನಿಗಳು, ಊಹಾಪೋಹಗಳು ತಲೆಯೆತ್ತಿವೆ.

ಹೆಚ್ಚಿನ ಆದಾಯ ಬರುವ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯ ಚುಕ್ಕಾಣಿಯನ್ನು ಶೇಖರ್ ಸ್ವಾಮಿ ಹಿಡಿದುಕೊಂಡಿದ್ದಾನೆಂದೂ, ಹೀಗೆ ಮಠದ ಸಂಪನ್ಮೂಲಗಳು ಬೇಕಾಬಿಟ್ಟಿಯಾಗಿ ದುರುಪಯೋಗವಾಗುತ್ತಿವೆ ಎಂಬ ಭಕ್ತರ ಕೂಗಿಗೆ ಸಮಾಧಾನ ಹೇಳುವವರು ಯಾರೂ ಇಲ್ಲ, ಸ್ವತಃ ಶೇಖರ್ ಸ್ವಾಮಿಯೂ ಈ ಬಗ್ಗೆ ಬಾಯಿಬಿಚ್ಚುತ್ತಿಲ್ಲ ಎಂಬುದು ಒಂದು ಬಣದ ಆರೋಪ.

ಮಠದ ಯಾವ ಯಾವ ಸಂಸ್ಥೆಗಳ ಆಡಳಿತದ ಉಸ್ತುವಾರಿ ಯಾರದ್ದಾಗಿರಬೇಕು ಎಂಬ ಅಂಶಗಳೇನಾದರೂ ಈ ಉಯಿಲಿನಲ್ಲಿ ಸ್ಪಷ್ಟವಾಗಿ ನಮೂದಾಗಿತ್ತೇ? ಇದರ ವಿವರಗಳು ಬಹಿರಂಗಗೊಂಡರೆ ತಮ್ಮ ಸ್ಥಾಪಿತ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದು ಆಯಕಟ್ಟಿನ ಸ್ಥಾನದಲ್ಲಿರುವವರಿಗೆ ಆತಂಕವಿದೆಯೆ? ಯಾವುದೇ ದುರುದ್ದೇಶಗಳಿಲ್ಲವಾದರೆ ಸ್ವಾಮಿಯವರು ಬರೆದಿಟ್ಟಿದ್ದ ಉಯಿಲನ್ನು ಮುಕ್ತವಾಗಿ ಮಠದ ಭಕ್ತಾದಿಗಳ ಮುಂದಿಡಲು ಇರುವ ಅಡ್ಡಿಯಾದರೂ ಏನು? ಅಥವಾ ಆ ಉಯಿಲನ್ನು ನಿಗೂಢವಾಗಿಡಲೇಬೇಕೆಂದು ಸ್ವಾಮಿಯವರು ಬರೆದಿದ್ದಾರೆಯೆ? ಹಾಗಿದ್ದರೆ ಅಂಥಾ ಜರೂರತ್ತಾದರೂ ಏನು? ಹೀಗೆ ಈ 29 ಪುಟಗಳ ಉಯಿಲಿನ ನಿಗೂಢತೆಯ ಬಗ್ಗೆ ಪ್ರಶ್ನೆಗಳ ಸರಮಾಲೆಯೇ ಏಳುತ್ತಿದೆ.

ಮಠದ ಮೂಲಗಳೇ ಹೇಳುವಂತೆ ವ್ಯವಹಾರದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಟ್ರಸ್ಟ್‌ಗೆ ಟ್ರಸ್ಟಿಗಳಾಗಿ ಇತ್ತೀಚಿನ ಹೊಸ ಸೇರ್ಪಡೆಯಾಗಿರುವವರು ಇಬ್ಬರೇ ವ್ಯಕ್ತಿಗಳು. ಒಬ್ಬರು ಪೀಠಾಧಿಪತಿಯಾಗಿರುವ ಶ್ರೀ ನಿರ್ಮಲಾನಂದ ಸ್ವಾಮಿ, ಇನ್ನೊಬ್ಬರು ಪ್ರಕಾಶನಾಥ ಅಲಿಯಾಸ್ ಶೇಖರ್‌ಸ್ವಾಮಿ. ನಿರ್ಮಲಾನಂದರು ಟ್ರಸ್ಟಿಯಾಗಬೇಕಾದದ್ದು ಅನಿವಾರ್ಯ ಹಾಗೂ ಅತ್ಯಂತ ನ್ಯಾಯಯುತವಾಗಿದೆ. ಈ ಬಗ್ಗೆ ಯಾರೂ ಪ್ರಶ್ನಿಸುತ್ತಿಲ್ಲ, ಆದರೆ ಈಗಾಗಲೇ ವಿವಾದಿತ ವ್ಯಕ್ತಿಯೆನಿಸಿಕೊಂಡಿರುವ ಶೇಖರ್ ಸ್ವಾಮಿಯನ್ನು ಟ್ರಸ್ಟ್‌ನಲ್ಲಿ ಪ್ರತಿಷ್ಠಾಪಿಸಿದ್ದರ ಬಗ್ಗೆ ನಾನಾ ಅಪಸ್ವರಗಳು ಕೇಳಿಬಂದಿವೆ.

ಮಂಡ್ಯದ ಅನುಯಾಯಿಗಳು ಹೇಳುವ ಪ್ರಕಾರ, ಮಠದ ವ್ಯವಹಾರ, ಆದಾಯ, ಕಾರ್ಯಕಲಾಪಗಳ ಬಗ್ಗೆ ಶೇಖರ್ ಸ್ವಾಮಿಯನ್ನು ಅಂಬರೀಷ್ ಅವರು ಪ್ರಶ್ನಿಸಿದರಂತೆ. ಆಗ ಶೇಖರ್ ಸ್ವಾಮಿ ಹೇಳಿದ್ದೇನು ಗೊತ್ತೆ? ಮಠದ ಅಭಿವೃದ್ಧಿಗಾಗಿ ಈಗಾಗಲೇ 1000 ಕೋಟಿಯಷ್ಟು ಸಾಲ ತಂದಿದ್ದೇನೆ. ಆ ಸಾಲ ತೀರಿಸೋದೇ ಕಷ್ಟ ಇದೆ, ಇನ್ನು ಆದಾಯ ಎಲ್ಲಿಂದ ಬರಬೇಕು ಅಂದರಂತೆ. ಈ ಸುದ್ದಿ ಭಕ್ತಾದಿಗಳ ನಡುವೆ ಹರಡಿ ಅವರ ಅನುಮಾನ ಮತ್ತಷ್ಟು ಗಟ್ಟಿಯಾಗಿಬಿಟ್ಟಿದೆ.

ಶೇಖರ್‌ಸ್ವಾಮಿಯ ನಡವಳಿಕೆಗಳೂ ಭಕ್ತಾದಿಗಳ ಅನುಮಾನವನ್ನು ಮತ್ತಷ್ಟು ಹೆಚ್ಚಿಸುವಂತೆಯೇ ಇವೆ.

ಉತ್ತರವಿಲ್ಲದ ಪ್ರಶ್ನೆಗಳು

ಮಠದ ಆಂತರಿಕ ವ್ಯವಹಾರದ ಬಗ್ಗೆ ಅನುಮಾನ ವ್ಯಕ್ತಪಡಿಸಿರುವವರಲ್ಲಿ ಹಲವು ಗಣ್ಯ ವ್ಯಕ್ತಿಗಳೇ ಇದ್ದಾರೆ. ಅವರಲ್ಲಿ ಮಾಜಿ ಸಚಿವ ಎಚ್.ಟಿ.ಕೃಷ್ಣಪ್ಪ ಕೂಡ ಒಬ್ಬರು. ಅವರು ದಿನಾಂಕ 30-01-2013ರಂದು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆದಿದ್ದಾರೆ. ಅದರ ಒಂದು ಪ್ರತಿಯನ್ನು ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣರಿಗೂ ಕಳಿಸಿದ್ದಾರೆ. ಆ ಪತ್ರದಲ್ಲಿ ಕೃಷ್ಣಪ್ಪನವರು 29 ಪುಟಗಳ ಉಯಿಲನ್ನು ಬಹಿರಂಗಪಡಿಸದೆ ನಿಗೂಢವಾಗಿಟ್ಟಿರುವ ಕ್ರಮವನ್ನು ಪ್ರಶ್ನಿಸಿದ್ದಾರೆ. ಉಯಿಲಿನ ಪೂರ್ಣಪಾಠವನ್ನು ಜನತೆಯ ಮುಂದಿಡಬೇಕೆಂದು ಆಗ್ರಹಿಸಿದ್ದಾರೆ.

ಇದೇ ಫೆಬ್ರವರಿ 11 ರಂದು ಮಂಡ್ಯದ ಧರಣಿ ಮೀಡಿಯಾ ಸಂಸ್ಥೆಯ ಆನಂದ್ ಎಂಬುವವರು ಶೇಖರ್ ಸ್ವಾಮಿಗೆ ಪತ್ರ ಬರೆದು ಮಠದ ವ್ಯವಹಾರಗಳನ್ನು ತಿಳಿದುಕೊಳ್ಳುವ ಹಕ್ಕು ಸಾಮಾನ್ಯ ಭಕ್ತರಿಗಿದೆ. ಆದ್ದರಿಂದ ಅದಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸುವಂತೆ ಆಗ್ರಹಿಸಿದ್ದಾರೆ. ಬೃಹತ್ ಹೆಮ್ಮರವಾಗಿ ಬೆಳೆದಿರುವ ಮಠವನ್ನು ಕೆಲವೇ ವ್ಯಕ್ತಿಗಳು ನಿಯಂತ್ರಿಸುವಂತಾಗಿರುವುದರಿಂದ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಆಕ್ಷೇಪವನ್ನೂ ಎತ್ತಿದ್ದಾರೆ. ಆದರೆ ಈ ಪ್ರಶ್ನೆಗಳಿಗೆ ಉತ್ತರ ಕೊಡುವವರು ಯಾರು ಎಂಬುದೇ ಅಸಲಿ ಪ್ರಶ್ನೆ. ಈ ನ್ಯಾಯಯುತ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಸಿಗದೆ ಹೋದಲ್ಲಿ ಭವಿಷ್ಯದಲ್ಲಿ ಮತ್ತಷ್ಟು ಗೊಂದಲಗಳಿಗೆ ಕಾರಣವಾಗುವುದರಿಂದ ಸಂಬಂಧಪಟ್ಟವರು ಬಾಯಿಬಿಚ್ಚಿ ಮಾತಾಡಲು ಇದು ಸೂಕ್ತ ಸಂದರ್ಭ. ಮಠದ ವ್ಯವಹಾರಗಳು ಪಾರದರ್ಶಕವಾಗುತ್ತವೋ? ಅಥವಾ ಇದೇ ನಿಗೂಢತೆ ಮುಂದುವರೆಯುತ್ತದೆಯೋ ಎಂಬುದನ್ನು ಕಾಲವೇ ಹೇಳಬೇಕು.

ಅವರ ಐಷಾರಾಮಿ ದುಂದುವೆಚ್ಚಗಳ ಬಗ್ಗೆ ಹಲವರು ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಶೇಖರ್ ಸ್ವಾಮಿ ಮಠದ ಹೆಲಿಕಾಪ್ಟರ್ ಬಳಸಿ ನೇಪಾಳಕ್ಕೆ ಪ್ರವಾಸ ಹೋಗಿಬಂದರೆಂದು, ಹೀಗಾದರೆ ಮಠದ ಮುಂದಿನ ಭವಿಷ್ಯ ಏನು ಎಂಬುದು ಮುಗ್ಧ ಭಕ್ತರ ಪ್ರಶ್ನೆ. ಇಲ್ಲಿಗೆ ಸುಮಾರು 30 ವರ್ಷಗಳ ಹಿಂದೆ ಮಠದಲ್ಲಿದ್ದ ಲಡಕಾಸಿ ಜೀಪು ಪ್ರಯಾಣದ ನಡುವೆ ಎಲ್ಲೆಂದರಲ್ಲಿ ನಿಂತು ಬಿಡುತ್ತಿತ್ತು, ಅದನ್ನು ಮತ್ತೆ ಸ್ಟಾರ್ಟ್ ಮಾಡಿಸಬೇಕೆಂದರೆ ಭಕ್ತಾದಿಗಳು ಕಿಲೋಮೀಟರ್‌ಗಟ್ಟಲೆ ಜೀಪನ್ನು ಹಿಂದಿನಿಂದ ನೂಕುತ್ತಿದ್ದರು. ಭಕ್ತಾದಿಗಳ ಕೃಪಾಪೋಷಣೆಯಿಂದ ಅಗಾಧವಾಗಿ ಬೆಳೆದುನಿಂತಿರುವ ಮಠದ ಸಂಪತ್ತು ಅಂದಾದುಂದಿಯಾಗಿ ಖರ್ಚಾಗುತ್ತಿದ್ದು, ಮಠದ ಘೋಷಿತ ಉದ್ದೇಶಗಳಿಗೆ ಸರಿಯಾಗಿ ಬಳಕೆಯಾಗುತ್ತವೆ ಎಂಬ ಯಾವ ಖಾತ್ರಿಯೂ ಇಲ್ಲದಂತಾಗಿದೆ.

ಅದೂಅಲ್ಲದೆ ಈ ಶೇಖರ್ ಸ್ವಾಮಿ ಮಾಜಿ ಪ್ರಧಾನಿ ದೇವೇಗೌಡರಿಗೆ ನಿಕಟವರ್ತಿಯಾಗಿದ್ದು, ಇತರರನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬ ವಿಷಯವೂ ಕೆಲವರ ಕಣ್ಣಲ್ಲಿ ಕಿಚ್ಚು ಹಬ್ಬಿಸಿರುವುದು ಸುಳ್ಳಲ್ಲ, ಈ ಒಳರಾಜಕೀಯ ಅದೇನೇ ಇರಲಿ. ಚುಂಚನಗಿರಿ ಮಠದ ವ್ಯವಹಾರಗಳು ಅಡ್ಡಹಾದಿ ಹಿಡಿಯುವ ಮುನ್ನವೇ ಭಕ್ತ ಸಮೂಹ ಎಚ್ಚೆತ್ತುಕೊಂಡಷ್ಟೂ ಮಠಕ್ಕೆ ಶ್ರೇಯಸ್ಕರ. ಇಲ್ಲವಾದರೆ ಮಠವನ್ನು ಕಾಲಭೈರವನೇ ಕಾಯಬೇಕಷ್ಟೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಿಡಿ ಚಿತ್ರಗಳು...

→ 2

ಮುಂಬೈ ದಾಳಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ.

ಈ ದಾಳಿಯ ಹಿಂದೆ ಯಾವುದೇ ಸಂಘಟನೆಯಿರಲಿ ಅವರ ಉದ್ದೇಶವಿದ್ದದ್ದು ಆ ದಾಳಿಯ ಮೂಲಕ ಭಾರತ-ಪಾಕಿಸ್ತಾನದ ಗಡಿಯಲ್ಲಿ ಉದ್ವಿಗ್ನತೆ ಉಂಟು ಮಾಡಿ ಎರಡೂ ದೇಶಗಳ ಸೇನೆ ಪರಸ್ಪರ ಎದುರುಬದುರಾಗಿ ನಿಲ್ಲುವಂತೆ ಮಾಡುವುದಾಗಿತ್ತು,

ಇದಕ್ಕೆ ಕಾರಣವಿಲ್ಲದಿರಲಿಲ್ಲ,

ಅಫಘಾನಿಸ್ತಾನ ಹಾಗೂ ಪಾಕಿಸ್ತಾನದ ಗಡಿಪ್ರದೇಶದಲ್ಲಿರುವ ವಜಿರಿಸ್ತಾನ್, ಸ್ವಾತ್ ಕಣಿವೆ ಪ್ರಾಂತ್ಯದಲ್ಲಿ ಅಮೆರಿಕಾ ವಿರೋಧಿ ಭಾವನೆ ಪ್ರಬಲವಾಗಿದೆ. ಹಕ್ಕಾನಿ, ತಾಲಿಬಾನ್ ಬಂದುಕೋರರಿಗೆ ಇದು ಬ್ರೀಡಿಂಗ್ ಸೆಂಟರ್ ಇದ್ದಂತೆ. ಅಮೆರಿಕಾಗೆ ಇವತ್ತಿಗೂ ಇವರನ್ನು ಮಣಿಸಲು ಆಗುತ್ತಿಲ್ಲ, ಹಾಗಾಗಿ ಅಮೆರಿಕಾ ಒಮ್ಮೆ ಪಾಕಿಸ್ತಾನದ ಮೇಲೆ ವಿಪರೀತ ಒತ್ತಡ ಹಾಕಿ ಪಾಕ್ ಸೇನೆಯನ್ನೇ ಸ್ವಾತ್ ಕಣಿವೆಗೆ ನುಗ್ಗಿಸಿತು. 2007-08ರಲ್ಲಿ ಪಾಕಿಸ್ತಾನಿ ಸೈನಿಕರು ಅಲ್ಲಿ ಎಷ್ಟು ದಾಂಧಲೆ ನಡೆಸಿದರೆಂದರೆ ಸುಮಾರು 20 ಲಕ್ಷ ಜನ ನಿರಾಶ್ರಿತರಾಗಿ ಕಣಿವೆಯಿಂದ ಹೊರಬರಬೇಕಾಯಿತು. ಇದರಿಂದಾಗಿ ಅಮೆರಿಕಾ ವಿರುದ್ಧ ದಂಗೆ ಎದ್ದಿದ್ದ ಉಗ್ರ ಸಂಘಟನೆಗಳಿಗೂ ತಾಪತ್ರಯಗಳು ಶುರುವಾದವು. ಪಾಕ್ ಸೈನಿಕರನ್ನು ಸ್ವಾತ್ ಕಣಿವೆಯಿಂದ ಹೊರಹೋಗುವಂತೆ ಮಾಡಬೇಕೆಂದರೆ ಭಾರತ-ಪಾಕ್ ಗಡಿಯಲ್ಲಿ ಉದ್ವಿಗ್ನತೆ ಸೃಷ್ಟಿಸುವುದರಿಂದ ಆದೀತೇನೋ ಎಂದು ಯೋಚಿಸಿ ಮುಂಬೈ ದಾಳಿಗೆ ಸಂಚು ನಡೆಸಿದರು. ಅಫಘಾನಿಸ್ತಾನದಲ್ಲಿ ಅಮೆರಿಕಾ ಗೆಲ್ಲುವುದು. ಐಎಸ್‌ಐಗೂ ಬೇಕಿಲ್ಲವಾದ್ದರಿಂದ ಅದೂ ಸಹ ಮುಂಬೈ ದಾಳಿಗೆ ಕೈಲಾದ ನೆರವು ನೀಡಿ ಪ್ರಚೋದಿಸಿತು. ಮುಂಬೈ ದಾಳಿಯ ನಂತರ ಉಗ್ರರು ನಿರೀಕ್ಷಿಸಿದ್ದಂತೆಯೇ ಭಾರತದ ಸೇನೆ ಪಾಕ್ ವಿರುದ್ಧ ಗಡಿಯಲ್ಲಿ ಜಮೆಯಾಯಿತು. ಸಂಭವನೀಯ ಭಾರತದ ದಾಳಿ ತಡೆಯಲು ಪಾಕ್ ಕೂಡ ಅನಿವಾರ್ಯವಾಗಿ ಸ್ವಾತ್ ಕಣಿವೆಯಲ್ಲಿದ್ದ ಲಕ್ಷಾಂತರ ಸೇನೆಯನ್ನು ಹಿಂದಕ್ಕೆ ಕರೆಸಿ ಭಾರತದ ಗಡಿಯಲ್ಲಿ ನಿಯೋಜಿಸುವಂತಾಯಿತು.



ಸಿದ್ದಿಕ್

ಈ Breathing Space ಅನ್ನು ಬಳಸಿಕೊಂಡ ಅಫಘಾನ್ ದಂಗೆಕೋರರು ಪುನಃ ಚಿಗುರಿಕೊಂಡರು. ಅಮೆರಿಕನ್ನರ ವಿರುದ್ಧ ಗೆರಿಲ್ಲಾ ಯುದ್ಧ ಮುಂದುವರೆಸಿದರು.

ಈ ಹಿನ್ನೆಲೆಯನ್ನು ಅಭ್ಯಸಿಸಿದರೆ ಮುಂಬೈ ದಾಳಿಗೆ ಕೇವಲ ಪಾಕ್ ಉಗ್ರರು ಮಾತ್ರವಲ್ಲ ಅಮೆರಿಕಾವೂ ಹೊಣೆಯಾಗಿದೆ ಎನ್ನಬೇಕಾಗುತ್ತದೆ.

ಇಂಡಿಯಾದಲ್ಲಿ ಈಗ ಸ್ಫೋಟಗೊಳ್ಳುತ್ತಿರುವ ಆಂತರಿಕ ಕ್ಷೋಭೆಗೆ ಖಂಡಿತಾ ಅಂತಾರಾಷ್ಟ್ರೀಯ ಆಗುಹೋಗುಗಳ ಆಯಾಮವಿದೆ. ಅಮೆರಿಕಾ ಅರಬ್ ದೇಶಗಳಲ್ಲಿ ನಡೆಸುತ್ತಿರುವ ದುರಾಕ್ರಮಣವು ನಿಲ್ಲದ ಹೊರತು, ಇಂಡಿಯಾದೊಳಗಿನ ಪುರೋಹಿತರ ಭಯೋತ್ಪಾದನೆ ಕೊನೆಗಾಣದ ಹೊರತು ನಮ್ಮಲ್ಲಿನ ಮುಸ್ಲಿಂ ಉಗ್ರರ ಚಟುವಟಿಕೆಗಳು ನಿಯಂತ್ರಣಕ್ಕೆ ಬರುವುದಿಲ್ಲ,

ಎಪ್ಪತ್ತು ವರ್ಷಗಳ ಹಿಂದೆ ನನ್ನ ನೆರೆಮನೆಯ ಯೋಧ ನಾರಾಯಣರಾವ್ ನಿಕ್ಕಂ ಅಫಘಾನಿಸ್ತಾನ-ಇರಾನ್‌ತನಕ ಹೋಗಿ ಫ್ಯಾಸಿಸ್ಟರ ವಿರುದ್ಧ ಹೋರಾಡಿದ್ದರು. ನಾವದನ್ನು ಮೆಚ್ಚುವುದಾದರೆ ಈಗ ಅದೇ ನೆಲದಲ್ಲಿ ಅಮೆರಿಕನ್ ದುರಾಕ್ರಮಣದ ವಿರುದ್ಧ ಆಕ್ರೋಶಗೊಳ್ಳುತ್ತಿರುವ ಯುವಕರನ್ನು ಟೆರರಿಸ್ಟರೆಂದು ಬಿಂಬಿಸುತ್ತಾ ದ್ವೇಷಿಸುವುದರಲ್ಲಿ ಅರ್ಥವಿಲ್ಲ.

ಕುಕ್ಕೆ ಸುಬ್ರಹ್ಮಣ್ಯ- ಶೈವ ದೇಗುಲ ಮಾಧ್ವರಿಂದ ಹೈಜಾಕ್

ವಿಶೇಷ ವರದಿ



ಫೆಬ್ರವರಿ 12ರ ಸಂಜೆ ಸುವರ್ಣ 24x7 ಚಾನೆಲ್‌ನಲ್ಲಿ 'ಕಾಯೋ ಸುಬ್ರಹ್ಮಣ್ಯ' ಎಂಬ ಕಾರ್ಯಕ್ರಮ ಪ್ರಸಾರವಾಯಿತು. ರಾಜ್ಯದ ಅತ್ಯಂತ ಹೆಚ್ಚು ಆದಾಯ (ವಾರ್ಷಿಕ 58 ಕೋಟಿ?) ಗಳಿಸುವ ದೇಗುಲವಾದ ಕುಕ್ಕೆಯ ಹೆಸರಲ್ಲಿ ಮಾಧ್ವ ಮಠವೊಂದು ನಡೆಸುತ್ತಿರುವ ಹಗಲುದರೋಡೆಯ ಕುರಿತಾದ ಕಾರ್ಯಕ್ರಮವದು. ಆ ಚರ್ಚಾಕಾರ್ಯಕ್ರಮದಲ್ಲಿ ಕೆಲ ಧಾರ್ಮಿಕ ಕ್ಷೇತ್ರದಲ್ಲಿನ ವ್ಯಕ್ತಿಗಳೊಂದಿಗೆ ಡಾ.ಸಿ.ಎಸ್.ದ್ವಾರಕಾನಾಥ್ ಅವರೂ ಭಾಗವಹಿಸಿದ್ದರು. ಇದೊಂದು ಕುತೂಹಲಕಾರಿ ಹಾಗು ವಿವಾದಾತ್ಮಕ ವಿಷಯವಾಗಿದ್ದರಿಂದ ವಿಷಯದ ಕುರಿತು ಸ್ಪಷ್ಟೀಕರಣಕ್ಕಾಗಿ ಕುಕ್ಕೆಯ ಸ್ವಾಮಿಯ ಸಂಪರ್ಕಕ್ಕಾಗಿ ಚಾನೆಲ್‌ನವರು ಎಷ್ಟೇ ಪ್ರಯತ್ನಿಸಿದರೂ ಸ್ವಾಮಿಯ ಶಿಷ್ಯರು ಫೋನನ್ನು ಎತ್ತುತ್ತಾರೆಯೇ ಹೊರತು ಸ್ವಾಮಿ ಸಿಗುತ್ತಿಲ್ಲವೆಂದು ನಿರೂಪಕರೇ ಅಲವತ್ತುಕೊಂಡಿದ್ದರು. ಹಾಗಾದರೆ ಸ್ಪಷ್ಟೀಕರಣದ ಹೇಳಿಕೆ ಕೊಡಲೂ ಭಯ ಹುಟ್ಟಿಸುವಂತಹ ಸಂಗತಿಯಾದರೂ ಏನಿದೆ..! ಅಂತಹದ್ದೇನಿದೆ...!!?


ಖಂಡಿತಾ ಇದೆ. ಅದೂ ಬೆಚ್ಚಿಬೀಳಿಸುವಂತಹ ಸಂಗತಿಗಳು.

ಅವತ್ತು ಚರ್ಚೆಯಲ್ಲಿ ದ್ವಾರಕಾನಾಥ್ ಹಾಗೂ ಪದ್ಮಾ ಭಟ್ ಎನ್ನುವವರ ನಡುವೆ ಬಿರುಸಿನ ವಾಗ್ವಾದಗಳು ನಡೆದವು. ಮಾತಿನ ನಡುವೆ ದ್ವಾರಕಾನಾಥ್ ಅವರು "...ನನಗೆ ಗೊತ್ತಿಲ್ಲ, ನಾನು ಮುಗ್ಧನಾಗಿ ಕೇಳುತ್ತಿದ್ದೇನೆ... ಅಲ್ಲಾ, ಶೈವರಿಗೆ ಸಂಬಂಧಿಸಿದ ಸುಬ್ರಹ್ಮಣ್ಯನ ದೇಗುಲದಲ್ಲಿ ವೈಷ್ಣವರ ಸಂಪುಟ ನರಸಿಂಹನ ಮಠ ಬಂದದ್ದಾದರೂ ಹೇಗೆ?" ಎಂದು ಕೇಳುವ ಮೂಲಕ ತಮಗೆ ಗೊತ್ತಿಲ್ಲದಂತೆಯೇ ಕುಕ್ಕೆಯಲ್ಲಿನ ಅನಾಚಾರಗಳ ಬುಡಕ್ಕೇ ಕೈಹಾಕಿಬಿಟ್ಟರು. ಹಿಂದೂ ದೇಗುಲಗಳಿಗೆ ಘಜನಿ ಹಾಗೆ ಮಾಡಿದ, ಟಿಪ್ಪು ಹಾಗೆ ಮಾಡಿದ ಎಂದು ಕಥೆ ಕಟ್ಟಿ ಮೊಸಳೆ ಕಣ್ಣೀರಿಕ್ಕುವ ಜನರ ನಿಜ 'ಭಂಡ'ವಾಳಗಳು ಅನಾವರಣ ಆಗಬೇಕಾದರೆ ಕುಕ್ಕೆಯ ಇತಿಹಾಸವನ್ನೊಮ್ಮೆ ಸ್ವಲ್ಪ ಕೆದಕಬೇಕು.

ಅಂದಹಾಗೆ, ಇದೇ ಕುಕ್ಕೆ ದೇಗುಲದಲ್ಲಿ ಧರ್ಮದರ್ಶಿ ಗಳಾಗಿದ್ದುಕೊಂಡು ಅದರ ಒಳಹೊರಗೆಲ್ಲವನ್ನೂ ಚೆನ್ನಾಗಿ ಅರಿತಿದ್ದ ಡಾ.ಅಚ್ಯುತಶರ್ಮ ಎನ್ನುವವರು ಬರೆದಿದ್ದ 'ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ - ಇದರ ಸಂಶೋಧನಾತ್ಮಕ ಐತಿಹಾಸಿಕ ಹಿನ್ನೆಲೆ ಮತ್ತು ಮರೆಯಾದ ಸಿದ್ಧಿವಿನಾಯಕ ದೇವರು' ಎನ್ನುವ 102 ಪುಟಗಳ ಪುಸ್ತಕವೀಗ ಬರೋಬ್ಬರಿ 60 ವರ್ಷಗಳ ಬಳಿಕ ಯಥಾವತ್ತಾಗಿ ಮರುಮುದ್ರಣ ಗೊಂಡಿದೆ. ತಾಮ್ರ ಪತ್ರ, ಕೋರ್ಟು ವ್ಯಾಜ್ಯ ಮೊದಲಾದ ದಾಖಲೆಗಳೆಲ್ಲವನ್ನೂ ಕೂಲಂಕಷವಾಗಿ ಅಭ್ಯಸಿಸಿ ಆಧಾರ ಸಮೇತವಾಗಿ ಬರೆದಿರುವ ಸಂಶೋಧನಾತ್ಮಕ ಗ್ರಂಥವಿದು. ಯಾವುದೇ ಪೂರ್ವಾಗ್ರಹಗಳಿಲ್ಲದೇ ಬ್ರಾಹ್ಮಣರೇ ಆದ ವ್ಯಕ್ತಿಯೊಬ್ಬರು ಬರೆದಿರುವ ಆ ಸತ್ಯಸಂಗತಿಗಳ ಸಂಕ್ಷಿಪ್ತ ವಿವರಣೆ ಇಲ್ಲಿದೆ.

ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಕಮಿಷನರ್, ಮದ್ರಾಸ್ ಇವರ ಆರ್ಡರ್ ನಂ 380-27 ಆಫ್ 1953ರ ಅನುಸಾರ (ಹಿಂದೆ ದಕ ಜಿಲ್ಲೆ ಮದ್ರಾಸ್ ಸರಕಾರದ ಅಧೀನಕ್ಕೊಳಪಟ್ಟಿತ್ತು) ಶ್ರೀಯುತ ಅಚ್ಯುತಶರ್ಮರವರು 27-7-1953ರಂದು ಕುಕ್ಕೆ ಸುಬ್ರಹ್ಮಣ್ಯೇಶ್ವರ (ದೇವರ ಮೂಲ ಹೆಸರು) ದೇಗುಲದ ಆಡಳಿತ ಕೌನ್ಸಿಲ್‌ನ ಒಬ್ಬ ಸದಸ್ಯರಾಗಿ ಸೇರಿದರು. ಡಿಸ್ಟ್ರಿಕ್ಟ್ ಕೋರ್ಟ್ ಸ್ಕೀಂ O S ನಂ. ಆಫ್ 1930 ಹಾಗು ಮದ್ರಾಸ್ ಹೈಕೋರ್ಟ್ A S ನಂ. 394 ಆಫ್ 1931 ರ ಅನುಸಾರ ಕುಕ್ಕೆ ದೇವಳದ ಆಡಳಿತವನ್ನು ಇಬ್ಬರು ದ್ರಾವಿಡ ಬ್ರಾಹ್ಮಣರ ಸಹಿತ ಐದು ಜನ ಸದಸ್ಯರಿಂದ ನಡೆಸಬೇಕೆಂಬ ತೀರ್ಪಿಗನು ಗುಣವಾಗಿ ಅಚ್ಯುತ ಶರ್ಮರು ನೇಮಕ ಗೊಂಡಿದ್ದರು.


ಶರ್ಮರು ಹೊಸತಾಗಿ ದೇಗುಲವನ್ನು ಸೇರಿ ಅಲ್ಲಿನ ಸ್ಥಿತಿಗತಿಗಳನ್ನು ಪರಿಶೀಲಿಸಿದಾಗ ತೀರಾ ಅಚ್ಚರಿಗೊಳಗಾದರು. ಯಾಕೆಂದರೆ ಶಿವಪುತ್ರ ಸುಬ್ರಹ್ಮಣ್ಯನಿಗೆ ಸಂಬಂಧಿಸಿದ ಈ ಶೈವ ದೇಗುಲದಲ್ಲಿ ಪೂರ್ಣ ದ್ವಾದಶನಾಮಿಗಳಾದ ವೈಷ್ಣವ ಮಾಧ್ವರೇ ತುಂಬಿಕೊಂಡಿದ್ದರು. ಅಷ್ಟೇ ಅಲ್ಲ, ಒಳಾಂಗಣದ ಆಗ್ನೇಯ ಮೂಲೆಯಲ್ಲಿ ಪರಿವಾರ ದೇವತೆಯ ರೂಪದಲ್ಲಿ ಶೈವಾಗಮಕ್ಕೆ ಸಂಬಂಧಪಟ್ಟ ದೇಗುಲದಲ್ಲಿ ನ್ಯಾಯವಾಗಿ ಇರಬೇಕಾಗಿದ್ದ ಗಣಪತಿಯ ಸ್ಥಾನವನ್ನು ಮಾಧ್ವ ಮಠಕ್ಕೆ ಸಂಬಂಧಿಸಿದ ಸಂಪುಟ ನರಸಿಂಹನೆಂಬ ವೈಷ್ಣವ ದೇವರು ಆಕ್ರಮಿಸಿ ಗುಡಿಯಲ್ಲಿ ಝಂಡಾ ಊರಿದ್ದರು. ಅಲ್ಲದೇ, ದೇಗುಲದ ಟ್ರೆಜರಿಯಲ್ಲಿ ಆಗಿನ ಬೆಲೆಯಂತೆ ರೂ. 1000ದ ಬೆಲೆಯ ಗಣಪತಿಯ ಚಿನ್ನದ ಕವಚ ಇತ್ತಾದರೂ ಅದನ್ನು ತೊಡಿಸಲು ಇರಬೇಕಾದ ಮೂರ್ತಿಯೇ ಎಲ್ಲೂ ಕಾಣುತ್ತಿರಲಿಲ್ಲ, ಇದು ಶರ್ಮರಲ್ಲಿ ತೀವ್ರ ಕುತೂಹಲವನ್ನು ಹುಟ್ಟಿಸಿತು.



ಶರ್ಮರ ವಿಚಾರಣೆ, ತನಿಖೆಗಳಿಂದ ಕೊನೆಗೂ ಮೇಲಿನ ಕವಚಕ್ಕೆ ಸಂಬಂಧಿಸಿದ ವಿಗ್ರಹವನ್ನು ದೇಗುಲದಲ್ಲಿ ಸುಬ್ರಹ್ಮಣ್ಯನ ಮೂಲಸ್ಥಾನದಲ್ಲಿ ಶೇಷ, ವಾಸುಕಿ ಹೆಡೆ ಹಾಗು ಸುಬ್ರಹ್ಮಣ್ಯ ವಿಗ್ರಹದ ಎಡಬದಿಯಲ್ಲಿ ಗೌಪ್ಯವಾಗಿ ಇತರರಿಗೆ ಕಾಣಿಸದಂತೆ ಅಡಗಿಸಿಟ್ಟ (ಸ್ವಯಂ ಸುಬ್ರಹ್ಮಣ್ಯನ ಅಣ್ಣನಿಗೇ ಪೂಜೆ, ... ನ ಗೌರವದಿಂದ ವಂಚಿಸಿ ದೋಖಾ!!!) ಸಂಗತಿ ತಿಳಿಯಿತು. ಈ ವಿಚಾರವನ್ನು ಶರ್ಮರು ಆಡಳಿತ ಕೌನ್ಸಿಲ್‌ನ ಸಭೆಯಲ್ಲಿ ಎತ್ತಿದ ಕಾರಣ 9-12-1955ರಂದು ದೇಗುಲ ಕಮಿಟಿಯು ಈ ಸ್ಥಾನಪಲ್ಲಟದ ಪೂರ್ವೇತಿಹಾಸವನ್ನು ಶೋಧಿಸಲು ಶರ್ಮರಿಗೇ ಜವಾಬ್ದಾರಿಯನ್ನು ವಹಿಸಿತು. ದೇಗುಲದ ಬಹುತೇಕ ದಾಖಲೆಗಳು ಮಾಧ್ವ ಸ್ವಾಮಿಗಳ ಕಾಲ ಹಾಗು ಹಿಂದೆ ಆಡಳಿತ ವಹಿಸಿಕೊಂಡಿದ್ದ ಬಾಗಲೋಡಿ ರಾಮಕೃಷ್ಣಯ್ಯ ಮೊದಲಾದವರ ಕಾಲದಲ್ಲಿ ದೇಗುಲದಿಂದ ಹೊರಹೋಗಿದ್ದರೂ ಶರ್ಮರ ಸ್ವಯಂಪ್ರೇರಿತ ಪ್ರಯತ್ನಗಳ ಫಲವಾಗಿ ತಾಮ್ರ ಶಾಸನಗಳು, ಕೋರ್ಟು ವ್ಯಾಜ್ಯಗಳು ಮತ್ತು ಇತರೆ ದಾಖಲೆಗಳು ಸಿಕ್ಕವು. ಇವುಗಳಿಂದಾಗಿ ಮಾಧ್ವರು ನಡೆಸಿದ ಆ ವಿನಾಯಕ ಅವಮಾನತಿನ ಇತಿಹಾಸವು ಒಂದೊಂದಾಗಿ ಹೊರಬಂತು.

ಸುಮಾರು 150 ವರ್ಷಗಳ ಹಿಂದೆ (1845ರಲ್ಲಿ) ಆಗಿನ ಜಿಲ್ಲಾ ಕಲೆಕ್ಟರ್ ಬ್ಲೇಯರ್‌ನ ಸನದಿನ ಮುಖಾಂತರ ದೇವಸ್ಥಾನವು ಅಲ್ಲಿನ ಸ್ಮಾರ್ತ ಬ್ರಾಹ್ಮಣ ಅರ್ಚಕರ ಕೈಯಿಂದ ತಪ್ಪಿ ಮಾಧ್ವ ಸ್ವಾಮಿಗಳ ಕೈವಶವಾಯಿತು. ಆಗ ಸರಕಾರದಿಂದ ಸಿಗುತ್ತಿದ್ದ ರೂ.4400 ತಸದೀಕು ಹಾಗು ದೇಗುಲದ ಇತರ ಆಸ್ತಿಯ ಮೇಲೆ ಕಣ್ಣು ಹಾಕಿದ್ದ ಮಾಧ್ವ ಸ್ವಾಮಿಗಳು ಅಡ್ಡದಾರಿಯಿಂದ ಇದನ್ನು ಕೈವಶ ಮಾಡಿಕೊಂಡಿದ್ದರು. ಅಲ್ಲದೇ ಶೈವ ದೇಗುಲದಲ್ಲಿ ತಮ್ಮ ಅಸ್ತಿತ್ವವನ್ನು ತೋರ್ಪಡಿಸಲು ಆಗ್ನೇಯ ಮೂಲೆಯಲ್ಲಿದ್ದ ವಿನಾಯಕನನ್ನು ಪದಚ್ಯುತಗೊಳಿಸಿ ತಮ್ಮ ನರಸಿಂಹನನ್ನು ಪ್ರತಿಷ್ಠಾಪಿಸಿದ್ದರು.

ಸುಮಾರು 1953ರ ವರೆಗೂ ದೇಗುಲದ ಹೆಚ್ಚಿನ ಅಧಿಕಾರ ಮಾಧ್ವರ ಕೈಯಲ್ಲೇ ಇದ್ದ ಕಾರಣ ಈ ವಿನಾಯಕನ ಪದಚ್ಯುತಿ ಹೊರ ಜಗತ್ತಿಗೆ ಗೊತ್ತಾಗದಂತೆ ನೋಡಿಕೊಳ್ಳಲಾಯಿತು. 21-2-1940ರಲ್ಲಿ ಮದ್ರಾಸಿನ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಕಮಿಷನರ್ ಶ್ರೀ ಸಿ. ಕಾಮೇಶ್ವರರಾವ್ ಎಂಬುವವರು ಈ ದೇವಾಲಯ ವನ್ನು ಸಂದರ್ಶಿಸಿ ಮಾಡಿದ ಇನ್‌ಸ್ಪೆಕ್ಷನ್ ರಿಪೋರ್ಟಿನಲ್ಲಿ ಹೀಗೆ ದಾಖಲಿಸಿದ್ದರು:



``There is a small shrine to god Narasimha where worship is offered by Madhva priests paid by Madhva mutt authorities. This seems to have been introduced in the time of Madhvacharya who was unable to make an impression on the predominantly shaivite character of the temple firmly established by that time. In Udupi, on the other hand, though originally a Shiva temple, the predominance has entirely gone to Sri Krishna Temple established by Maadhva. Indeed the name of Udupi is a Name of Shiva as Chandramaulishwara."

ಹಿಂದಿನ ಕಾಲದಲ್ಲೇ ರಾಜ ಮಹಾರಾಜರು ಮತ್ತು ಪಾಳೇಗಾರರಿಂದ ಮಹತ್ವವನ್ನು ಗಳಿಸಿಕೊಂಡಿದ್ದ ಹಾಗು ಜನರೂ ಭಕ್ತಿ ಭಯದಿಂದ ನಡೆದುಕೊಳ್ಳುತ್ತಿದ್ದ ಸುಬ್ರಹ್ಮಣ್ಯನನ್ನು ಕೇವಲ ಸೊತ್ತಿನ ಹಾಗು ಅಧಿಕಾರದ ಲಾಲಸೆಗಾಗಿ ಮಾಧ್ವರು ವಹಿಸಿಕೊಂಡಿದ್ದರು. ಆ ಬಳಿಕ ಶೈವ ದೇಗುಲದಲ್ಲಿ ಅಗತ್ಯವಿರಬೇಕಾದ ಶೈವಾಗಮೋಕ್ತ ಪೂಜೆಗೂ ಖೊಕ್ ನೀಡಿದ್ದರು. ದೇವರ ಬಳಿ ಸಾಲಿಗ್ರಾಮವನ್ನಿಟ್ಟು ವೈಷ್ಣವ (ವೈಖಾಸನ) ಆಗಮ ಪ್ರಕಾರ ಪೂಜೆ ನಡೆಸುವುದೆಂದು ಹೇಳಿಕೊಳ್ಳುವ ಇವರು ಭಕ್ತಾದಿಗಳಿಗೆ ತುಳಸಿ ಗಂಧ ಪ್ರಸಾದವನ್ನ ನೀಡುವರೇ ವಿನಃ ಸುಬ್ರಹ್ಮಣ್ಯನಿಗೆ ಪ್ರಿಯವಾದ ವಿಭೂತಿ, ಬಿಲ್ವಪತ್ರೆಯ ಬಳಕೆ ಅಲ್ಲ. ಸುಬ್ರಹ್ಮಣ್ಯ ದೇವರ ಈಶಾನ್ಯ ದಿಕ್ಕಿನಲ್ಲಿರುವ ಉಮಾ ಮಹೇಶ್ವರ ದೇವರಿಗೆ ನಟ್ಟಬೈಲು ವೆಂಕಪ್ಪ ರೈಗಳೆಂಬುವವರು ಟ್ರಸ್ಟಿಗಳಾದ ಬಳಿಕ ಅವರ ಒತ್ತಾಯ ದಿಂದಾಗಿ ವಿಭೂತಿ ಕೊಡುವ ಕ್ರಮ ಮುಂದುವರೆಯಿತು. ಆದರೆ ಈ ಗುಡಿಯಲ್ಲೂ ಮಾಧ್ವ ಶಿವಳ್ಳಿ ಬ್ರಾಹ್ಮಣರೇ ಅರ್ಚಕರು.

ಐತಿಹ್ಯಗಳ ಪ್ರಕಾರ 18ನೇ ಶತಮಾನದ ಆದಿಯಲ್ಲಿ ಸುಬ್ರಹ್ಮಣ್ಯದಲ್ಲಿ ಮಾಧ್ವರ ಮಠವೇ ಇರಲಿಲ್ಲ, ಚಂಪಾ ಷಷ್ಠಿಯಂದು ಕೆಲ ಮಾಧ್ವ ಸ್ವಾಮಿಗಳು ತಮ್ಮ ಅನುಯಾಯಿಗಳೊಂದಿಗೆ ಉಡುಪಿಯಿಂದ ಬಂದು ಭಿಕ್ಷುಕರ ಮಠದಲ್ಲಿ ಉಳಿದುಕೊಂಡಿದ್ದರು. ಅದೇ ಸಮಯದಲ್ಲೊಮ್ಮೆ ಆ ಕ್ಷೇತ್ರಕ್ಕೆ ಶೃಂಗೇರಿ ಮಠದ ಸಚ್ಚಿದಾನಂದ ಭಾರತಿ ಸ್ವಾಮಿಗಳೂ ಬಂದಾಗ ಮಾಧ್ವ ಸ್ವಾಮಿಗಳು ಗಲಾಟೆ ಎಬ್ಬಿಸಿದ್ದರು. ಆಗ ಅವರೆಲ್ಲ ಸ್ಥಳೀಯ ಜನರಿಂದ ತಿರುಗೇಟು ತಿಂದಿದ್ದರಂತೆ.

ಈ ಅವಮಾನದ ಬಳಿಕ ಆಗಿನ ಪಾಳೇಗಾರ ಬಲ್ಲಾಳರಾಯನ ಒಪ್ಪಿಗೆ ಪಡೆದು ಸುಬ್ರಹ್ಮಣ್ಯದ ಸಮೀಪದ ಇಂಜಾಡಿ ಎಂಬಲ್ಲಿ ಮಠವನ್ನು ಕಟ್ಟಿಕೊಂಡು ಅಲ್ಲೇ ಬೀಡುಬಿಟ್ಟರು. (ಈ ಹಳೆ ಮಠದ ಕುರುಹು ನಂತರವೂ ಇತ್ತು) ಕೆಲ ಸಮಯ ಕಳೆದು ತಮ್ಮ ಮಠ ಸುಟ್ಟುಹೋದ ನೆಪದಲ್ಲಿ ಸುಬ್ರಹ್ಮಣ್ಯದ ಆಗಿನ ಹೆಬ್ಬಾರರ ಸ್ನೇಹವನ್ನು ಗಳಿಸಿಕೊಂಡು ವಿದ್ಯಾ ರಾಜತೀರ್ಥರೆಂಬ ಮಾಧ್ವ ಸ್ವಾಮಿ ಮೊದಲ ಬಾರಿಗೆ ದೇಗುಲದೊಳಗೆ ಆಶ್ರಯವನ್ನು ಪಡೆಯುವಲ್ಲಿ ಯಶಸ್ವಿಯಾದ. ಹೆಬ್ಬಾರರ ವಿಶ್ವಾಸದ ಜೊತೆ ಜೊತೆಗೆ ದೇವಸ್ಥಾನದ ಅಷ್ಟೋತ್ತರ ಉಪಾಧಿಯೊಂದನ್ನೂ ವಹಿಸಿಕೊಂಡ ಮಾಧ್ವ ಸ್ವಾಮಿ ಇಡೀ ದೇಗುಲವನ್ನು ಕೈವಶಮಾಡಿಕೊಳ್ಳಲು ಹೊಂಚುಹಾಕಿ ಕೂತ. ಈ ವಿದ್ಯಾರಾಜತೀರ್ಥ ಸ್ವಾಮಿ ಅಂದಿನ ಮೈಸೂರಿನ ದಿವಾನ ಹಾಗು ಮಾಧ್ವರೂ ಆಗಿದ್ದ ಪೂರ್ಣಯ್ಯನ ಒಡನಾಟವನ್ನೂ ಗಳಿಸಿಕೊಂಡಿದ್ದರು.

ನಂತರ ದೇಗುಲದಲ್ಲಿ ನಡೆದ ಅನಾಹುತ(ಸಾವು)ವೊಂದಕ್ಕೆ ಪರಿಹಾರ ತೋರಿಸುವ ನೆಪದಲ್ಲಿ ದೇಗುಲದ ಆಡಳಿತ ನಡೆಸುತ್ತಿದ್ದ ಹೆಬ್ಬಾರರೊಂದಿಗೆ ವಿದ್ಯಾರಾಜತೀರ್ಥ ಸ್ವಾಮಿ ವ್ಯವಹಾರಕ್ಕಿಳಿದರು. ತನ್ನನ್ನು ಹಾಗು ತನ್ನ ಮತದವರೇ ಆದ ಅಸ್ರಣ್ಣಗಳನ್ನು ಆಡಳಿತದಲ್ಲಿ ಸೇರಿಸಿಕೊಳ್ಳಬೇಕೆಂಬ ಕೋರಿಕೆಯನ್ನು ಮಂಡಿಸಿ ಅದರಲ್ಲಿ ಯಶಸ್ವಿಯೂ ಆದರು. ಬಂಟ್ವಾಳದ ತಹಸೀಲ್ದಾರ (ಆಗ ಸುಬ್ರಹ್ಮಣ್ಯ ಬಂಟ್ವಾಳ ತಾಲೂಕಿಗೆ ಸೇರಿತ್ತು) ರಂಗಪ್ಪ ಎಂಬುವವರ ಮೇಲೆ ಒತ್ತಡ ಹೇರಿ, ಜಿಲ್ಲಾ ಕಲೆಕ್ಟರ್ ಬ್ಲಾಯರ್‌ಗೆ ಮಂಕು ಬೂದಿ ಎರಚಿ ಹೊಸ ಸನದಿನ ಮುಖಾಂತರ ದೇಗುಲದ ಆಡಳಿತಕ್ಕೆ ತಮ್ಮಿಬ್ಬರು ಅನುಯಾಯಿಗಳೊಂದಿಗೆ ಎಂಟ್ರಿಕೊಟ್ಟರು. 29-11-1845ರಲ್ಲಿ ನೇಮಕಗೊಂಡ ಆಡಳಿತದಾರರ ಆ ಹೊಸ ಪಟ್ಟಿ ಈ ರೀತಿ ಇದೆ: 1. ಹೆಬ್ಬಾರ ನಾರ್ಣಪ್ಪ 2. ಹೆಬ್ಬಾರ ನಾರಾಯಣ, 3. ಪಾತಾಳಿ ರಾಮಪ್ಪ 4. ಕೃಷ್ಣಾಚಾರ್ಯ, 5. ವಿದ್ಯಾರಾಜತೀರ್ಥ ಸ್ವಾಮಿ, 6. ವೆಂಕಟಕೃಷ್ಣ ಅಸ್ರಣ್ಣ ಮತ್ತು 7.ಸುಬ್ರಾಯ ಅಸ್ರಣ್ಣ

ದೇಗುಳದ ಆಡಳಿತ ಮಾಧ್ವ ಸ್ವಾಮಿಗಳ ಕೈವಶವಾದ ಮೇಲೆ ಶುರುವಾಯಿತು ಅವರ ಒಂದೊಂದೇ ಆಟ. ಭಕ್ತಾದಿಗಳಿಂದ ಬರುವ ಕಾಣಿಕೆ ಹಣ, ದೇವಾಲಯದಲ್ಲಿನ ಪ್ರಸಾದ ಎಲ್ಲವೂ ಸ್ವಾಮಿಗಳಿಗೆ ಸಿಗಲಾರಂಭಿಸಿತು. 1850ರ ಸುಮಾರಿಗೆ ಈ ಎಲ್ಲ ದುರಾಡಳಿತವನ್ನು ಆಗಿನ ಮಣೆಗಾರ ಸಂಕಪ್ಪ ಎಂಬುವವರು ಸರಕಾರಕ್ಕೆ ತಿಳಿಸಿದರು. ಆಗ ಅಲ್ಲಿಗೆ ಬಂದ ಕಲೆಕ್ಟರ್ ತೋಮಸ್ ಲೋಬಿಯರ್ ದೇಗುಲಕ್ಕೆ ಕೊಡುತ್ತಿದ್ದ ರೂ. 4400 ತಸದೀಕನ್ನು ಕೊಡುವುದನ್ನೇ ನಿಲ್ಲಿಸಿ ಬಿಟ್ಟರು.

ವಿದ್ಯಾರಾಜತೀರ್ಥ ಸ್ವಾಮಿಯ ನಿಧನದ ನಂತರ 1882-83 ರಲ್ಲಿ 20-22 ವಯಸ್ಸಿನ ವ್ಯಾಸತೀರ್ಥ ಸ್ವಾಮಿ ಎಂಬಾತ ಅಧಿಕಾರಕ್ಕೆ ನೇಮಿಸಲ್ಪಟ್ಟ. ದರ್ಪಕ್ಕೆ ಹೆಸರಾಗಿದ್ದ ಈ ಸ್ವಾಮಿಯ ಕಾಲದಲ್ಲಿ ಕಮಿಟಿಯ ಸದಸ್ಯರುಗಳು ದೇಗುಲಕ್ಕೆ ಬರಲೂ ಹೆದರುತ್ತಿದ್ದರಂತೆ. ತನ್ನ ಪೂರ್ವಜರಂತೆ ದೇಗುಲದ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಈ ಸ್ವಾಮಿ ಆಗ ಪ್ರಚಲಿತವಾಗಿದ್ದ ದೇವರ ಮೂಲ ಹೆಸರಾದ 'ಸುಬ್ರಹ್ಮಣ್ಯೇಶ್ವರ' ಎಂಬುದನ್ನು ಬದಲಿಸಿ ಕೇವಲ 'ಸುಬ್ರಹ್ಮಣ್ಯ' ಹಾಗು 'ಸುಬ್ರಹ್ಮಣ್ಯ ಸ್ವಾಮಿ'ಯನ್ನಾಗಿಸಿ ಪ್ರಚಾರಪಡಿಸಿದ. ಅಲ್ಲದೆ ತನ್ನ ಮಠವನ್ನು ಸುಬ್ರಹ್ಮಣ್ಯ ಮಠ ಎಂತಲೂ, ತನ್ನನ್ನು ಸುಬ್ರಹ್ಮಣ್ಯ ಸ್ವಾಮಿ ಎಂತಲೂ ಕರೆಸಿಕೊಳ್ಳಲಾರಂಭಿಸಿದ.

ಹೀಗೆ ಮಾಡುವ ಮೂಲಕ ದೇವರಾದ ಸುಬ್ರಹ್ಮಣ್ಯನ ಹೆಸರಿಗೆ ಭಕ್ತಾದಿಗಳಿಂದ ಬರುತ್ತಿದ್ದ ಕಾಣಿಕೆಯು ತನಗೆ ಸಿಗುವಂತೆ ಲೂಟಿಯ ದಾರಿಯನ್ನು ಸೃಷ್ಟಿಸಿಕೊಂಡ. ಸರಕಾರೀ ದೇಗುಲ ಕಮಿಟಿಯ ರಚನೆಯಾಗುವವರೆಗೂ ಈ ಸ್ವಾಮಿಯ ಲೂಟಿ ನಿರಂತರವಾಗಿ ನಡೆದಿತ್ತು.

ಆಗಿನ ಕಮಿಟಿಯಲ್ಲಿದ್ದ ಶ್ರೀನಿವಾಸ ಭಟ್ಟ, ನಾರಾಯಣ ಶಗ್ರಿತ್ತಾಯ ಹಾಗು ಕೃಷ್ಣ ಶಿಬರಾಯರುಗಳು ವ್ಯಾಸತೀರ್ಥನ ವಂಚನೆ ಹಾಗು ದುರಾಡಳಿತದಿಂದ ಬೇಸತ್ತುಹೋದರು. ಆಗ ಅವರೆಲ್ಲ ದೇಗುಲದ ಇತರರಿಂದ ಹೇಳಿಕೆಗಳನ್ನು ಪಡೆದು, ತನಿಖೆಯನ್ನು ನಡೆಸಿ ದೇವಾಲಯದ ಆಡಳಿತದಿಂದ ಸ್ವಾಮಿಯನ್ನು ಅಮಾನತುಗೊಳಿಸಿದರು.

ಇದಕ್ಕೆ ಪ್ರತಿಯಾಗಿ ಸ್ವಾಮಿ ತನ್ನ ಹಕ್ಕು ಸಾಧಿಸಲು ವ್ಯಾಜ್ಯ (O S 27ಆಫ್ 1886) ಹೂಡಿದರಲ್ಲದೇ ಗುಡಿ ರಿಪೇರಿ ಕಾಲದಲ್ಲಿ ಸಿಕ್ಕ ಬಲ್ಲಾಳರಾಯನ ತಾಮ್ರಶಾಸನ ಎಂಬ ಫೋರ್ಜರಿ ಶಾಸನವನ್ನೂ ಕೋರ್ಟಿಗೆ ಹಾಜರುಪಡಿಸಿದರು. ಇದರ ತನಿಖೆ ನಡೆಸಿದ ಮಂಗಳೂರಿನ ಸಬ್ ಕೋರ್ಟಿನ ಸಬ್ ಜಡ್ಜ್ ಗೋಪಾಲ್ ನಾಯರ್ ಅವರು "ಇದೊಂದು ದುರುದ್ದೇಶಪೂರಿತ ಫೋರ್ಜರಿ ಶಾಸನ" ಎಂದು 27-9-1887 ರಲ್ಲಿ ತೀರ್ಪಿತ್ತರು. ಅವರು ನೀಡಿದ ತೀರ್ಪು ಹೀಗಿತ್ತು:

"The strange mode of its discovery as told by the plaintiff and his 4th witness Venkataramana Bhatta at once reminded me of the following passage in a work on `India and its native princess' by that great French traveller M. Lovice Rousselt (page 187): Like the monks of the middle ages who took advantage of the general ignorance to forge royal charters, the Brahmins of our day employ the same means to increase their possessions. With great solemnity they dig up a plate of copper previously oxidized and buried themselves, on which to the astonishment of all, it is recorded that ``God Krishna or some mythological hero" had granted them 2 or 3 thousands years before the very land they covet. The real owners of the land are then without pity and if any venture to doubt the authenticity of the charter, they take good care to conceal their thoughts for fear of bringing upon themselves the vengeance of the all powerful cast of priests."


ಇದಾದನಂತರವೂ ಕೃತ್ರಿಮ ದಾರಿಗಳ ಮೂಲಕ ಮಠದಲ್ಲೇ ಗಟ್ಟಿಯಾಗುಳಿದ ಮಾಧ್ವ ಸ್ವಾಮಿಗಳು ಈಗಲೂ ಮುಗ್ಧ ಜನರ ನಂಬಿಕೆಗಳ ಹೆಸರಲ್ಲಿ ಅಧರ್ಮದ ಹಾದಿಯನ್ನು ಹಿಡಿದು ಭಕ್ತರನ್ನು ಮೋಸಗೊಳಿಸುತ್ತಿರುವುದು ಅಕ್ಷಮ್ಯ. ದೇಗುಲದಲ್ಲಿ ನಡೆಯುವ 'ಮಡೆಸ್ನಾನ' ಭಕ್ತಜನರ ನಂಬಿಕೆಯ ವಿಚಾರ ಅದಕ್ಕೆ ವಿರೋಧ ತಂದು ಭಕ್ತರ ಭಾವನೆಗೆ ಚ್ಯುತಿ ತರುವುದು ಸರಿಯಲ್ಲ ಎಂದು ಭಕ್ತರ ಪರ ಎಂಬಂತೆ ಮಾತಾಡುವ ಮಾಧ್ವ ಗುರೋತ್ತಮ ಪೇಜಾವರರು ತಮ್ಮದೇ ಮಠದ ಸ್ವಾಮಿಗಳು ಅದೇ ಸುಬ್ರಹ್ಮಣ್ಯದಲ್ಲಿ ಮುಗ್ಧ ಭಕ್ತರ ಮೇಲೆ ನಡೆಸುತ್ತಿರುವ ಈ ವಂಚನೆ -ದೋಖಾಗಳ ಬಗ್ಗೆ ಕಂಡೂಕಾಣದಂತೆ ಸುಮ್ಮನಿರುವುದು ಏನನ್ನು ಸೂಚಿಸುತ್ತದೆ?

● ಶಶಿ ಪುತ್ತೂರು, ದ.ಕ.

ಮುಳುಗುತ್ತಿರುವ ಬಿಜೆಪಿ ಹಡಗನ್ನು ತೊರೆಯುತ್ತಿರುವ ಹೆಗ್ಗಣಗಳು

ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಮೊನ್ನೆ ಗುಪ್ತಚರ ಇಲಾಖೆಯ ಅಧಿಕಾರಿಗಳು ಅಸೆಂಬ್ಲಿ ಚುನಾವಣೆಗೆ ಸಂಬಂಧಪಟ್ಟಂತೆ ಒಂದು ವರದಿಯನ್ನು ನೀಡಿದ್ದಾರೆ. ಈ ವರದಿ ಪ್ರಕಾರ ಬರುವ ಚುನಾವಣೆಯಲ್ಲಿ ಕಾಂಗ್ರೆಸ್ 90 ಸ್ಥಾನ, ಬಿಜೆಪಿ 50, ದಳ 65, ಕೆಜೆಪಿ 12, ಉಳಿದದ್ದು ಪಕ್ಷೇತರರು ಗೆಲ್ಲುತ್ತಾರೆ. ಇದರರ್ಥ ಅಧಿಕಾರಾರೂಢ ಬಿಜೆಪಿ ಮುಂದಿನ ಚುನಾವಣೆಯಲ್ಲಿ ಧೂಳೀಪಟ ಆಗುವುದು ಶತಸಿದ್ಧ.

ಈ ಗುಪ್ತಚರ ಇಲಾಖೆಯ ವರದಿಯನ್ನು ಬದಿಗಿಡಿ. ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಹಳ್ಳಿಯ ಹೈದನೊಬ್ಬ ವಿಶ್ಲೇಷಿಸಿದರೂ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ವಾಶ್‌ಔಟ್ ಆಗುತ್ತದೆ ಎಂದು ಸುಲಭವಾಗಿ ಹೇಳಬಲ್ಲ.



ಎಲ್ಲರಿಗೂ ಗೊತ್ತಿರುವಂತೆ ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿ 110 ಸ್ಥಾನಗಳನ್ನು ಗೆದ್ದಿತ್ತು. ಆಗ ತಮ್ಮ ಕುರ್ಚಿಯನ್ನು ಸುಭದ್ರ ಮಾಡಿಕೊಳ್ಳಲು ಯಡಿಯೂರಪ್ಪ 'ಆಪರೇಷನ್ ಕಮಲ' ಮಾಡಿ ತಮ್ಮ ಪರವಿದ್ದ ಶಾಸಕರ ಸಂಖ್ಯೆಯನ್ನು 122 ಕ್ಕೆ ಏರಿಸಿದ್ದರು. ಅವರು ಈ ರಾಜಕೀಯ ಶಸ್ತ್ರಚಿಕಿತ್ಸೆಯನ್ನು ಅದೆಷ್ಟು ಸುಲಲಿತವಾಗಿ ಮಾಡಿಮುಗಿಸಿದ್ದರೆಂದರೆ ಅಮೆರಿಕದ ಹೇಳಹೆಸರಿಲ್ಲದ ವಿಶ್ವವಿದ್ಯಾಲಯವೊಂದು ಅವರಿಗೆ ಗೌರವ ಡಾಕ್ಟರೇಟ್ ನೀಡಿತು. (ಅದನ್ನು ಯಡಿಯೂರಪ್ಪ ಖರೀದಿಸಿದರು ಎಂದು ಆರೋಪ ಮಾಡುವವರೇನು ಕಡಿಮೆ ಇಲ್ಲ ಬಿಡಿ!) ಆದರೀಗ ಬಿಜೆಪಿ ಶಾಸಕರ ಸಂಖ್ಯೆ 105ಕ್ಕೆ ಕುಸಿದಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಸಂಖ್ಯೆ 100ಕ್ಕಿಂತಲೂ ಕಡಿಮೆಗೆ ಕರಗುವ ಸಾಧ್ಯತೆಯಿದೆ. ಚುನಾವಣೆಯ ನಂತರ ಅದು 50ಕ್ಕಿಂತ ಕಡಿಮೆಯಾದರೂ ಯಾರೂ ಅಚ್ಚರಿಪಡುವುದಿಲ್ಲ.

ಸಾಮಾನ್ಯವಾಗಿ ಒಂದು ಪಕ್ಷ ಅಧಿಕಾರದಲ್ಲಿದ್ದು ಆನಂತರ ಚುನಾವಣೆಗಳನ್ನು ಎದುರಿಸಿದಾಗ ಅದರ ಮುಂದೆ ಒಂದು ಅವಕಾಶವಿರುತ್ತದೆ. ಅದೇನೆಂದರೆ ತಾನು ಅಧಿಕಾರದಲ್ಲಿದ್ದಾಗ ಮಾಡಿದ ಸಾಧನೆಗಳನ್ನು ಜನರ ಮುಂದಿಟ್ಟು ಅವರ ಬೆಂಬಲವನ್ನು ಕೋರುವುದು. ಆದರೆ ಬಿಜೆಪಿ ಮಾಡಿದ ಸ್ವಯಂಕೃತಾಪರಾಧಗಳಿಂದಾಗಿ ಅಂತಹ ಅವಕಾಶದಿಂದ ವಂಚಿತವಾಗಿದೆ.

ಯಾಕೆಂದರೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಹಿಂದೆಂದೂ ಕಾಣದಷ್ಟು ಒಳಜಗಳ, ಬಂಡಾಯ, ಭ್ರಷ್ಟಾಚಾರ, ಜಾತೀಯತೆ, ಧರ್ಮಾಂಧತೆ ಬಿಜೆಪಿಯ ಅವಧಿಯಲ್ಲಿ ನಡೆದಿದೆ. ಸಹಜವಾಗಿಯೇ ಬಿಜೆಪಿಯನ್ನು ಕಂಡರೆ ಜನ ಅಸಹ್ಯ ಪಡುವಂತಾಗಿದೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವಾಭಿಮಾನಿ ಕನ್ನಡಿಗರು ತಲೆತಗ್ಗಿಸುವಂತೆ ಮಾಡಿದ್ದು ಬಿಜೆಪಿಯ ಪರಮ ಸಾಧನೆ ಎಂಬಂತಾಗಿದೆ.

ಹೋದ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲು ಯಡಿಯೂರಪ್ಪ ಅದೆಷ್ಟು ಕಾರಣರಾಗಿದ್ದರೋ ಅದನ್ನು ಉಳಿಸಿಕೊಳ್ಳುವತ್ತ ಅಂದು ಬಳ್ಳಾರಿಯ ಗಣಿ ಕಳ್ಳರ ಗ್ಯಾಂಗಿನ ಪಾತ್ರವೂ ಅಷ್ಟೇ ಮುಖ್ಯವಾಗಿತ್ತು. ಆದರೀಗ ಬಿಜೆಪಿಯಲ್ಲಿ ಪ್ರಬಲ ಲಿಂಗಾಯತರ ಮತಗಳನ್ನು ಸೆಳೆಯುವ ಶಕ್ತಿಯನ್ನು ಹೊಂದಿದ್ದ ಯಡ್ಡಿಯೂ ಇಲ್ಲ, ಇತರೆ ಪಕ್ಷಗಳ ಶಾಸಕರನ್ನು ತಮ್ಮ ಅಕ್ರಮ ಹಣದಿಂದ ಸೆಳೆಯುತ್ತಿದ್ದ ಚೋರ ರೆಡ್ಡಿಗಳೂ ಇಲ್ಲ. ಯಡ್ಡಿ-ರೆಡ್ಡಿ ಇಲ್ಲದ ಬಿಜೆಪಿ ಇತ್ತ ಜಾತಿಬಲವೂ ಇಲ್ಲದೆ, ಅತ್ತ ಹಣ ಬಲವೂ ಇಲ್ಲದೆ ಸೊರಗಿದ ಸೌತೇಕಾಯಿಯಂತಾಗಿದೆ.

ಈಗ ಬಿಜೆಪಿಯ ಕಳಾಹೀನ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವಂತೆ ಕಾಣುತ್ತಿದೆ. ಯಡ್ಡಿ-ರೆಡ್ಡಿಯ ಕೃಪೆಯಿಂದ ತಮ್ಮ ಅಸಲಿ ಪಕ್ಷಗಳನ್ನು ತೊರೆದು ಬಿಜೆಪಿ ಸೇರಿದ್ದ ಸುಮಾರು 15 ಶಾಸಕ-ಮಂತ್ರಿಗಳು ಕಳೆದ ಐದು ವರ್ಷಗಳಿಂದ ಪ್ರಮುಖ ಸ್ಥಾನಗಳನ್ನು ಅಲಂಕರಿಸಿ, ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಕಷ್ಟು ಕಬಳಿಸಿ ಈಗ ಬಿಜೆಪಿಗೆ ಗುಡ್‌ಬೈ ಹೇಳಲು ಸಜ್ಜಾಗಿದ್ದಾರೆ. ಅವರಷ್ಟೇ ಅಲ್ಲದೆ ಹಲವಾರು ಅಸಲಿ ಬಿಜೆಪಿ ಶಾಸಕರೂ ಇದೇ ಪಕ್ಷದಲ್ಲಿ ಉಳಿದರೆ ತಮಗೆ ರಾಜಕೀಯ ಅಸ್ತಿತ್ವವೇ ಇಲ್ಲದಂತಾಗುತ್ತದೆ ಎಂದು ಅರಿತು ಕಮಲಕ್ಕೆ ಟಾಟಾ ಹೇಳಲು ಸಿದ್ಧರಾಗಿದ್ದಾರೆ. ಇಂತಹ ಪಕ್ಷಾಂತರಿಗಳಲ್ಲಿ ಹಲವರು ಕಾಂಗ್ರೆಸ್ ಬಾಗಿಲನ್ನು ತಟ್ಟುತ್ತಿದ್ದರೆ, ಇನ್ನೂ ಕೆಲವರು ಜೆಡಿಎಸ್‌ನತ್ತ ಆಸೆಗಣ್ಣಿನಿಂದ ನೋಡುತ್ತಿದ್ದಾರೆ. ಹಾಗೆಯೇ ಬೆರಳೆಣಿಕೆಯಷ್ಟು ಜನ ಯಡ್ಡಿಯ ಕೆಜೆಪಿಯತ್ತ ಹೆಜ್ಜೆ ಹಾಕುತ್ತಿದ್ದಾರೆ.

ಸಾಮಾನ್ಯವಾಗಿ ಹಡಗೊಂದು ಮುಳುಗಲಾರಂಭಿಸಿದಾಗ ಅದರಲ್ಲಿರುವ ಹೆಗ್ಗಣಗಳು ಮೊದಲು ಸಮುದ್ರಕ್ಕೆ ಹಾರಿ ತಮ್ಮ ಪ್ರಾಣವನ್ನು ಉಳಿಸಿಕೊಳ್ಳುತ್ತವಂತೆ. ಹಾಗೆಯೇ ಈಗ ಬಿಜೆಪಿಯಲ್ಲಿರುವ ಹೆಗ್ಗಣಗಳೂ ಬಿಜೆಪಿಯೆಂಬ ಮುಳುಗುತ್ತಿರುವ ಹಡಗಿನಿಂದ ಎಸ್ಕೇಪ್ ಆಗುತ್ತಿದ್ದಾವೆ! ಹೀಗೆ ಎಸ್ಕೇಪ್ ಆದ ಹೆಗ್ಗಣಗಳಿಗೆ ವಿರೋಧಿ ಪಕ್ಷಗಳು ಆಶ್ರಯ ನೀಡುತ್ತಿರುವುದೂ ಚೆಡ್ಡಿಗಳ ಆತಂಕವನ್ನು ಹೆಚ್ಚಿಸಿದೆ.

ಅಂದರೆ ಕರ್ನಾಟಕದಲ್ಲಿ ಬಿಜೆಪಿ ತನ್ನ ನಾಯಕರ ಗುದ್ದಾಟದಿಂದ, ಕಪಟತನದಿಂದ, ಭ್ರಷ್ಟಾಚಾರದಿಂದ, ಜನದ್ರೋಹಿ ನೀತಿಗಳಿಂದ ಕೊನೆಯುಸಿರೆಳೆಯಲಿದೆ. ಸೋಜಿಗದ ಸಂಗತಿ ಯಾವುದೆಂದರೆ ಯಾವ ಯಡ್ಡಿ ಪ್ರಥಮ ಬಾರಿಗೆ ಬಿಜೆಪಿಯನ್ನು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ತಂದಿದ್ದರೋ ಅದೇ ಯಡ್ಡಿ ಇವತ್ತು ಬಿಜೆಪಿಯ ಶವಪೆಟ್ಟಿಗೆಯನ್ನು ಸಿದ್ಧಮಾಡಿದ್ದಾರೆ. ಅಷ್ಟೇ ಅಲ್ಲ, ಆ ಶವಪೆಟ್ಟಿಗೆಯನ್ನು ಭದ್ರವಾಗಿ ಮುಚ್ಚಲು ಮೊಳೆಯನ್ನು ಹಿಡಿದು ರೆಡ್ಡಿ ಗ್ಯಾಂಗ್ ನಿಂತಿದೆ.



ಆದರೂ ಬಿಜೆಪಿಯ ಚೆಡ್ಡಿಗಳದ್ದು ಎಂತಹ ಭಂಡತನವೆಂದರೆ "ಯಡಿಯೂರಪ್ಪ ಮತ್ತು ಜನಾರ್ದನ ರೆಡಿ ಗ್ಯಾಂಗ್ ಇಲ್ಲದ ಬಿಜೆಪಿ ಈಗ ಅತ್ಯಂತ ಸ್ವಚ್ಛವಾಗಿದೆ, ಆರೋಗ್ಯಕರವಾಗಿದೆ. ಯಡಿಯೂರಪ್ಪನಿಂದಾಗಿ ನಮ್ಮ ಪಕ್ಷ ಲಿಂಗಾಯತರ ಪಕ್ಷ ಎಂಬ ಅಪಖ್ಯಾತಿಗೆ ಒಳಗಾಗಿತ್ತು. ಈಗ ಯಡಿಯೂರಪ್ಪ ನಮ್ಮ ಜೊತೆ ಇಲ್ಲದಿರುವುದರಿಂದ ಆ ಅಪಖ್ಯಾತಿಯೂ ನಮ್ಮಿಂದ ದೂರವಾಗಿದೆ. ಇದರಿಂದಾಗಿ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಮತ್ತು ಹುಮ್ಮಸ್ಸು ದುಪ್ಪಟ್ಟಾಗಿದೆ" ಎಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದಾರೆ. ಅಂದರೆ ಯಡ್ಡಿ ಮತ್ತು ರೆಡ್ಡಿ ಗ್ಯಾಂಗ್ ಬಿಜೆಪಿಯಿಂದ ಹೊರಹೋದ ಮಾತ್ರಕ್ಕೆ ಬಿಜೆಪಿ ಸರ್ಕಾರ ಮಾಡಿದ ಎಲ್ಲ ಅವಾಂತರಗಳನ್ನು, ಭ್ರಷ್ಟಾಚಾರವನ್ನು, ಕೋಮುದಳ್ಳುರಿಯನ್ನು, ವಿವಿಧ ಬಗೆಯ ಹಗರಣಗಳನ್ನು ಜನ ಮರೆತು ಮತ್ತೆ ಕಮಲ ಗುರುತಿಗೆ ತಮ್ಮ ಮತವನ್ನು ಗುದುಮುತ್ತಾರೆಂದು ಚೆಡ್ಡಿಗಳು ಭ್ರಮಿಸುತ್ತಿದ್ದಾರೆ.

ಕಳೆದ ಬಾರಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಬಿಜೆಪಿ ಸಮೃದ್ಧವಾದ ಫಸಲನ್ನು ತೆಗೆದಿತ್ತು, ಆದರೆ ಈಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. ಕರಾವಳಿ ಪ್ರದೇಶದಲ್ಲಿ ಈಗ ಬಿಜೆಪಿಯ ಶಕ್ತಿ ಗಣನೀಯವಾಗಿ ಕುಂದಿದೆ. ಚೆಡ್ಡಿಗಳ ಅವಾಂತರವನ್ನು ಫಸ್ಟ್ ಹ್ಯಾಂಡ್‌ಆಗಿ ಅನುಭವಿಸಿರುವ ಕರಾವಳಿಯ ಜಾತ್ಯತೀತರು ಒಗ್ಗಟ್ಟಾಗಿ ಕೇಸರಿ ಪೀಡಕರಿಗೆ ಬುದ್ಧಿ ಕಲಿಸಲು ಸಜ್ಜಾಗಿದ್ದಾರೆ. ಹಾಗೆಯೇ ಮಲೆನಾಡೆಂದರೆ ಯಡ್ಡಿಯ ಶಿವಮೊಗ್ಗ ಜಿಲ್ಲೆ ಮಾತ್ರ ಎಂಬುದೂ ಆ ಪ್ರದೇಶದ ಜನರಿಗೆ ಮನದಟ್ಟಾಗಿದೆ. ಇದಕ್ಕೆ ಕಾರಣ ಯಡ್ಡಿ ಮುಖ್ಯಮಂತ್ರಿ ಆಗಿದ್ದಾಗ ತನ್ನ ತವರುಜಿಲ್ಲೆಯಾದ ಶಿವಮೊಗ್ಗದ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿ ಸುರಿದರೇ ವಿನಃ ಅಕ್ಕಪಕ್ಕದ ಇತರೆ ಮಲೆನಾಡಿನ ಜಿಲ್ಲೆಗಳತ್ತ ತಿರುಗಿಯೂ ನೋಡಲಿಲ್ಲ. ಸಹಜವಾಗಿಯೇ ಈ ಜಿಲ್ಲೆಗಳ ಜನ ಬಿಜೆಪಿ ವಿರುದ್ಧ ಕೆಂಡಕಾರುತ್ತಿದ್ದಾರೆ.

ಇನ್ನು ಹಳೇ ಮೈಸೂರಿನ ಮಂಡ್ಯ, ಹಾಸನ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮೊದಲಿನಿಂದಲೂ ಬಿಜೆಪಿ ದುರ್ಬಲ. ಹೀಗಾಗಿ ಇಲ್ಲಿ ಬಿಜೆಪಿ ಎಷ್ಟೇ ತಿಣುಕಾಡಿದರೂ ಒಬ್ಬನೇ ಒಬ್ಬ ಚೆಡ್ಡಿ ಗೆಲ್ಲಲಾರ. ಹಾಗೆಯೇ ಬಳ್ಳಾರಿ ಮತ್ತು ಅದರ ಸುತ್ತಮುತ್ತಲ ಆರು ಜಿಲ್ಲೆಗಳಲ್ಲಿ ಇಂದಿಗೂ ಗಣಿ ಕಳ್ಳ ರೆಡ್ಡಿಗಳದ್ದೇ ದರ್ಬಾರು. ಹೀಗಾಗಿ ಬಳ್ಳಾರಿ ಕೋಟೆಯ ಮೇಲೆ ಬಿಜೆಪಿಯ ಕೇಸರಿಬಾವುಟ ಈ ಬಾರಿ ಹಾರಲಾರದು.

ಬಿಜೆಪಿ "ಜಗದೀಶ್ ಶೆಟ್ಟರ್ ಅವರೇ ನಮ್ಮ ಮುಂದಿನ ಮುಖ್ಯಮಂತ್ರಿ," ಎಂದು ಈಗಾಗಲೇ ಘೋಷಿಸಿರುವುದರಿಂದ ಹುಬ್ಬಳ್ಳಿ-ಧಾರವಾಡ-ಬೆಳಗಾವಿ ಜಿಲ್ಲೆಗಳಲ್ಲಿ ಬಿಜೆಪಿಯ ಹಲವರು ಗೆಲ್ಲಬಹುದು. ಈ ಎಲ್ಲದರ ಹಿನ್ನೆಲೆಯಲ್ಲಿ ನೋಡಿದರೆ ಶೆಟ್ಟರ್ ಅವರಿಗೆ ಗುಪ್ತಚರ ಇಲಾಖೆಯವರು ಕೊಟ್ಟ 'ರಿಪೋರ್ಟ್ ಕಾರ್ಡ್' ಸರಿಯಾದದ್ದು ಎನಿಸುತ್ತದೆ.


● ಶೆಣೈ

ಪೂಜಾ ಇನ್ ರಕ್ಷಿತಾ ಔಟ್?

'ದಂಡುಪಾಳ್ಯ' ಸಿನಿಮಾ ಖ್ಯಾತಿಯ ಪೂಜಾ ಗಾಂಧಿ ಸಿನಿಮಾಗಳಲ್ಲಿ ತನ್ನ ಉಡುಪುಗಳನ್ನು ಬದಲಾಯಿಸಿದಷ್ಟೇ ಸಲೀಸಾಗಿ ರಾಜಕೀಯ ಪಕ್ಷಗಳನ್ನೂ ಬದಲಾಯಿಸುತ್ತಿರುವುದು ಮಜಬೂತಾಗಿದೆ.

ಒಂದೆರಡು ತಿಂಗಳುಗಳ ಹಿಂದೆ ಹಾವೇರಿಯಲ್ಲಿ ನಡೆದ ಸಮಾವೇಶದಲ್ಲಿ ಯಡ್ಡಿಯ ಕರ್ನಾಟಕ ಜನತಾ ಪಕ್ಷ ಸೇರಿದ ಪೂಜಾ ಗಾಂಧಿ ಅಂದಿನ ಸಭೆಯಲ್ಲಿ "ಯಡಿಯೂರಪ್ಪ ಅಂದರೆ ಒಂದು ವ್ಯಕ್ತಿ ಮಾತ್ರವಲ್ಲ, ಬದಲಾಗಿ ಅವರೊಂದು ಶಕ್ತಿ" ಎಂದು ಘೋಷಿಸಿ ಪುಕ್ಕಟೆಯಾಗಿ ಚಪ್ಪಾಳೆ ಮತ್ತು





ಸೀಟುಗಳನ್ನು ಗಳಿಸಿದ್ದಳು. ಆದರೀಗ ಆಕೆ ಕೆಜೆಪಿ ತೊರೆದು ಗಣಿ ಕಳ್ಳ ರೆಡ್ಡಿ ಗ್ಯಾಂಗಿನ 'ಬಡವ ಶ್ರಮಿಕ ರೈತ ಕಾಂಗ್ರೆಸ್' ಎಂಬ ಢೋಂಗಿ ಪಕ್ಷವನ್ನು ಸೇರುವ ಸೂಚನೆಗಳು ಕಂಡುಬರುತ್ತಿವೆ.

ರಾಜಕೀಯ ಅಂದರೆ ಸಿನಿಮಾಗಳಲ್ಲಿ ನಟಿಸುವುದಕ್ಕೆ ಸಮಾ ಎಂದು ಪೂಜಾ ಗಾಂಧಿ ಭಾವಿಸಿರುವಂತಿದೆ. ಪಾಪ, ಅದು ಆಕೆಯ ತಪ್ಪಲ್ಲ ಬಿಡಿ. ವೃತ್ತಿ ರಾಜಕಾರಣಿಗಳೇ ಪಕ್ಷ, ಸಿದ್ಧಾಂತ ಇತ್ಯಾದಿಗಳನ್ನು ಮರೆತು ಅಧಿಕಾರಕ್ಕಾಗಿ ಅವಕಾಶವಾದಿ ರಾಜಕಾರಣದಲ್ಲಿ ತೊಡಗಿರುವಾಗ ಆಕೆಗಾದರೂ ಪಕ್ಷ ನಿಷ್ಠೆಯ ಬಗ್ಗೆ ಹೇಳುವವರು ಯಾರು?!

ಸಿನಿಮಾಗಳಲ್ಲಿ ಅವಕಾಶಗಳು ಕ್ಷೀಣಿಸಲಾರಂಭಿಸಿದಾಗ ಪೂಜಾ ಮೊದಲು ಹೆಜ್ಜೆ ಹಾಕಿದ್ದು ಜಾತ್ಯತೀತ ಜನತಾ ದಳದತ್ತ. ಅದೇ ಹೊತ್ತಿಗೆ ಆಕೆ ನಟಿಸಿದ್ದ 'ದಂಡುಪಾಳ್ಯ' ಎಂಬ ಸಿನಿಮಾವನ್ನೇ ಬಂಡವಾಳ ಮಾಡಿಕೊಂಡ ಯಡ್ಡಿಯ ಭಂಟ ಆಯನೂರು ಮಂಜುನಾಥ್ "ಕುಮಾರಸ್ವಾಮಿ ದಂಡುಪಾಳ್ಯದ ಗ್ಯಾಂಗಿನೊಂದಿಗೆ ಜನರ ಮುಂದೆ ಬರಲಿದ್ದಾರೆ" ಎಂದು ಲೇವಡಿ ಮಾಡಿದರು. ಸಹಜವಾಗಿಯೇ ಆಯನೂರು ಮಂಜುನಾಥರ ಮಾತಿನಿಂದ ಪೂಜಾಳ ಮನಸ್ಸಿಗೆ ನೋವಾಗಿತ್ತು. ಸಿನಿಮಾ ನಿರ್ಮಾಪಕರೂ ಆದ, ಓರ್ವ ಸಿನಿಮಾ ನಟಿಯನ್ನು ಮದುವೆಯೂ ಆಗಿರುವ ಜೆಡಿಎಸ್ ನಾಯಕ ಕುಮಾರಸ್ವಾಮಿ ತನ್ನ ಪರ ನಿಲ್ಲುತ್ತಾರೆಂದು ಅವತ್ತು ಪೂಜಾ ಆಶಿಸಿರಲಿಕ್ಕೂ ಸಾಕು. ಆದರೆ ಕುಮಾರಸ್ವಾಮಿ "ಪೂಜಾ ಗಾಂಧಿ ನಮ್ಮ ಪಕ್ಷದಲ್ಲಿ ಇದ್ದರೆಷ್ಟು ಬಿಟ್ಟರೆಷ್ಟು" ಎಂಬಂತಹ ಹೇಳಿಕೆ ನೀಡಿದ್ದರಿಂದ ಪೂಜಾಳಿಗೆ ಅಪಾರ ನಿರಾಶೆಯಾಗಿತ್ತು.

"ಯಾವ ಪಕ್ಷದಲ್ಲಿ ಹೆಣ್ಣುಮಕ್ಕಳಿಗೆ ಗೌರವ ಸಿಗುವುದಿಲ್ಲವೋ, ಅವರ ಸ್ವಾಭಿಮಾನಕ್ಕೆ ಧಕ್ಕೆ ಬರುತ್ತದೋ ಅಂತಹ ಪಕ್ಷದಲ್ಲಿ ಅಥವಾ ಅಂತಹ ವ್ಯಕ್ತಿ ಜೊತೆಗೆ ನಾನು ಒಂದು ಕ್ಷಣವೂ ಇರುವುದಿಲ್ಲ" ಎಂದು ಗುಡುಗಿದ ಪೂಜಾ ಕೆಜೆಪಿಯತ್ತ ದೃಷ್ಟಿಹರಿಸಿದಳು. ಈಕೆ ರಾಜಕೀಯವಾಗಿ ಅದೆಷ್ಟು ಬಾಲಿಶೆ ಎಂದರೆ ಕೆಜೆಪಿಯ ಸರ್ವಾಧಿಕಾರಿ ಯಡ್ಡಿಯ ಪರಮ ಭಂಟ ಆಯನೂರು ತಾನು ಜೆಡಿಎಸ್ ತೊರೆಯುವುದಕ್ಕೆ ಕಾರಣಪುರುಷನಾಗಿದ್ದ ಎಂಬುದನ್ನೇ ಸಂಪೂರ್ಣವಾಗಿ ಮರೆತಳು!

ತಮಾಷೆಯ ಸಂಗತಿ ಯಾವುದೆಂದರೆ ಮಹಿಳೆಯರಿಗೆ ಮಾನಮರ್ಯಾದೆ ಕೊಡುವ ಪಕ್ಷ ಎಂದು ಕೆಜೆಪಿ ಸೇರಿದ್ದ ಪೂಜಾಳನ್ನು ಅವಮಾನಿಸಿದ್ದು ಬೇರೆ ಯಾರೂ ಅಲ್ಲವಂತೆ, ಬದಲಾಗಿ ಯಡ್ಡಿಯ ಬಲಗೈನಂತಿರುವ ಶೋಭಾ ಕರಂದ್ಲಾಜೆ ಎಂಬ ಮಹಿಳೆಯಂತೆ!

ಕೆಜೆಪಿ ಮೂಲಗಳೇ ಹೇಳುವ ಪ್ರಕಾರ ಇದು ನಡೆದದ್ದು ಚಿಕ್ಕಮಗಳೂರಿನಲ್ಲಿ ನಡೆದ ಸಮಾರಂಭದಲ್ಲಿ. ಅಂದು ಕೆಜೆಪಿಯ ನಾಯಕರೊಂದಿಗೆ ವೇದಿಕೆ ಮೇಲೆ ಕುಳಿತಿದ್ದ ಪೂಜಾ ಇತರರು ಭಾಷಣ ಮಾಡುತ್ತಿದ್ದಾಗ ಸಭಿಕರಲ್ಲಿದ್ದ ಅಭಿಮಾನಿಗಳತ್ತ ಕೈಬೀಸುತ್ತ ಫೋಟೋಗೆ ಪೋಸ್ ಕೊಡುತ್ತಿದ್ದಳಂತೆ. ಅದನ್ನು ಗಮನಿಸಿದ ಶೋಭಕ್ಕ ಪೂಜಾಳನ್ನು ವೇದಿಕೆಯ ಮೇಲೆಯೇ ತರಾಟೆಗೆ ತೆಗೆದುಕೊಂಡರಂತೆ. "ಇದು ಸಿನಿಮಾ ಅಲ್ಲ, ರಾಜಕೀಯ ಸಭೆ. ಇಲ್ಲಿ ಸ್ವಲ್ಪ ಗಂಭೀರವಾಗಿರಬೇಕು" ಎಂದು ಶೋಭಕ್ಕ ಪೂಜಾಗೆ ಗರಂ ಆಗಿಯೇ ಹೇಳಿದರಂತೆ. ಈ ಘಟನೆಯ ನಂತರ ಪೂಜಾ ಕೆಜೆಪಿಯ ಯಾವುದೇ ಸಭೆಸಮಾರಂಭಗಳಲ್ಲಿ ಕಾಣಿಸಿಕೊಳ್ಳಲಿಲ್ಲವಂತೆ.

ಅಷ್ಟೇ ಅಲ್ಲ "ಎಲ್ಲಿಯತನಕ ಕೆಜೆಪಿಯಲ್ಲಿ ಶೋಭಾ ಕರಂದ್ಲಾಜೆ ಇರುತ್ತಾರೋ ಅಲ್ಲಿಯತನಕ ನನಗೆ ಈ ಪಕ್ಷದಲ್ಲಿ ಚಿಕ್ಕಾಸೂ ಭವಿಷ್ಯವಿಲ್ಲ" ಎಂಬ ಅಪ್ರಿಯ ಸತ್ಯವನ್ನು ಅರಿತ ಪೂಜಾ ಬಂದದಾರಿಗೆ ಸುಂಕವಿಲ್ಲ ಎಂದು ಚುನಾವಣೆಗಳು ನಡೆಯುವ ಮುನ್ನವೇ ಕೆಜೆಪಿಯಿಂದ ಹೊರ ನಡೆಯಲು ನಿರ್ಧರಿಸಿದಳಂತೆ.

ಇದಕ್ಕೆ ಸರಿಯಾಗಿ ಯಾರದ್ದೇ ಹಿನ್ನೆಲೆ, ಅನುಭವ, ಸೈದ್ಧಾಂತಿಕ ನಿಲುವುಗಳ ಬಗ್ಗೆ ಕಿಂಚಿತ್ತೂ ಯೋಚಿಸದೆ ಎಲ್ಲರನ್ನೂ 'ತುಂಬು ಕೈಗಳಿಂದ' ಸ್ವಾಗತಿಸುವ ಬಿಎಸ್‌ಆರ್ ಕಾಂಗ್ರೆಸ್ ಎಂಬ ಪಕ್ಷದ ನಾಯಕ ಶ್ರೀರಾಮುಲು ಸಂತೋಷದಿಂದ ಪೂಜಾಳನ್ನು ತಮ್ಮ ಪಕ್ಷಕ್ಕೆ ಬರಮಾಡಿಕೊಳ್ಳಲು ಸಜ್ಜಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಪೂಜಾ ಮತ್ತು ಶ್ರೀರಾಮುಲು ನಡುವೆ ಈಗಾಗಲೇ ಒಂದು ಸುತ್ತಿನ ಮಾತುಕತೆ ಮುಗಿದಿದೆಯಂತೆ.

ಅಂದಹಾಗೆ, ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ಪೂಜಾ ಸೇರಲಿದ್ದಾಳೆ ಎಂಬ ಸುದ್ದಿಯ ಬೆನ್ನಲ್ಲೇ ಈ ಹಿಂದೆ ಆ ಪಕ್ಷವನ್ನು ಸೇರಿ ಸಲೀಸಾಗಿ ಅದರ ಉಪಾಧ್ಯಕ್ಷೆ ಸ್ಥಾನವನ್ನೂ ಗಿಟ್ಟಿಸಿಕೊಂಡಿದ್ದ ಕನ್ನಡ ಚಿತ್ರರಂಗದ ಮತ್ತೋರ್ವ ಮಾಜಿ ನಟಿ ರಕ್ಷಿತಾ ಈಗ ಆ ಪಕ್ಷದಿಂದ ದೂರವಾಗಲಿದ್ದಾರೆಂಬ ಸುದ್ದಿಯೂ ಕೇಳಿಬರುತ್ತಿದೆ.


ಪೂಜಾ ಬಿಎಸ್‌ಆರ್ ಪಕ್ಷವನ್ನು ಸೇರುವುದಕ್ಕೂ, ರಕ್ಷಿತಾ ಅಲ್ಲಿಂದ ಜಾಗ ಖಾಲಿ ಮಾಡುವುದಕ್ಕೂ ಏನಾದರೂ ಸಂಬಂಧ ಇದೆಯಾ ಎಂಬುದು ಸ್ಪಷ್ಟವಾಗಿಲ್ಲ.

ಅದೇನೇ ಇದ್ದರೂ ಈ ಬಾರಿಯ ಚುನಾವಣೆಯ ಮೊದಲೇ ಸಿನಿಮಾ ರಂಗದವರ ರಾಜಕೀಯವೂ ದಿನದಿಂದ ದಿನಕ್ಕೆ ರಂಗೇರುತ್ತಿದ್ದು ಕನ್ನಡ ಸಿನಿಮಾ ಪ್ರೇಕ್ಷಕರಿಗೆ ಪುಕ್ಕಟೆ ಮನರಂಜನೆ ನೀಡುತ್ತಿದೆ!! ●


ಯಾರೇ ನಾಯಕರಾದರೂ ಬಿಜೆಪಿ ಬರಕತ್ತಾಗುವುದಿಲ್ಲ

ಹಿಂದೊಂದು ಕಾಲವಿತ್ತು, ಆಗ ಬಿಜೆಪಿಯನ್ನು ಬ್ರಾಹ್ಮಣರ-ಬನಿಯಾಗಳ (ವ್ಯಾಪಾರಸ್ಥರ) ಪಾರ್ಟಿ ಎಂದು ಎಲ್ಲರೂ ಜರೆಯುತ್ತಿದ್ದರು. ಆಗ ಆ ಪಕ್ಷ ಯಾವುದೇ ರಾಜ್ಯದಲ್ಲಿ ಹಲವು ಸೀಟುಗಳನ್ನು ಗೆದ್ದರೆ ಅದೇ ದೊಡ್ಡ ಸಾಹಸವಾಗುತ್ತಿತ್ತು.

ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡ ಗೋವಿಂದಾಚಾರ್ಯ ಎಂಬ ಬ್ರಾಹ್ಮಣ ಬಿಜೆಪಿಯಲ್ಲಿ 'ಸೋಷಿಯಲ್ ಇಂಜನಿಯರಿಂಗ್' ಎಂಬ ನಾಟಕಕ್ಕೆ ಚಾಲನೆ ನೀಡಿದ. ಈ ನಾಟಕ ಅದೆಷ್ಟು ಯಶಸ್ವಿ ಆಯಿತೆಂದರೆ ಉತ್ತರ ಪ್ರದೇಶದಲ್ಲಿ ಕಲ್ಯಾಣ್ ಸಿಂಗ್, ಮಧ್ಯ ಪ್ರದೇಶದಲ್ಲಿ ಉಮಾ ಭಾರತಿ ತರಹದ ಹಿಂದುಳಿದ ವರ್ಗಗಳ ನಾಯಕರ ನೇತೃತ್ವದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆಯನ್ನೇರಿತು. ಹೀಗೆ ಗೆದ್ದ ನಂತರ ಬಿಜೆಪಿಯ ಪುರೋಹಿತಶಾಹಿಗಳು ಅದೇ ಕಲ್ಯಾಣ್ ಸಿಂಗ್ ಮತ್ತು ಉಮಾ ಭಾರತಿಯನ್ನು ಮೂಲೆಗುಂಪು ಮಾಡಿ ತನ್ನ ಹಿಂದೂತ್ವವಾದಿ ಧೋರಣೆಯನ್ನು ಮುಂದುವರಿಸಬಲ್ಲಂತಹ ಜನರಿಗೆ ಅಧಿಕಾರ ಕೊಟ್ಟಿದ್ದು ಇನ್ನೊಂದು ಕತೆ...



ಕರ್ನಾಟಕದಲ್ಲೂ ಆದದ್ದು ಅದೇ. ಆರಂಭದಲ್ಲಿ ರಾಜ್ಯದಲ್ಲಿ ಬಿಜೆಪಿಯನ್ನು ಗಟ್ಟಿಗೊಳಿಸಿದ್ದು ಎ.ಕೆ.ಸುಬ್ಬಯ್ಯ ಎಂಬ ಕೊಡವ (ಅದರ ಬಗ್ಗೆ ಅವರು ಇವತ್ತಿಗೂ ಪಶ್ಚಾತ್ತಾಪವನ್ನು ಹೊಂದಿದ್ದಾರೆ). ಆನಂತರ ಅದನ್ನು ಬೆಳೆಸಿದ್ದು ಬಿ.ಬಿ.ಶಿವಪ್ಪ ಎಂಬ ಲಿಂಗವಂತ. ಆದರೂ ನಾಲ್ಕಕ್ಕೆ ಏರದ, ಎರಡಕ್ಕೆ ಇಳಿಯದ ಸ್ಥಿತಿಯಲ್ಲಿದ್ದ ಬಿಜೆಪಿಗೆ ರಾಜ್ಯದಲ್ಲಿ ನೆರವು ನೀಡಿದ್ದು ರಾಮಕೃಷ್ಣ ಹೆಗಡೆ ಎಂಬ ಬ್ರಾಹ್ಮಣ.



80ರ ದಶಕದಲ್ಲಿ ಅಲ್ಪಸಂಖ್ಯಾತ ಜನತಾ ಸರ್ಕಾರದ ನೇತೃತ್ವವನ್ನು ವಹಿಸಿಕೊಂಡ ಹೆಗಡೆ ತನ್ನ ಸ್ಥಾನವನ್ನು ಭದ್ರಮಾಡಿಕೊಳ್ಳುವ ನಿಟ್ಟಿನಲ್ಲಿ ಬಿಜೆಪಿಯ ಬೆಳವಣಿಗೆಗೆ ಬುನಾದಿ ಹಾಕಿದರು. ಆದರೆ ಕಾಲಕ್ರಮೇಣ ಪ್ರಥಮ ಜನತಾ ಸರ್ಕಾರ ಪತನಗೊಳ್ಳುವ ಹೊತ್ತಿಗೆ ಇಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿತ್ತೆಂದರೆ ಕಾಂಗ್ರೆಸ್ ಹಿಂದುಳಿದ ವರ್ಗಗಳ ಪಕ್ಷ, ಜನತಾದಳ ದೇವೇಗೌಡರ ಒಕ್ಕಲಿಗರ ಪಕ್ಷ ಎಂಬಂತಾಗಿತ್ತು. ಅಷ್ಟೇ ಅಲ್ಲ, ಲಿಂಗಾಯತರಿಗೆ ಈ ಎರಡೂ ಪಕ್ಷಗಳಲ್ಲಿ ನ್ಯಾಯ ಇರಲಿ, ಸ್ಥಾನಮಾನವೂ ಇಲ್ಲ ಎಂಬ ಮನಸ್ಥಿತಿ ಆ ಜಾತಿಯ ಜನರಲ್ಲಿ ಮೂಡಿತ್ತು.

ಇದರ ಲಾಭವನ್ನು ಪಡೆಯಲೆಂದೇ ಬಿಜೆಪಿಯ ಕೇಂದ್ರ ನಾಯಕರು ಒಂದು ಸ್ಕೆಚ್ ರೂಪಿಸಿದರು. ಅದರ ಪ್ರಕಾರ ಅಲ್ಲಿಯತನಕ ಬಿಜೆಪಿಯ ಮುಖವಾಗಿದ್ದ ಬ್ರಾಹ್ಮಣ ಅನಂತಕುಮಾರ್ ಜೊತೆಗೆ ಲಿಂಗಾಯತ ಯಡಿಯೂರಪ್ಪನನ್ನೂ ತನ್ನ ನಾಯಕ ಎಂದು ಬಿಂಬಿಸಲಾರಂಭಿಸಿತು. ಆ ಮೂಲಕ ತಾನು ಜನವಾರಿಗಳ ಪಕ್ಷವಲ್ಲ ಎಂದು ಕರ್ನಾಟಕದ ಸೌಹಾರ್ದಪ್ರಿಯ ಜನರನ್ನು ಮರುಳು ಮಾಡಲು ಮುಂದಾಯಿತು.

ರಾಜ್ಯ ರಾಜಕೀಯದ ವಿದ್ಯಮಾನಗಳು ಸಹ ಬಿಜೆಪಿ ಜಾಕ್‌ಪಾಟ್ ಹೊಡೆಯುವಂತೆ ಸಹಕರಿಸಿದವು. ಧರಮ್ ಸಿಂಗ್ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಸರ್ಕಾರಕ್ಕೆ ಧೋಕಾ ಬಗೆದ ಕುಮಾರಸ್ವಾಮಿ ಯಡಿಯೂರಪ್ಪನೊಂದಿಗೆ ಕೈಜೋಡಿಸಿ 'ಅನೈತಿಕ' ಸರ್ಕಾರ ಸ್ಥಾಪಿಸಲು ಮುಂದಾದರು. ಅಷ್ಟೇ ಅಲ್ಲದೆ ಮುಂಚಿತವಾಗಿ ಆಗಿದ್ದ ಒಪ್ಪಂದದಂತೆ 20 ತಿಂಗಳ ಅವಧಿಯನ್ನು ಮುಖ್ಯಮಂತ್ರಿಯಾಗಿ ಪೂರೈಸಿದ ಕುಮಾರಸ್ವಾಮಿ ಬಿಜೆಪಿಯ ಯಡ್ಡಿಗೆ ಸರ್ಕಾರವನ್ನು ಮುಂದುವರೆಸುವ ಅವಕಾಶವನ್ನು ನಿರಾಕರಿಸಿದರು.


ಬಿಜೆಪಿಯ ಚೆಡ್ಡಿಗಳಿಗೆ ಅದೇ ಸದವಕಾಶವಾಯಿತು. ಕಾಂಗ್ರೆಸ್ ಮತ್ತು ಜೆಡಿಎಸ್ ಆಡಿ ಲಿಂಗಾಯತರಿಗೆ ಅನ್ಯಾಯವಾಗುತ್ತಿದೆ ಎಂದು ಯಡ್ಡಿ ರಾಜ್ಯಾದ್ಯಂತ ಬೊಬ್ಬೆ ಹಾಕಿದರು. ಪುರೋಹಿತಶಾಹಿಗಳ ಅಸಲಿ ಕರಾಮತ್ತನ್ನು ಅರ್ಥ ಮಾಡಿಕೊಳ್ಳದ ಬಸವಣ್ಣನ ಅನುಯಾಯಿಗಳು ಬಿಜೆಪಿಗೆ ಬೆಂಬಲ ನೀಡಿದ್ದರಿಂದ ಆ ಪಕ್ಷ ಪ್ರಥಮ ಬಾರಿಗೆ 110 ಕ್ಷೇತ್ರಗಳಲ್ಲಿ ಗೆದ್ದಿತು.

ಆದರೀಗ ಬಿಜೆಪಿಯ ಪರಿಸ್ಥಿತಿ ಹೇಗಾಗಿದೆ ಎಂದರೆ ಇತ್ತ ಜಗದೀಶ್ ಶೆಟ್ಟರ್ ಅವರನ್ನು ಲಿಂಗಾಯತರು ತಮ್ಮ ನಾಯಕ ಎಂದು ಸ್ವೀಕರಿಸುವ ಮನಸ್ಥಿತಿಯಲ್ಲಿಲ್ಲ, ಹಾಗೆಯೇ ಈಶ್ವರಪ್ಪನನ್ನು ಆತನ ಕುರುಬ ಸಮುದಾಯದವರೂ ಪ್ರಶ್ನಾತೀತ ನಾಯಕ ಎಂದು ಪರಿಗಣಿಸುವುದಿಲ್ಲ. ಇನ್ನು ಅನಂತ ಕುಮಾರ್ ಎಂಬ ಬ್ರಾಹ್ಮಣನನ್ನು ರಾಜ್ಯದ ಮೇಲೆ ಹೇರುವುದನ್ನು ಯಾರೂ ಒಪ್ಪುವುದಿಲ್ಲ.

ಇತ್ತ ಅಲ್ಪಸಂಖ್ಯಾತ ಬ್ರಾಹ್ಮಣರ ಪಕ್ಷವೂ ಅಲ್ಲದ, ಅತ್ತ ಪ್ರಬಲ ಲಿಂಗಾಯತರ ಪಕ್ಷವೂ ಅಲ್ಲದ, ಮತ್ತೊಂದು ಕಡೆ ಹಿಂದುಳಿದ ಸಮುದಾಯದ ಪಕ್ಷವೂ ಆಗಿಲ್ಲದ ಬಿಜೆಪಿ ಈಗ ಬರುವ ಚುನಾವಣೆಯಲ್ಲಿ ತನ್ನ ಮಾನ ಉಳಿಸಿಕೊಳ್ಳಲು ಹೊಸ ತಂತ್ರ ರೂಪಿಸುತ್ತಿದೆ. ಬಲ್ಲ ಮೂಲಗಳ ಪ್ರಕಾರ ಹಿಂದುಳಿದ ವರ್ಗಗಳ ನೇತಾರ ಗೋವಿಂದ ಕಾರಜೋಳ ಅಥವಾ ಒಕ್ಕಲಿಗ ಸಮುದಾಯದ ಆರ್.ಅಶೋಕ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಬಿಜೆಪಿ ಹೈಕಮಾಂಡ್ ಚಿಂತಿಸುತ್ತಿದೆಯಂತೆ.

ಕಾರಜೋಳ ಮತ್ತು ಅಶೋಕ್ ಅವರ ವೈಯಕ್ತಿಕ ಬಲ ಎಂತಹದ್ದೇ ಆಗಿರಲಿ, ಅವರಿಂದ ಸದ್ಯದಲ್ಲಿ ರಾಜ್ಯದಲ್ಲಿ ಬಿಜೆಪಿಯ ಮಾನ ಉಳಿಸುವುದು ಕಷ್ಟಸಾಧ್ಯ ಎಂಬುದು ಹರಟೆ ಮಲ್ಲರಿಗೂ ಗೊತ್ತಿರುವ ಸತ್ಯವಾಗಿದೆ. ●

ಚುನಾವಣೆಯಲ್ಲಿ ಹಿಟ್ಲರ್ ಮತ್ತು ಫ್ರಾಂಕನ್‌ಸ್ಟೈನ್



ಒಬ್ಬನ ಹೆಸರು ಹಿಟ್ಲರ್. ಮತ್ತೊಬ್ಬನ ಹೆಸರು ಫ್ರಾಂಕನ್‌ಸ್ಟೈನ್ (ಭೂತ). ಇವರಿಬ್ಬರಲ್ಲದೆ ಹೋಪ್‌ಫುಲ್ (ಆಶಾಭರಿತ), ಹಿಲೇರಿಯಸ್ (ಉಲ್ಲಾಸಭರಿತ), ಪ್ರಿಡೆಸೆಸ್ಸರ್ (ಪೂರ್ವಿಕ), ಪ್ರೊಸೆಸ್ (ಪ್ರಕ್ರಿಯೆ) ಎಂಬುವವರೂ ಇದ್ದಾರೆ. ಜೊತೆಗೆ ರೋಮಿಯಾ ರಾಣಿ, ರೈಚಸ್ (ಸದ್ಗುಣಿ), ಬಾಸ್ಟನ್ (ಅಮೆರಿಕೆಯ ಒಂದು ನಗರ), ಜೆನಿತ್ (ಶಿಖರ), ಮೂನ್‌ಲೈಟ್ (ಬೆಳದಿಂಗಳು), ಫೀಲ್ಡ್ ಮಾರ್ಷಲ್, ಫೌಂಡರ್ ಸ್ಟ್ರಾಂಗ್ ಮತ್ತು ಆತನ ತಮ್ಮ ಸೌಂಡರ್ ಸ್ಟ್ರಾಂಗ್ ಎಂಬುವವರೂ ಇದ್ದಾರೆ...

ಇವೆಲ್ಲ ಯಾವುದೋ ರೇಸ್ ಕುದುರೆಗಳ ಹೆಸರುಗಳಲ್ಲ, ಬದಲಾಗಿ ದೂರದ ಮೇಘಾಲಯ ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವವರ ಹೆಸರುಗಳು. ಸುಮಾರು ಮೂವತ್ತು ಲಕ್ಷ ಮತದಾರರಿರುವ ಮೇಘಾಲಯದ ಜನರು ಹೆಚ್ಚಾಗಿ ಬುಡಕಟ್ಟುಗಳಿಗೆ ಸೇರಿದವರು. ಖ್ಯಾತನಾಮರ ಹೆಸರುಗಳನ್ನು - ಹಲವೊಮ್ಮೆ ಕುಖ್ಯಾತ ನಾಮರ ಹೆಸರುಗಳನ್ನೂ ಅವುಗಳ ನಿಜ ಅರ್ಥ ಗೊತ್ತಿಲ್ಲದೆ- ತಮ್ಮ ಮಕ್ಕಳಿಗೆ ಇಡುವ ಅಭ್ಯಾಸ ಅಲ್ಲಿನ ಜನರದ್ದು.

ಹೀಗಾಗಿ ಇವತ್ತು ಅಲ್ಲಿ ಜನರ ಬೆಂಬಲ ಪಡೆಯಲು ಸ್ಪರ್ಧೆಗೆ ಇಳಿದಿರುವವರಲ್ಲಿ ಆಡಮ್‌ಕಿಡ್, ಬಿಲ್ಲಿಕಿಡ್, ಕೆನಡಿ, ಅಡ್ವೈಸರ್, ಲಿವಿಂಗ್‌ಸ್ಟೋನ್, ಹೋಪಿಂಗ್‌ಸ್ಟೋನ್, ಹೋಪ್‌ಫುಲ್, ಜೂಲಿಯಸ್, ಬಾಂಬರ್‌ಸಿಂಗ್, ಫೌಂಡರ್, ಬೋಲ್ಡ್‌ನೆಸ್, ಕಮಿಂಗ್‌ಒನ್, ಅಮೋಸ್, ಮೆಥೋಡಿಯಸ್, ಹೈಲ್ಯಾಂಡರ್, ಆನ್‌ವಿಲ್, ಫೈರ್ಲಿ ಬರ್ಟ್, ಫೈನ್‌ಲೀನೆಸ್, ವಿನ್ನರ್ ಸನ್ ಎಂಬ ಹೆಸರುಗಳನ್ನು ಉಳ್ಳವರೂ ಇದ್ದಾರೆ.

ಈ ಚಿತ್ರ ವಿಚಿತ್ರ ಹೆಸರುಗಳನ್ನು ಕೇಳಿ ಅಲ್ಲಿನ ಜನರಿಗೆ ಏನೂ ಅನ್ನಿಸುವುದಿಲ್ಲ, ಉದಾಹರಣೆಗೆ ಕಾಂಗ್ರೆಸ್ ಅಭ್ಯರ್ಥಿ ಅಡಾಲ್ಫ್ ಹಿಟ್ಲರ್ ಮಾರಕ್ ಎಂಬಾತನನ್ನು ನೋಡಿದರೆ ಅವರಿಗೆ ನೆನಪಾಗುವುದು ಜರ್ಮನಿಯ ಕೊಲೆಗಡುಕ ನಾಝಿ ನಾಯಕನಲ್ಲ, ಬದಲಾಗಿ ಮಾಜಿ ಮಂತ್ರಿಯಾದ ಹಿಟ್ಲರ್ ಎಂಬ ರಾಜಕಾರಣಿ ಮಾತ್ರ. ಹಾಗೆಯೇ ಫ್ರಾಂಕನ್‌ಸ್ಟೈನ್ ಪೋಮಿನ್ ಹೆಸರು ಕೇಳಿದರೆ ಅವರಿಗೆ ಭೂತ ನೆನಪಾಗುವುದಿಲ್ಲ ಬದಲಾಗಿ ಮಾಜಿ ಶಿಕ್ಷಣ ಸಚಿವ ನೆನಪಾಗುತ್ತಾರೆ. ಅಲ್ಲಿನ ಜನ ಓರ್ವ ವ್ಯಕ್ತಿಯ ಹೆಸರಿಗೂ ಅವರ ವ್ಯಕ್ತಿತ್ವಕ್ಕೂ ಸಂಬಂಧವಿಲ್ಲ ಎಂದೇ ನಂಬಿದ್ದಾರೆ. "ಈ ಕಾರಣಕ್ಕೇ ಹಿಟ್ಲರ್ ಹೆಸರನ್ನು ಹೊಂದಿರುವವನು ಉತ್ತಮ ವ್ಯಕ್ತಿ ಆಗಿರಬಹುದೆಂದೂ, ದೇವರ ಹೆಸರನ್ನು ಹೊಂದಿರುವವನು ಕೆಟ್ಟ ವ್ಯಕ್ತಿ ಆಗಿರಬಹುದೆಂದೂ ಜನ ನಂಬಿದ್ದಾರೆ" ಎನ್ನುತ್ತಾರೆ ರಾಜಕೀಯ ಶಾಸ್ತ್ರಜ್ಞ ಅಪೂರ್ವ ಬರುವಾ ಅವರು.

ಒಂದೇ ತಿಂಗಳಲ್ಲಿ ನಡೆದ ಮೈಸೂರಿನ ಎರಡು ಸರಣಿ ಆತ್ಮಹತ್ಯೆಗಳು ಶಿಕ್ಷಣ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿಗಳಿಗಿರುವ ಅಭದ್ರತೆ ಮತ್ತು ಕಿರುಕುಳಗಳನ್ನು ಬಿಚ್ಚಿಡುತ್ತಿವೆ. ಟಿ. ನರಸೀಪುರ ತಾಲ್ಲೂಕಿನ ಶಿಕ್ಷಣ ಸಂಯೋಜಕಿ ರೂಪಾ ಮತ್ತು ಅರಸನಕೆರೆ ಪ್ರಾಥಮಿಕ ಶಾಲೆಯ ಶಿಕ್ಷಕಿ ಸಂಧ್ಯಾರಾಣಿ ಪ್ರಾಣ ಕಳೆದುಕೊಂಡ ದುರ್ದೈವಿಗಳು. ಅಷ್ಟಕ್ಕೂ ಪ್ರಾಣ ಕಳೆದುಕೊಳ್ಳುವಂತಹ ಯಾವ ಮಹತ್ತರ ಸಂಕಷ್ಟಗಳೂ ಇವರಿಗಿರಲಿಲ್ಲ, ಇದ್ದದ್ದು ಉನ್ನತಾಧಿಕಾರಿಗಳು ಹಾಗೂ ಸಹೋದ್ಯೋಗಿಗಳ ಕೀಳು ಕಿರುಕುಳ.



ಆಲನಹಳ್ಳಿಯ ಮನೆಯಲ್ಲಿ ನೇಣು ಬಿಗಿದುಕೊಂಡು ಜೀವ ತೆಗೆದುಕೊಂಡ ಶಿಕ್ಷಣ ಸಂಯೋಜಕಿ ರೂಪಾ ತನ್ನ


ಮೈಸೂರು ಶಿಕ್ಷಕಿಯರ ಆತ್ಮಹತ್ಯೆಗಳು!

'ಡೆತ್‌ನೋಟ್'ನಲ್ಲಿ ತಾಲ್ಲೂಕಿನ ಬ್ಲಾಕ್ ಎಜುಕೇಷನ್ ಆಫೀಸರ್ ಆದ ಟಿ. ಲೋಕೇಶ್‌ನ ಕಿರುಕುಳ ತಾಳದೆ ಈ ನಿರ್ಧಾರ ಕೈಗೊಂಡಿರುವುದಾಗಿ ಸ್ಪಷ್ಟವಾಗಿ ನಮೂದಿಸಿದ್ದಾಳೆ. ಮೂಲತಃ ಚಿಕ್ಕಮಗಳೂರಿನವಳಾದ ಈಕೆ ಇಲ್ಲಿ ಗಂಡ ರಘುವಿನೊಡನೆ ವಾಸವಿದ್ದಳು. ಬಿಇಒ ತನಗೆ ನಿತ್ಯವೂ ಕಿರುಕುಳ ನೀಡುತ್ತಿದ್ದರ ಬಗ್ಗೆ ಆಕೆ ಆಗಿಂದಾಗ್ಗೆ ಪ್ರಸ್ತಾಪಿಸಿದ್ದೂ ಉಂಟು. ದುರುದ್ದೇಶದ ಕಾರಣದಿಂದ ಕ್ಷುಲ್ಲಕ ವಿಷಯಗಳಿಗೂ ಆತ ವಿಪರೀತ ದೌರ್ಜನ್ಯ ನಡೆಸುತ್ತಾನೆಂದು ಆಕೆ ಹಲವು ಬಾರಿ ಹೇಳಿಕೊಂಡಿದ್ದಳಂತೆ. ಆದರೆ ಅದು ಆಕೆಯ ಪ್ರಾಣವನ್ನೇ ಕಿತ್ತೊಯ್ಯುತ್ತದೆನ್ನುವ ಅಂದಾಜು ಯಾರಿಗೂ ಇರಲಿಲ್ಲ.

ರೂಪಾ ಆತ್ಮಹತ್ಯೆಗಿಂತಲೂ ದೊಡ್ಡ ದುರಂತವೆಂದರೆ ಇದಕ್ಕೆ ನೇರ ಹೊಣೆಯಾದ ಲೋಕೇಶ್‌ನ ವಿರುದ್ಧ ಇದುವರೆವಿಗೂ ಶಿಕ್ಷಣ ಇಲಾಖೆ ಕ್ರಮ ಕೈಗೊಳ್ಳದೇ ಇರುವುದು. ತಕ್ಷಣಕ್ಕೇ ಕಾನೂನು ಕ್ರಮ ಕೈಗೊಳ್ಳುವ ಎಲ್ಲಾ ಸಾಧ್ಯತೆ ಮತ್ತು ಅವಕಾಶಗಳಿದ್ದರೂ ಡಿಡಿಪಿಐ ಬಿ.ಕೆ.ಬಸವರಾಜ್ 'ಈ ಮೊದಲು ರೂಪಾ ಬಿಇಒ ಲೋಕೇಶ್ ಕಿರುಕುಳ ನೀಡಿದ್ದರ ಕುರಿತು ವಿರುದ್ಧ ತನಗ್ಯಾವ ದೂರೂ ನೀಡಿಲ್ಲ' ಎಂದಷ್ಟೇ ಪ್ರತಿಕ್ರಿಯಿಸಿದ್ದಾರೆ. ಅಲ್ಲಿಗೆ ರೂಪಾಳ ಡೆತ್‌ನೋಟ್ ಆರೋಪವನ್ನೇ ಹುಸಿ ಮಾಡುವ ವ್ಯವಸ್ಥೆ ಹುನ್ನಾರ ನಡೆದಿರುವುದು ಬಯಲಾಗುತ್ತದೆ.



ಇಸಿ ರೂಪಾ



ಬಿಇಒ ಲೋಕೇಶ್

ರೂಪಾ ಶಿಕ್ಷಣ ಇಲಾಖೆ ಸೇರಿದ್ದು ಶಿಕ್ಷಕಿಯಾಗಿ. ಆಕೆಯ ಮೇಲೆ ಕಾಮದ ಕಣ್ಣು ನೆಟ್ಟ ಲೋಕೇಶ್ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಚಾಲಾಕಿ ಯೋಜನೆಯೊಂದನ್ನು ರೂಪಿಸಿದ್ದ. ಸಭ್ಯಸ್ಥನಂತೆ ನಂಬಿಕೆ ಹುಟ್ಟಿಸಿಕೊಂಡ ಲೋಕೇಶ್ ಶಿಕ್ಷಕಿಯಾಗಿ ಇರುವುದಕ್ಕಿಂತ ಶಿಕ್ಷಣ ಸಂಯೋಜಕಿಯಾದರೆ ಬಹುಬೇಗನೇ ಬಿ.ಇ.ಒ ಆಗಿ ಬಡ್ತಿ ಹೊಂದಬಹು ದೆನ್ನುವ ಆಸೆ ಹುಟ್ಟಿಸಿ ಆಕೆಯನ್ನು ತನ್ನ ಕಚೇರಿ ಸೇರುವಂತೆ ನೋಡಿಕೊಂಡಿದ್ದ. ಕೌನ್ಸಿಲಿಂಗ್‌ನಲ್ಲೂ ಆಕೆಯ ಪರ ಮುತುವರ್ಜಿ ವಹಿಸಿ ಒಳ್ಳೆಯವನೆನಿಸಿದ್ದ. ಆದರೆ ಬರಬರುತ್ತಾ ಆತನ ವಿಕೃತ ಬಯಕೆಗಳು ಒಂದೊಂದಾಗಿ ಹೊರಬೀಳಲಾರಂಭಿಸಿದ್ದವು. ಒಮ್ಮೆ ವಿಪರೀತಕ್ಕೆ ಹೋದ ಲೋಕೇಶ್ ಕರ್ತವ್ಯದಲ್ಲಿದ್ದಾಗಲೇ ಆಕೆಯ ಕೈ ಹಿಡಿದು ಅಸಭ್ಯವಾಗಿ ವರ್ತಿಸಿ ತನ್ನ ಮನದಿಂಗಿತವನ್ನು ಹೇಳಿಕೊಂಡಿದ್ದ. ರೂಪ ಆತನ ಬೇಡಿಕೆಗೆ ಸುತಾರಾಂ ಒಪ್ಪಿರಲಿಲ್ಲ, ಬದಲಾಗಿ ಚೆನ್ನಾಗಿ ಕ್ಯಾಕರಿಸಿ ಉಗಿದಿದ್ದಳು. ಅಂದಿನಿಂದ ಲೋಕೇಶ್ ತನ್ನ ಅಕ್ಯಾಡೆಮಿಕ್ ಕಿರುಕುಳದ ವರಾತ ಆರಂಭಿಸಿದ್ದ.

ಸುಖಾಸುಮ್ಮನೆ ನೋಟಿಸ್ ನೀಡುವುದು, ಏಕವಚನದಲ್ಲಿ ನಿಂದಿಸಿ ಮಾತನಾಡುವುದು, ಆಕೆಯ ಅರ್ಹತೆಯನ್ನೇ ಹೀಗಳೆಯುವುದು, ನಡುರಾತ್ರಿಯಲ್ಲಿ ಫೋನ್ ಮಾಡಿ ಆಫೀಸ್ ವಿಚಾರದಲ್ಲಿ ಬಾಯಿಗೆ ಬಂದಂತೆ ಮಾತನಾಡುವುದು ಹೀಗೆ ತನ್ನೆಲ್ಲ ಅಸ್ತ್ರಗಳನ್ನು ಒಂದಾದಮೇಲೆ ಒಂದರಂತೆ ಪ್ರಯೋಗಿಸುತ್ತಲೇ ಬಂದಿದ್ದ. ಆತನ ಮಾನಸಿಕ ಹಿಂಸೆಯಿಂದ ರೋಸಿಹೋದ ರೂಪಾ ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕಾಗಿದೆ.

ರೂಪಾ ಪ್ರಕರಣದ ನಂತರ ಆತನ ಒಂದೊಂದೇ ಒಳಸುಳಿಗಳು ಈಗ ಬಯಲಾಗುತ್ತಿವೆ. ಡೆಪ್ಯುಟೇಷನ್ ಮೂಲಕ ಬ್ಲ್ಯಾಕ್‌ಮೇಲ್ ಮಾಡಿ ತುಚ್ಛ ಮಾಡುವುದು ಆತನ ಕಾಯಕಗಳಲ್ಲಿ ಒಂದು. ಅಲ್ಲದೆ ಕಂಪ್ಯೂಟರ್ ಆಪರೇಟರ್‌ಗಳಿಂದ ಶಿಕ್ಷಕಿಯರವರೆಗೆ ಏನಿಲ್ಲವೆಂದರು ಎಂಟರಿಂದ ಹತ್ತು ಅಮಾಯಕ ಹೆಂಗಸರನ್ನು ಈತ ಬಳಸಿಕೊಳ್ಳಲು ಹವಣಿಸುತ್ತಿರುವುದೂ ಬೆಳಕಿಗೆ ಬಂದಿದೆ.

ಪಾಪಿಗೆ ಚಿರಾಯು ಎನ್ನುವಂತೆ ಇಷ್ಟೆಲ್ಲಾ ಸ್ಪಷ್ಟ ಸಾಕ್ಷಿಗಳಿದ್ದರೂ ಆತನ ವಿರುದ್ಧ ಕ್ರಮ ಕೈಗೊಳ್ಳಲು ಇಲಾಖೆಗಾಗಲಿ, ಪೊಲೀಸರಿಗಾಗಲಿ ಕಾರಣಗಳೇ ಕಾಣುತ್ತಿಲ್ಲದಿರುವುದು ದುರಾದೃಷ್ಟ. ಘಟನೆ ನಡೆದ ದಿನದಿಂದ ಭೂಗತನಾಗಿರುವ ಲೋಕೇಶ್ ಕಚೇರಿಗೂ ಅನಧಿಕೃತವಾಗಿ ಗೈರುಹಾಜರಾಗಿದ್ದಾನೆ. ತನಿಖೆ ನಡೆಸಿದ ಡಿಡಿಪಿಐ ಬಸವರಾಜ್ ಸಹ ಲೋಕೇಶ್‌ನನ್ನು ಬಚಾವ್ ಮಾಡುವ ಉದ್ದೇಶದಿಂದಲೇ ಕಮೀಷನರ್‌ಗೆ ರೂಪಾಳ ಡೆತ್‌ನೋಟ್ ನೀಡದೆ ನೀರಸ ವರದಿಯೊಂದನ್ನು ಸಲ್ಲಿಸಿದ್ದಾರೆ. ಇತ್ತ ಬೇಲ್ ಸಮೇತವೇ ಹೊರಬರಬೇಕೆಂದು ಹವಣಿಸುತ್ತಿರುವ ಲೋಕೇಶ್‌ಗೆ ಜಾತಿ ಬೆಂಬಲವೂ ರಕ್ಷೆ ನೀಡುತ್ತಿದೆ. ಒಂದಷ್ಟು ಒಕ್ಕಲಿಗ ಸಂಘಟನೆಗಳು ಮೊನ್ನೆ ಡಿ.ಸಿ ಕಚೇರಿ ಎದುರು ಧರಣಿ ನಡೆಸಿ ಲೋಕೇಶ್ ಒಬ್ಬ ದಕ್ಷ ಅಧಿಕಾರಿ, ಆತನದೇನೂ ತಪ್ಪಿಲ್ಲ, ರೂಪಾಳ ತಲೆ ಸರಿ ಇರಲಿಲ್ಲ ಎನ್ನುವ ಮೆಮೊರೆಂಡಮ್ ಕೊಟ್ಟು ಬಂದಿವೆ. ಮತ್ತೊಂದು ಮೂಲಗಳ ಪ್ರಕಾರ ಖುದ್ದು ಗೃಹಮಂತ್ರಿಗಳೇ ಆತನ ಬಂಧನವಾಗದಂತೆ ನೋಡಿಕೊಳ್ಳುವ ಅಭಯ ನೀಡಿದ್ದಾರೆ ಎನ್ನಲಾಗುತ್ತಿದೆ. ಅದನ್ನು ಸಾಕ್ಷೀಕರಿಸುವಂತೆ ಐಪಿಸಿ ಸೆಕ್ಷನ್ 306ರ ಅಡಿಯಲ್ಲಿ ಲೋಕೇಶನ ವಿರುದ್ಧ ಕಂಪ್ಲೇಂಟ್ ದಾಖಲಾಗಿದ್ದರೂ ನಜರ್‌ಬಾದ್ ಪೊಲೀಸರು ಅವನ ಬಂಧನವನ್ನು ಕೈಚೆಲ್ಲಿ ಕೂತಿದ್ದಾರೆ. ವಿಚಾರಿಸಲು ಮುಂದಾದವರಿಗೆ 'ಅವನ ಒಂದು ಮೊಬೈಲ್ ಸ್ವಿಚ್ ಆಫ್ ಆಗಿದೆ ಇನ್ನೊಂದು ನಂಬರ್ ಇದ್ದರೆ ಕೊಟ್ಟು ಹೋಗಿ' ಎನ್ನುವ ಜವಾಬ್ದಾರಿಯುತ(?) ಪ್ರತಿಕ್ರಿಯೆ ಪೊಲೀಸರಿಂದ ಸಿಗುತ್ತಿದೆ.


ಇನ್ನು ಅರಸಿನಕೆರೆ ಸರ್ಕಾರಿ ಶಾಲೆಯ ಶಿಕ್ಷಕಿ ಸಂಧ್ಯಾರಾಣಿಯ ದುರಂತ ಇದಕ್ಕಿಂತ ವಿಭಿನ್ನವಾಗೇನೂ ಇಲ್ಲ. ಆದರೆ ಇಲ್ಲಿ ಉನ್ನತಾಧಿಕಾರಿಗಿಂತ ಅದೇ ಶಾಲೆಯ ಸಹೋದ್ಯೋಗಿಗಳೇ ಆಕೆಗೆ ಮೃತ್ಯುವಾಗಿದ್ದಾರೆ. ಈ ನತದೃಷ್ಟ ಹೆಂಗಸು ಮೂರು ವರ್ಷಗಳ ಕೆಳಗಷ್ಟೇ ಗಂಡನನ್ನು ಕಳೆದುಕೊಂಡು ಎಂಟು ವರ್ಷದ ಮಗು ಮತ್ತು ತಾಯಿಯೊಡನೆ ವಾಸವಿದ್ದಳು. ಸಂಧ್ಯಾರಾಣಿಯ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡುತ್ತಾ ಆಕೆಯ ಚಾರಿತ್ರ್ಯವನ್ನೇ ಹೀಯಾಳಿಸಿ ಮಾತನಾಡುತ್ತಿದ್ದ ಸಹೋದ್ಯೋಗಿಗಳ ವರ್ತನೆಯಿಂದ ಬೇಸತ್ತ ಸಂಧ್ಯಾ ತರಗತಿಯಲ್ಲಿ ಮಕ್ಕಳೆದುರೇ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಳು.

ಆಕೆಯ ಡೆತ್‌ನೋಟ್‌ನಲ್ಲೂ ಕಾರಣ ಸ್ಪಷ್ಟವಾಗಿ ನಮೂದಾಗಿದೆ. ಮುಖ್ಯೋಪಾಧ್ಯಾಯ ಶಂಭುಲಿಂಗ, ಅಶೋಕ್, ಭವಾನಿ, ನಳಿನಿ ಮತ್ತು ಲೀಲಾವತಿಯವರ ಮಾನಸಿಕ ಕಿರುಕುಳ ಆಕೆಯನ್ನು ಆತ್ಮಹತ್ಯೆಗೆ ಪ್ರೇರೇಪಿಸಿದ್ದವು. ನೈತಿಕತೆ, ಚಾರಿತ್ರ್ಯ, ಪ್ರಾಮಾಣಿಕತೆಗಳ ಕುರಿತು ಮಕ್ಕಳಿಗೆ ಬೋಧಿಸಬೇಕಾದ ಶಿಕ್ಷಣ ಇಲಾಖೆಯೇ ಈ ಮಟ್ಟಿಗೆ ಅಧಃಪತನವಾಗಿರುವುದು ನಿಜಕ್ಕೂ ಖೇದಕರ. ಸಂಧ್ಯಾರಾಣಿ ಆತ್ಮಹತ್ಯೆ ಮಾಡಿಕೊಂಡ ಗಳಿಗೆಯಿಂದಲೇ ಡೆತ್‌ನೋಟ್‌ನಲ್ಲಿ ದಾಖಲಾಗಿದ್ದ ಅಷ್ಟೂ ಶಿಕ್ಷಕರು ನಾಪತ್ತೆಯಾಗಿದ್ದಾರೆ. ಶಾಲೆಗೂ ಹಾಜರಾಗುತ್ತಿಲ್ಲ. ಹಾಗಾಗಿ ಪಕ್ಕದ ಊರಿನ ಶಿಕ್ಷಕರನ್ನು ನಿಯೋಜಿಸಿ ಹೇಗೋ ಶಾಲೆಯ ಬೆಲ್ ಬಾರಿಸಲಾಗುತ್ತಿದೆ.

ಆದರೆ ಈ ಕೇಸ್‌ನಲ್ಲಿ ಶಿಕ್ಷಣ ಇಲಾಖೆ ಕೊಂಚ ಎಚ್ಚೆತ್ತುಕೊಂಡಂತೆ ಆ ಐವರು ಶಿಕ್ಷಕರನ್ನೂ ಅಮಾನತು ಮಾಡಿ ಆದೇಶ ಹೊರಡಿಸಿದೆ. ಅವರ್ಯಾರು ಬಿಇಒ ಲೋಕೇಶ್‌ನಷ್ಟು ಪ್ರಭಾವಶಾಲಿ ಆಗಿಲ್ಲದೆ ಇರುವುದೂ ಇದಕ್ಕೆ ಕಾರಣವಿರಬಹುದು. ಆದರೂ ಸರ್ಕಾರಿ ಭದ್ರತೆಯೆಂಬ ಒಂದೇ ಒಂದು ಕಾರಣಕ್ಕೆ ಕಾಣದ ದೂರದೂರಿಗೆ ಬರುವ ಅಮಾಯಕ ಹೆಣ್ಣುಮಕ್ಕಳನ್ನು ಶೋಷಿಸುವ, ಕಿರುಕುಳ ನೀಡುವ ಅನಿಷ್ಟ ಸಂಸ್ಕೃತಿ ಶಿಕ್ಷಣ ಇಲಾಖೆಯಲ್ಲಿ ಈಗಲೂ ಚಾಲ್ತಿಯಲ್ಲಿರುವುದು ಮಾತ್ರ ದುರಾದೃಷ್ಟ!

● ಗಿರೀಶ್ ತಾಳಿಕಟ್ಟೆ

ನಾಲ್ಕೇ ನಾಲ್ಕು ಸಾಲುಗಳ ಸ್ಫೋಟಕ ಚುಟುಕು ಬರೆವ ವಿಡಂಬಾರಿಯದು ಸಾವಿರ-ಸಾವಿರ ಸಂಕಟದ ಜೀವನ ಗ್ರಂಥ!! ದೇವದಾಸಿ ಮಗನಾಗಿ, ಅಂಚೆಪೇದೆಯಾಗಿ, ಕಂಡವರ ಮನೆ ಅನ್ನಕ್ಕೆ ಬಿದ್ದ ಕೂಲಿಯಾಗಿ, ಚುಟುಕು ಸಾಹಿತಿಯಾಗಿ, ಮೂರ್ತಿಭಂಜಕನಾಗಿ, ಸಾಹಿತ್ಯ ಪರಿಚಾರಕ (ಗಳಗನಾಥರಂತೆ) ಆತ ನಡೆದುಬಂದ ಹಾದಿ-ಬೀದಿ ತುಂಬೆಲ್ಲ ಕಳ್ಳಿ-ಜಾಲಿ ಮುಳ್ಳುಗಳೇ ಮುಳ್ಳುಗಳು! ಆತನ ಚುಟುಕುಗಳಲ್ಲಿ ದೇವರು, ದಿಂಡಿರು, ಶೋಷಣೆ, ಮಡಿ-ಮೈಲಿಗೆ, ಮೇಲ್ವರ್ಗದ ಧಡಪ್‌ಶಾಹಿ, ಕೆಳವರ್ಗದ ಹೆಡ್ಡತನ, ಸ್ವರ್ಗ-ನರಕ ವಿಡಂಬನಾತ್ಮಕವಾಗಿ ಮೇಳೈಸಿದೆ. ಸಮಾಜಕ್ಕೆ ಈ ಅಪಸವ್ಯಗಳ ಬಗೆಗೊಂದು ಎಚ್ಚರಿಕೆಯ ಸಂದೇಶವೂ ಇದೆ.



● ನಹುಷ

ವಿಡಂಬಾರಿ: ಬೆಂಕಿಯಲ್ಲಿ ಅರಳಿದ ಚುಟುಕು

ಸೋಗಲಾಡಿ 'ಸಾಯಿತ್ತಿ'ಗಳನ್ನೇ ವಿಜೃಂಭಿಸುವ ವಿಕೃತಿ-ಒಣ ಆಡಂಬರದ ಆರ್ಭಟ-ಬೂಟಾಟಿಕೆಯ ಬೌದ್ಧಿಕ ಭಾಷಣ ಮತ್ತು ಭೂರಿಭೋಜನದ ಬಡಿದಾಟದಿಂದ ಸಾಹಿತ್ಯ ಸಮ್ಮೇಳನಗಳು ಕ್ಲೀಷೆಯಂತಾಗಿರುವ ಈ ಕಾಲಘಟ್ಟದಲ್ಲಿ ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ 'ಪವಾಡ' ಮಾಡಿದೆ! ನಾಡಿನಾದ್ಯಂತ 'ಚುಟುಕು ವಿಡಂಬಾರಿ' ಎಂದೇ ಪರಿಚಿತರಾಗಿರುವ ವಿಷ್ಣು ಗಣಪಿ ಭಂಡಾರಿ ಎಂಬ ಸಾಹಿತ್ಯಲೋಕದ ಅವಜ್ಞೆಗೀಡಾಗಿದ್ದ 'ಅರ್ಹ'ನನ್ನು ಹುಡುಕಿ ತೆಗೆದು ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡಲಾಗಿದೆ. ದೊಡ್ಡ ಚರ್ಚೆ-ಖುಷಿಗೆ ಕಾರಣವಾಗಿರುವ ಈ ಆಯ್ಕೆ ಸಾಹಿತ್ಯ ವಲಯದಲ್ಲಿ ತಣ್ಣನೆಯ ಸಂಚಲನ ಮೂಡಿಸಿದೆ!

ನಾಲ್ಕೇ ನಾಲ್ಕು ಸಾಲುಗಳ ಸ್ಫೋಟಕ ಚುಟುಕು ಬರೆವ ವಿಡಂಬಾರಿಯದು ಸಾವಿರ-ಸಾವಿರ ಸಂಕಟದ ಜೀವನ ಗ್ರಂಥ!! ಈಗ ಆತ 78ರ ಗಡಿಯಲ್ಲಿದ್ದಾರೆ. ದೇವದಾಸಿ ಮಗನಾಗಿ, ಅಂಚೆಪೇದೆಯಾಗಿ, ಕಂಡವರ ಮನೆ ಅನ್ನಕ್ಕೆ ಬಿದ್ದ ಕೂಲಿಯಾಗಿ, ಚುಟುಕು ಸಾಹಿತಿಯಾಗಿ, ಮೂರ್ತಿ ಭಂಜಕನಾಗಿ, ಸಾಹಿತ್ಯ ಪರಿಚಾರಕ (ಗಳಗನಾಥರಂತೆ) ಆತ ನಡೆನಡೆದು ಬಂದ ಹಾದಿ-ಬೀದಿ ತುಂಬೆಲ್ಲ ಕಳ್ಳಿ-ಜಾಲಿ ಮುಳ್ಳುಗಳೇ ಮುಳ್ಳುಗಳು! ಸಮಕಾಲೀನ ಸಮಾಜದ ಪಲ್ಲಟದ ಕುರಿತು 7 ಸಾವಿರಕ್ಕೂ ಹೆಚ್ಚು ಮೊನಚು ಚುಟುಕು ಬರೆದಿರುವ ಆತ ದೇವರ ಅಸ್ತಿತ್ವಕ್ಕೇ ಸವಾಲು ಹಾಕುವ ಛಾತಿವಂತ. ಎಂಥ ದುರ್ಬರ ಸನ್ನಿವೇಶದಲ್ಲೂ ಜೀವನೋತ್ಸಾಹ-ಪ್ರಾಮಾಣಿಕತೆ-ಬದ್ಧತೆಯನ್ನು ಪಾಲಿಸಿ ಕೊಂಡು ಬಂದಿದ್ದಾರೆ ವಿಡಂಬಾರಿ. ಆತನ ಚುಟುಕುಗಳಲ್ಲಿ ದೇವರು, ದಿಂಡಿರು, ಶೋಷಣೆ, ಮಡಿ-ಮೈಲಿಗೆ, ಮೇಲ್ವರ್ಗದ ಧಡಪ್‌ಶಾಹಿ, ಕೆಳವರ್ಗದ ಹೆಡ್ಡತನ, ಸ್ವರ್ಗ-ನರಕ ವಿಡಂಬನಾತ್ಮಕವಾಗಿ ಮೇಳೈಸಿದೆ. ಸಮಾಜಕ್ಕೆ ಈ ಅಪಸವ್ಯಗಳ ಬಗೆಗೊಂದು ಎಚ್ಚರಿಕೆಯ ಸಂದೇಶವೂ ಇದೆ.

ಶೂದ್ರಾದಿಗಳ ಬೌದ್ಧಿಕ ದಾರಿದ್ರ್ಯ ಮುಂದಿನ ತಲೆಮಾರಿನಲ್ಲಾದರೂ ನಿವಾರಣೆ ಆದೀತೆಂಬ ಆಶಾವಾದದ ವಿಡಂಬಾರಿಗೆ ತನ್ನಂಥ ಸಮಾಜದ ಎಲ್ಲ ಮಗ್ಗಲಲ್ಲೂ ತುಳಿತಕ್ಕೆ ಒಳಪಟ್ಟವನನ್ನು ಗುರುತಿಸಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಸಿದ್ದಕ್ಕೆ ಸಹಜವಾಗೇ ಸಂತೋಷವಾಗಿದೆ. ಹಾಗಂತ ಆತ ಪೀಠ, ಅಡ್ಡಪಲ್ಲಕ್ಕಿ, ಬಾಜಾಭಜಂತ್ರಿಯ ಮೆರವಣಿಗೆಗೆ ಆಸೆಯೇನೂ ಪಟ್ಟಿಲ್ಲ. ಅದೆಲ್ಲ ಡಂಬಾಚಾರ ತನಗೆ ಬೇಡವೇಬೇಡವೆಂದು ವಿಡಂಬಾರಿ ಸಂಘಟಕರಿಗೆ ಖಡಾಖಂಡಿತವಾಗಿ ಹೇಳಿಬಿಟ್ಟಿದ್ದಾರೆ. ಮಾಡುವುದಿದ್ದರೆ ಕಾಲ್ನಡಿಗೆಯ ಮೆರವಣಿಗೆ ಮಾಡೋಣ ಎಂದಿದ್ದಾರೆ. ತಮ್ಮ ದೀರ್ಘ ಸಂಘರ್ಷಮಯ ಬದುಕಿನಲ್ಲಿ ಸುಖವನ್ನೆಂದೂ ಕಾಣದ ಆತ ಇದ್ದುದರಲ್ಲೇ ನೆಮ್ಮದಿ ಕಂಡಿದ್ದಾರೆ. ಸಾಹಿತ್ಯ ಪ್ರಪಂಚದ ಒಣ ಆಕರ್ಷಣೆಯ ಹಪಾಹಪಿಗೆಂದೂ ವಿಡಂಬಾರಿ ಬಿದ್ದವರಲ್ಲ. ಕೆಳವರ್ಗದವರು ನಿರಂಕುಶ ಮತಿಗಳಾಗಲೆಂಬ ಧ್ಯೇಯ ಇಟ್ಟುಕೊಂಡು ಹಲ್ಲು ಮುಷ್ಟಿ ಕಚ್ಚಿಕೊಂಡು ಕುಳಿತು ಚುಟುಕು ಬರೆಯುವ ಈ ಕವಿ ಜತೆ 'ಪತ್ರಿಕೆ' ನಡೆಸಿದ ಮಾತು-ಕತೆ ಇಲ್ಲಿದೆ...



ಪ್ರಶಸ್ತಿಗಳೊಂದಿಗೆ ವಿಡಂಬಾರಿ...



ಪತ್ನಿಯೊಂದಿಗೆ ವಿಡಂಬಾರಿ....

ಪತ್ರಿಕೆ: ವಿಡಂಬಾರಿಯವರೆ, ನಿಮ್ಮ ಹುಟ್ಟು-ಬಾಲ್ಯದ ಬಗ್ಗೆ ನೆನಪಿದೆಯಾ?

ವಿಡಂಬಾರಿ: ಅದು ದೇವರ ಹೆಸರಲ್ಲಿ ಹಿಂದುಳಿದ ವರ್ಗದ ಕುಟುಂಬದ ಹೆಣ್ಣನ್ನು ಸೂಳೆ (ದೇವದಾಸಿ) ಬಿಡುವ ಕಾಲ. ಮೇಲುವರ್ಗದ ಮಂದಿ ತಮ್ಮ ತಲುಬು ತೀರಿಸಿಕೊಳ್ಳಲು ಮಾಡಿಕೊಂಡಿದ್ದ ಅನಿಷ್ಠ ಪದ್ಧತಿಯಿದು. ಆಗ ನಾನು ಹೊನ್ನಾವರ ತಾಲ್ಲೂಕಿನ ಮೇಲಿನ ಇಡಗುಂಜಿ ಗ್ರಾಮದ ಗಣಪಿ ಎಂಬ ಭಂಡಾರಿ ಜಾತಿಯ ದೇವದಾಸಿಯ ಮೂರನೇ ಮಗನಾಗಿ ಹುಟ್ಟಿದೆನಂತೆ. ಮೊದಲೇ ಸೂಳೆ ಮಗ. ಅದರಲ್ಲೂ ಅಮಾವಾಸ್ಯೆ ದಿನ ಜನ್ಮಕ್ಕೆ ಬಿದ್ದಿದ್ದೆನಂತೆ. ಅಮಾವಾಸ್ಯೆ ದಿನ ಹುಟ್ಟಿದರೆ ಮನೆಗೆ ಕೇಡೆಂದು ಮಕ್ಕಳಿಲ್ಲದ ದಂಪತಿಗೆ ನನ್ನನ್ನು 12ನೇ ದಿನ ದಾನ ಮಾಡಿದರಂತೆ!

ದತ್ತಕ ಪಡೆದವರ ಹೆಂಡತಿ ನನ್ನ ಖಾಸಾ ಚಿಕ್ಕಮ್ಮ. ಅವಳು ನನ್ನ 12ನೇ ವರ್ಷದವರೆಗೂ ಪ್ರೀತಿ-ವಾತ್ಸಲ್ಯದಿಂದ ಬೆಳೆಸಿದ್ದರು. ನಂತರ ಅವಳಿಗೆ ಗರ್ಭಪಾತವಾಗಿ ತೀರಿಕೊಂಡಳು. ಆಗ ಶುರುವಾಯ್ತು ನನ್ನ ಕಷ್ಟ ಬದುಕು. ಸಾಕು ತಂದೆ ಬೇರೆ ಮದುವೆ ಆದರು. ಮಲತಾಯಿ ಕಿರುಕುಳ ಕೊಡತೊಡಗಿದಳು. ಮೂರನೇ ಈಯತ್ತೆಗೇ ಶಿಕ್ಷಣ ನಿಂತಿತು. ಯಾರ್‍ಯಾದೋ ಮನೆ ಆಳಾದೆ. ಹೈಗರ (ಬ್ರಾಹ್ಮಣರ) ಕೊಟ್ಟಿಗೆ, ಸೊಪ್ಪು-ಸಗಣಿ ಕೆಲಸದವನಾದೆ... ಈ ಹೊತ್ತಲ್ಲೇ ನನಗೊಬ್ಬ ಒಳ್ಳೆಯ ಗೆಳೆಯ ಸಿಕ್ಕಿದ. ಅವನು ಪ್ರಸಿದ್ಧ ಯಕ್ಷಗಾನ ಭಾಗವತರಾಗಿದ್ದ ವೆಂಕಟರಮಣ

ಸಂದರ್ಶನ

ಯಾಜಿಯವರ ಮಗ-ಗಜಾನನ. ನಾಡಿನ ನಾಮಾಂಕಿತ ಸಾಹಿತಿಗಳ ಪುಸ್ತಕ ಆತ ಓದಲು ತಂದು ಕೊಡುತ್ತಿದ್ದ.

ಪತ್ರಿಕೆ: ಮೂರನೇ ತರಗತಿಯೂ ಪಾಸಾಗದ ನೀವು ಅಂಚೆ-ಪೇದೆ ಆಗಿದ್ದು ಹೇಗೆ?

ವಿಡಂಬಾರಿ: 1958ರಲ್ಲಿ ನಮ್ಮೂರಲ್ಲಿ ಪೋಸ್ಟ್ ಆಫೀಸು ಶುರು ಮಾಡಿದ್ದರು. ಅಲ್ಲಿ ನನಗೆ ಎಡಿಡಿಎ- ಅಂದರೆ ಎಕ್ಸ್ಟ್ರಾ ಡಿಪಾರ್ಟ್‌ಮೆಂಟ್ ಡೆಲಿವರಿ ಏಜೆಂಟ್ ಎಂದು ನೌಕರಿ ಕೊಟ್ಟಿದ್ದರು. ಪತ್ರಗಳ ಮೇಲಿನ ಇಂಗ್ಲಿಷ್ ವಿಳಾಸ ಓದಲು ಬಂದರೆ ಸಾಕಿತ್ತು ಆ ಚಾಕರಿಗೆ. ಗೆಳೆಯರು ನನಗೆ ಆಡ್ರೆಸ್ ಓದಲು ಕಲಿಸಿದರು. ನಮ್ಮೂರಿನ ಸುತ್ತಲಿನ ನಾಲ್ಕೈದು ಹಳ್ಳಿ ದಿನವೂ ಸುತ್ತಬೇಕಿತ್ತು, ರಾತ್ರಿತನಕ ಪತ್ರಗಳಿಗೆ ಮುದ್ರೆ ಒತ್ತಿ ಬ್ಯಾಗ್ ಕಟ್ಟಬೇಕಿತ್ತು, ಮನೆಗೆ ಬರುವಾಗ ರಾತ್ರಿ 8 ಗಂಟೆಯಾಗುತ್ತಿತ್ತು, ನನ್ನ ಸಾಕು ತಂದೆಯ ಮನೆ ಪಕ್ಕವೇ ಬ್ರಾಹ್ಮಣರ ಸೀತಮ್ಮ ಎಂಬ ಕರುಣಾಮಯಿಯ ಮನೆಯಿತ್ತು. ಅಲ್ಲೇ ನಾನು ಹೆಚ್ಚು ಹೊತ್ತು ಕಳೆಯುತ್ತಿದ್ದೆ. ಅವರ ದನದ ಕೊಟ್ಟಿಗೆ ಕೆಲಸ ಮಾಡುತ್ತಿದ್ದೆ. ಅವರು ನನಗೆ ಹೊಟ್ಟೆ ತುಂಬ ಬಡಿಸುತ್ತಿದ್ದರು.

ಅವರು ಅದೆಷ್ಟು ಒಳ್ಳೆ ಜನರೆಂದರೆ, ನನ್ನ ಓದುವ ಚಟ ನೋಡಿ ಒಂದು ಚಿಮಣಿ ಬುಡ್ಡಿ ಕೊಟ್ಟಿದ್ದರು. ರಾತ್ರಿ ನಿದ್ದೆ ಬರುವತನಕವೂ ಓದುತ್ತಿದ್ದೆ. ನಾನು ಉರಿಸಿದ ಚಿಮಣಿಯ ಹೊಗೆಯ ಮಸಿ ಆವರಿಸಿದ ಗೋಡೆ ನಾನು ಊರು ಬಿಟ್ಟ ನಂತರವೂ ಹಾಗೇ ಇತ್ತಂತೆ. ಸೀತಮ್ಮ ಮತ್ತವರ ಮಕ್ಕಳು ತುಂಬ ಪ್ರೀತಿ-ಅಭಿಮಾನದಿಂದ ಬಂದವರೆದುರೆಲ್ಲಾ "ಇದು ನಮ್ಮ ವಿಷ್ಣು ಓದಿನ ಹೊಗೆ ಗುರ್ತು" ಎಂದು ಹೇಳುತ್ತಿದ್ದಂತೆ.

ಪತ್ರಿಕೆ: ನಿಮ್ಮ ಹೆತ್ತಮ್ಮ-ಒಡಹುಟ್ಟಿದವರು ಇದ್ದಾರಾ?

ವಿಡಂಬಾರಿ: ಇಲ್ಲ... ಇಲ್ಲ... ಅದೊಂದು ದೊಡ್ಡ ದುರಂತ. ನನಗೊಬ್ಬಳು ಅಕ್ಕ ಇದ್ದಳು. ನೋಡಲು ಚಂದವೂ ಇದ್ದಳು. ಅವಳನ್ನು ಸೂಳೆ ಬಿಟ್ಟಿದ್ದರು. ವಂಚಕಿಯೊಬ್ಬಳು ನನ್ನಮ್ಮನನ್ನು ಯಾಮಾರಿಸಿ ಅಕ್ಕನನ್ನು ಕೆಂಪು ದೀಪದ ಪ್ರದೇಶಕ್ಕೆ ಮಾರಿದ್ದಳು. ಅವಳು ಈತನಕ ಪತ್ತೆಯಾಗಿಲ್ಲ. ನನ್ನ ತಾಯಿ ಮಗಳ ಶೋಕದಿಂದ ಹುಚ್ಚಿಯಾಗಿ ಊರು-ಕೇರಿ ಸುತ್ತಿ ಸತ್ತುಹೋದಳು. ಯಾರೂ ನನ್ನಮ್ಮನ ರಕ್ಷಣೆಗೆ ಬರಲಿಲ್ಲ, ಪೋಸ್ಟಿನ ನೌಕರಿಯಿಂದ ನಾನು ಊರು ಬಿಡಬೇಕಾಗಿ ಬಂತು. 21 ರೂ. ತಿಂಗಳ ಸಂಬಳದ ಈ ಚೇರಿಗಾಗಿ ನಾನು ಅಂಕೋಲೆ ಸೇರಿಕೊಂಡಾಗ ನನ್ನ ಒಡಹುಟ್ಟಿದ ಅಣ್ಣ ನಮ್ಮ ಜಮೀನು ಒಬ್ಬನೇ ನುಂಗಿಹಾಕಿದ. ಆ ಜಾಗ ಅವನಿಗೂ ಸಿಗಲಿಲ್ಲ ಬಿಡಿ. ಹೆಂಗಸೊಬ್ಬಳ ಚಟಕ್ಕೆ ಬಿದ್ದಿದ್ದ. ನಾನೀಗ ಮಗಳು-ಅಳಿಯನ ಮನೆಯಲ್ಲಿ ಆಶ್ರಯ ಪಡೆದಿದ್ದೇನೆ.

ಪತ್ರಿಕೆ: ನೀವು ಚುಟುಕು ಕವಿ ಹೇಗಾದಿರಿ?

ವಿಡಂಬಾರಿ: 1963 ರಲ್ಲಿ ನಡೆದ ಇಲಾಖಾ ಪರೀಕ್ಷೆಯಲ್ಲಿ ನಾನು ಪಾಸಾಗಿ ಅಂಚೆ-ಪೇದೆಯಾಗಿ ಭಡ್ತಿ ಪಡೆದಿದ್ದೆ. ಆಗ ನನ್ನನ್ನು ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರ ಕರ್ಮಭೂಮಿ ಅಂಕೋಲೆಗೆ ವರ್ಗ ಮಾಡಿದರು. ಅವು ದೇಸಾಯರ ರೈತ-ಕಾರ್ಮಿಕ ಹೋರಾಟದ ಕಾವಿನ ದಿನಗಳು. ಅವರು ಅಮ್ಮೆಂಬಳ ಆನಂದ ಎಂಬ ಸಮಾಜವಾದಿಯ ಸಂಪಾದಕತ್ವದಲ್ಲಿ 'ಜನ ಸೇವಕ' ಎಂಬ ಪತ್ರಿಕೆ ನಡೆಸುತ್ತಿದ್ದರು. ಅದರಲ್ಲಿ 'ಬತ್ತದ ತೆನೆ' ಎಂಬ ತಲೆಬರಹದಡಿ ದೇಸಾಯರ ಕ್ರಾಂತಿಕಾರಿ ಚುಟುಕು ಪ್ರಕಟವಾಗುತ್ತಿದ್ದವು. ಇದು ನನ್ನ ಮೇಲೆ ಗಾಢ ಪರಿಣಾಮ ಬೀರಿದವು. ನಾಲ್ಕೇ ಸಾಲಲ್ಲಿ ದೊಡ್ಡ ಕವನದ ತುಡಿತ-ಮಿಡಿತ ಹಿಡಿದಿಡಬಲ್ಲ ಚುಟುಕು ನಾನೇಕೆ ಬರೆಯಬಾರದು? ಸಮಾಜದ ಅನಿಷ್ಟ-ಅನ್ಯಾಯ ಏಕೆ ಪ್ರತಿಭಟಿಸಬಾರದು ಚುಟುಕಿನ ಮೂಲಕ? ಎಂಬ ಯೋಚನೆ ಮೊಳೆಯಿತು. 1970ರ ಸುಮಾರಿಗೆ ನಾನೂ ಬರೆಯಲು ರೂಢಿಸಿಕೊಂಡೆ.

ಪತ್ರಿಕೆ: ವಿ.ಜಿ. ಭಂಡಾರಿಯಾದ ನೀವು ಅದ್ಹೇಗೆ ವಿಡಂಬಾರಿ ಆದಿರಿ?

ವಿಡಂಬಾರಿ: ನಿಜ ಬಂಡಾಯಗಾರ ಜಿ.ಆರ್. ಪಾಂಡೇಶ್ವರ್ ಅವರ 'ನಾಗರಿಕ', ಹುಬ್ಬಳ್ಳಿಯಿಂದ ಹೊರಬರುತ್ತಿದ್ದ ಪಿ.ಎಲ್. ಬಂಕಾಪುರ ಸಂಪಾದಕತ್ವದ 'ವಿಶಾಲ ಕರ್ನಾಟಕ' ಪತ್ರಿಕೆಗೆ ಚುಟುಕು ಕಳಿಸುತ್ತಿದ್ದೆ. ಮೂರು ವರ್ಷಗಳ ಕಾಲ ವಿಶಾಲ ಕರ್ನಾಟಕದಲ್ಲಿ ದಿನಕ್ಕೊಂದರಂತೆ ನನ್ನ ಚುಟುಕು ಪ್ರಕಟವಾಗಿತ್ತು. ಒಮ್ಮೆ ಏನಾಯ್ತೆಂದರೆ, ನಮ್ಮ ಪೋಸ್ಟ್ ಇಲಾಖೆಯ ನೌಕರರು ವೇತನ ಹೆಚ್ಚಳ-ಶೋಷಣೆ ವಿರುದ್ಧ ಮುಷ್ಕರ ಹೂಡಿದ್ದರು. ಆಗ ನಾನು ಸರ್ಕಾರದ ವಿರುದ್ಧವೇ ಚುಟುಕ ಬರೆದು ಕಳಿಸಿದ್ದೆ. ಇದನ್ನು ಕಂಡ ವಿಶಾಲ ಕರ್ನಾಟಕದ ಸಂಪಾದಕ ಬಂಕಾಪೂರ ಕಂಗಾಲಾದರು. ಇವ ನೌಕರಿ ಕಳಕೊಳ್ತಾನೆ ಎಂದುಕೊಂಡು ಚುಟುಕುಗಳಿಗೆ ವಿ.ಜಿ. ಭಂಡಾರಿ ಬದಲಿಗೆ 'ವಿಡಂಬಾರಿ' ಎಂದು ಹೆಸರು ಕೊಟ್ಟರು. ಇದೇ ನನ್ನ ಕಾವ್ಯನಾಮವಾಗಿ ಹೋಯ್ತು.

ಪತ್ರಿಕೆ: ಶೈಕ್ಷಣಿಕ ವಿದ್ಯಾಭ್ಯಾಸ ಹೆಚ್ಚಿಲ್ಲದಿದ್ದರೂ ವೈಜ್ಞಾನಿಕ ವೈಚಾರಿಕ ಚಿಂತನೆಗೆ ನಿಮ್ಮನ್ನು ಹೇಗೆ ತೊಡಗಿಸಿಕೊಂಡಿರಿ?

ವಿಡಂಬಾರಿ: 1979 ರಲ್ಲಿ ಕಾರವಾರದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನ ನನ್ನ ಸಾಹಿತ್ಯ ಬದುಕಿನ ದಿಕ್ಕನ್ನೇ ಬದಲಿಸಿತು. ಆ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಹಿರಿಯ ವಿದ್ವಾಂಸ ಜಿ.ಆರ್. ಪಾಂಡೇಶ್ವರ್. ಅವರು ತನ್ನ ಅಧ್ಯಕ್ಷೀಯ ಭಾಷಣದಲ್ಲಿ ನನ್ನ ಚುಟುಕುಗಳ ಬಗ್ಗೆ ಒಂದು ಪ್ಯಾರಾ ಬರೆದು ಓದಿದ್ದರು. ಒಳ್ಳೆಯ ನಾಲ್ಕು ಮಾತಾಡಿದ್ದರು. ಅದೇ ಸಮ್ಮೇಳನದಲ್ಲಿ ನಾಲ್ಕು ಹತ್ತು ಚುಟುಕು ಓದಿ ನನ್ನಷ್ಟಕ್ಕೆ ನಾನು ನಾಚಿಕೊಂಡು ಒಂದು ಮೂಲೆಯಲ್ಲಿ ಕುಳಿತಿದ್ದೆ. ನನ್ನ ಚುಟುಕುಗಳೆಲ್ಲ 'ವಿಡಂಬಾರಿ' ಹೆಸರಲ್ಲಿ ಪ್ರಕಟವಾಗುತ್ತಿದ್ದರಿಂದ ನನ್ನ ಪರಿಚಯ ಬಹಳಷ್ಟು ಮಂದಿಗೆ ಇರಲಿಲ್ಲ. ವಿಡಂಬಾರಿಯನ್ನು ಹುಡುಕುತ್ತಿದ್ದ ಬಂಡಾಯ ಸಾಹಿತಿಗಳಾದ ಆರ್.ವಿ. ಭಂಡಾರಿ ಮತ್ತು ಜಿ.ಎಸ್. ಅವಧಾನಿ ನನ್ನ ಬಳಿ ಬಂದು 'ಕಳ್ಳ ಸಿಕ್ಕಿದ' ಎಂದು ಕೂಗಿದರು. ಅಂದಿನಿಂದ ಅವರಿಬ್ಬರ ಸೋದರನಂತಾಗಿ ಹೋದೆ.

ತುಂಬಾ ಪ್ರೋತ್ಸಾಹಿಸಿ, ವೈಚಾರಿಕ ಪುಸ್ತಕಗಳನ್ನು ಅವರು ನನಗೆ ಕೊಡುತ್ತಿದ್ದರು. ಅದರಲ್ಲೂ ಆರ್ವಿಯವರು ಕೊಟ್ಟಿದ್ದ 'ಭಾರತದ ಭೌತಿಕ ದಾರಿದ್ರ್ಯ' ಎಂಬ ಪುಸ್ತಕ ನನ್ನ ಒಳಗಣ್ಣನ್ನು ತೆರೆಸಿತು. ನನ್ನೊಳಗಿನ ಸಂಪ್ರದಾಯ ವಿರೋಧಿ-ಗೊಡ್ಡು ನಂಬಿಕೆಗಳ ವಿರೋಧಿಯನ್ನು ಇನ್ನಷ್ಟು ಕೆರಳಿಸಿತು! ಈ ಪುಸ್ತಕ ಡಾ. ವಿ.ಆರ್. ನಾರ್ಲಾ ಇಂಗ್ಲಿಷ್‌ನಲ್ಲಿ ಬರೆದದ್ದು, ಅದನ್ನು ಪ್ರೊ. ಗಂಗಾಧರಮೂರ್ತಿ ತುಂಬ ಸೊಗಸಾಗಿ ಕನ್ನಡೀಕರಿಸಿದ್ದಾರೆ. ಈ ಪುಸ್ತಕ ಪ್ರಾಚೀನ ಋಗ್ವೇದದ ಸಮಾಜ ಒಳಹೊಕ್ಕು ನೋಡುವ ಅವಕಾಶ ಕೊಟ್ಟಿತು; ಸ್ವರ್ಗ-ನರಕ, ಆತ್ಮ-ಪುನರ್ಜನ್ಮ, ಕರ್ಮ ಸಿದ್ಧಾಂತ-ಗ್ರಹಫಲ ಇವೆಲ್ಲಾ ಬೋಗಸ್ ಎಂಬುದನ್ನು ಆಧಾರಸಹಿತ ತಿಳಿಸಿಕೊಟ್ಟಿತು. ಅಲ್ಲದೆ ವಿಜ್ಞಾನ-ವೈಚಾರಿಕತೆ ಮಾತ್ರ ಮನುಷ್ಯನನ್ನು ಇತರ ಪ್ರಾಣಿಗಳಿಗಿಂತ ವಿಭಿನ್ನವಾಗಿ ರೂಪಿಸಬಲ್ಲದೆಂಬ ಸತ್ಯ ಸಾಕ್ಷಾತ್ಕಾರ ಮಾಡಿಸಿತು...

ಪತ್ರಿಕೆ: ಇವತ್ತಿನ ಸಾಹಿತ್ಯಿಕ-ರಾಜಕೀಯ ಸನ್ನಿವೇಶ ನಿಮಗೆ ಹೇಗೆನ್ನಿಸುತ್ತದೆ?

ವಿಡಂಬಾರಿ: ಮನುಷ್ಯತ್ವ ಇಲ್ಲದವರು ಸಾಹಿತಿ ಹೇಗಾಗುತ್ತಾರೆ? ಅವರ ಅಭಿಪ್ರಾಯ ಬರಹಗಾರರಷ್ಟೇ. ಕುವೆಂಪು-ಲಂಕೇಶ್-ಕಾರಂತರಂತವರನ್ನೂ ಈ ನಾಡು ಕಂಡಿದೆ. ಇವರೆಂದೂ ಜಾತೀಯತೆ-ಧರ್ಮಾಂಧತೆ ಮಾಡಲಿಲ್ಲ. ಇಂದಿನ ಕೆಲವು ಸಾಹಿತಿಗಳು ಜಾತೀಯತೆ-ಧರ್ಮಾಂಧತೆ ಬಿತ್ತುತ್ತಿದ್ದಾರೆ. ಜಾತಿಯ ಮಠಗಳಿಗೆ ಹಣ ಕೊಡುವ ಮೂಲಕ ರಾಜಕಾರಣಿಗಳು ಮತಧರ್ಮ ಕಿತಾಪತಿ ಮಾಡುತ್ತಿದ್ದಾರೆ. ಮಠಾಧೀಶರು-ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಬೇರೆ-ಬೇರೆ ಮಾರ್ಗದಿಂದ ಮೂಢನಂಬಿಕೆ-ಧರ್ಮ ದ್ವೇಷ ಬಿತ್ತುತ್ತಿದ್ದಾರೆ. ಇದು ಮನುಕುಲಕ್ಕೆ ಮಾರಕ. ಮೇಲ್ವರ್ಗದವರು ಶ್ರಮಿಕರ ದುಡಿತದ ಫಲ ಶೇಖರಿಸುತ್ತಿದ್ದಾರೆ. ಅವರ ಚಾಕರಿಗೆ ಹಿಂದುಳಿದವರು ಬೇಕು. ಆದರೆ ನಾವು ಶೈಕ್ಷಣಿಕವಾಗಿ-ವೈಚಾರಿಕವಾಗಿ ಬೆಳೆಯಬಾರದೆಂಬ ಹಿಡನ್ ಪಿತೂರಿ ಪುರೋಹಿತಶಾಹಿಗಳು ನಡೆಸಿದ್ದಾರೆ. ಕೆಳವರ್ಗವನ್ನು ಅಸಂಘಟಿತರಾಗಿಟ್ಟು ಬೇಳೆಬೇಯಿಸಿಕೊಳ್ಳುವ ಬದ್ಮಾಷ್‌ಗಿರಿ ಬ್ರಾಹ್ಮಣಶಾಹಿ ಮಾಡುತ್ತಿದೆ. ಈ ಹುನ್ನಾರ ಹಿಂದುಳಿದವವರಿಗೆ ಅರ್ಥವಾಗದಿರುವುದು ದುರಂತ. ಮೇಲ್ವರ್ಗದವರು ಹಿಂದುಳಿದವರಿಗೆ ಕಳ್ಳು (ಶೇಂದಿ) ಕುಡಿಸಿ ಮಲಗಿಸಿದ್ದಾರೆ. ಒದ್ದರೂ ಅವರು ಏಳುವುದಿಲ್ಲ. ಅಷ್ಟು ಟೈಟಾಗಿದ್ದಾರೆ. ಪುರೋಹಿತಶಾಹಿತಯ ಹಿಕಮತ್ತುಗಳ ಬಗ್ಗೆ ಹೇಳಿದರೆ

→14

ವಿಡಂಬಾರಿ ಸಾಹಿತ್ಯ

1) ಒಗ್ಗರಣೆ (1981) ಚುಟುಕು ಸಂಗ್ರಹ
2) ಕವಳ (1986) ಚುಟುಕು ಸಂಗ್ರಹ
3) ಅಂಚೆ ಪೇದೆಯ ಆತ್ಮಕಥನ (1995)
4) ಕುದಿ ಬಿಂದು (ಚುಟುಕು ಸಂಕಲನ-2004)
5) ವಿಡಂಬಾರಿ ಕಂಡದ್ದು (ಚುಟುಕುಗಳು-2008)
6) ಶಾ.ಮಂ. ಕೃಷ್ಣರಾಯರ ಪ್ರಕಾಶನದಲ್ಲಿ ಇನ್ನೂ ಹೆಸರಿಡದ ಬರೋಬ್ಬರಿ 2000 ಚುಟುಕುಗಳ ಸಂಗ್ರಹ ಅಚ್ಚಾಗುತ್ತಿದೆ.


ಪತ್ರಕರ್ತ ಸಿದ್ಧಿಕಿ ಬಿಡುಗಡೆ

ಬಿಜೆಪಿ ಪೊಲೀಸರಿಗೆ ಮಾನಭಂಗ!



ಕರ್ನಾಟಕ ಪೊಲೀಸರು ಮೊದಲಿದ್ದಂತಿಲ್ಲ. ಆರ್‌ಎಸ್‌ಎಸ್-ಬಿಜೆಪಿಗಳ ಮುಸ್ಲಿಂ ದ್ವೇಷದ ಪೂರ್ವಾಗ್ರಹಗಳು ಈಗ ರಾಜ್ಯ ಪೊಲೀಸ್ ವ್ಯವಸ್ಥೆಯೊಳಗೂ ನುಗ್ಗಿ ಬೇರು ಬಿಟ್ಟುಕೊಂಡಿದೆ ಎಂಬುದಕ್ಕೆ ಟೆರರಿಸ್ಟ್ ಎಂಬ ಆರೋಪ ಹೊತ್ತಿದ್ದ ಪತ್ರಕರ್ತ ರೆಹಮಾನ್ ಸಿದ್ಧಿಕಿಯ ಬಂಧನ ಹಾಗೂ ಬಿಡುಗಡೆಗಳೇ ಸಾಕ್ಷಿಯಾಗಿವೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಮುಸ್ಲಿಂ-ಕ್ರಿಶ್ಚಿಯನ್-ದಲಿತ ಸಮುದಾಯದವರನ್ನು ಬಡಿಯಲು ಸಂಘ ಪರಿವಾರವು ಇಲ್ಲಿನ ಪೊಲೀಸ್ ವ್ಯವಸ್ಥೆಯನ್ನು ಬಳಸಿಕೊಳ್ಳುವ ನೀಚ ಪ್ರವೃತ್ತಿ ಶುರುವಾಗಿತ್ತು.



ಗಿರೀಶ್ ಮಟ್ಟಣ್ಣನವರ್

ಕ್ರಿಶ್ಚಿಯನ್ನರ ಹಾಗೂ ಚರ್ಚ್‌ಗಳ ಮೇಲೆ ಸರಣಿ ದಾಳಿಗಳಾದಾಗ ಪೊಲೀಸರು ಚಡ್ಡಿ ಟೆರರಿಸ್ಟರನ್ನು ನಿಯಂತ್ರಿಸಲು ಮನಸ್ಸು ಮಾಡಿರಲಿಲ್ಲ. ಗೋವು ಸಾಗಾಣಿಕೆ ತಡೆಯುವ ನೆಪದಲ್ಲಿ ಭಜರಂಗ ದಳದವರೇ ಕಾನೂನನ್ನು ಕೈಗೆತ್ತಿಕೊಂಡಾಗಲೂ ಪೊಲೀಸರು ಅದನ್ನು ತಪ್ಪು ಎಂದಿರಲಿಲ್ಲ. ಕರಾವಳಿ ಸೇರಿದಂತೆ ರಾಜ್ಯದ ಉದ್ದಗಲಕ್ಕೂ ಮುಸ್ಲಿಮರ ಮೇಲೆ ಹಿಂದೂತ್ವವಾದಿಗಳು ದೌರ್ಜನ್ಯ ನಡೆಸುತ್ತಿದ್ದಾಗಲೂ ಇಲ್ಲಿನ ಪೊಲೀಸ್ ವ್ಯವಸ್ಥೆಗೆ ತಮ್ಮ ಅಸ್ತಿತ್ವದ ಬಗ್ಗೆ ಎಚ್ಚರವೇ ಇರಲಿಲ್ಲ.

ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿದವರು ಚಡ್ಡಿಗಳು ಎಂಬುದು ಗೊತ್ತಾದಾಗಲೂ ಇಲ್ಲಿನ

ಹನ್ನೊಂದು ಉಗ್ರರ ಬಂಧನ

ರಾಜಕಾರಣಿಗಳು, ಪತ್ರಕರ್ತರ ಹತ್ಯೆಗೆ ಸಂಚು




ಕನ್ನಡಪ್ರಭ ವರದಿ



ಪೊಲೀಸರಿಗೆ ಕರ್ತವ್ಯ ಪ್ರಜ್ಞೆ ಬರಲಿಲ್ಲ. ಅದು ಹೋಗಲಿ, ಶಾಸಕರ ಭವನಕ್ಕೇ ಬಾಂಬ್ ತಂದಿಟ್ಟಿದ್ದ ಇನ್ನೊಬ್ಬ ಹಿಂದೂತ್ವವಾದಿ ದುರುಳ ಗಿರೀಶ್ ಮಟ್ಟಣ್ಣನವರ್‌ರನ್ನು ರಾಜ್ಯ ಪೊಲೀಸರು ಟೆರರಿಸ್ಟ್ ಎಂದು ಬಿಂಬಿಸಲಿಲ್ಲ.

ಆದರೆ ಯಾವುದೇ ಖಚಿತ ಸಾಕ್ಷಿ ಪುರಾವೆಗಳಿರದಿದ್ದಾಗಲೂ ಕೇವಲ ಮುಸ್ಲಿಂ ಎಂಬ ಕಾರಣಕ್ಕೆ ರೆಹಮಾನ್ ಸಿದ್ಧಿಕಿಯನ್ನು ಬಂಧಿಸಿ ಆರು ತಿಂಗಳ ಕಾಲ ಜೈಲುವಾಸ ಅನುಭವಿಸುವಂತೆ ಮಾಡಿಬಿಟ್ಟರು.

2012 ರ ಆಗಸ್ಟ್ **29** ರಂದು ಸಿದ್ಧಿಕಿಯನ್ನು ಬಂಧಿಸುವಾಗ ವೀರಾವೇಶದ ಪೋಜು ನೀಡಿದ್ದ ಸಿಸಿಬಿ ಪೊಲೀಸರು ಇವತ್ತು ಇಡೀ ರಾಜ್ಯ ಪೊಲೀಸ್ ವ್ಯವಸ್ಥೆಗೆ ಅಪಮಾನ ಮಾಡಿದ್ದಾರೆ. ಅಂದು ಪೊಲೀಸರು ಹೇಳಿದ್ದ ಹಸಿ ಸುಳ್ಳುಗಳನ್ನೆಲ್ಲಾ ಏನೂ ಪ್ರಶ್ನೆ ಕೇಳದೆ ನಂಬಿ ಸುದ್ದಿ ಪ್ರಕಟಿಸಿದ್ದ ಮೀಡಿಯಾಗೂ ಈಗ ಮುಖವಿಲ್ಲದಂತಾಗಿದೆ. ಅವತ್ತು 'ಲಂಕೇಶ್' ಪೊಲೀಸರ ವರ್ತನೆಯಲ್ಲಿದ್ದ ಗೊಂದಲ ಹಾಗೂ ಭ್ರಮೆಯ ಸುಳ್ಳುಗಳ ಬಗ್ಗೆ ಆತ್ಮವಿಶ್ವಾಸದಿಂದ ವರದಿ ಪ್ರಕಟಿಸಿತ್ತು,



IPS ದಿನೇಶ್

ಪೊಲೀಸರ ಮುಸ್ಲಿಂ ದ್ವೇಷ

ಕರ್ನಾಟಕ ಪೊಲೀಸರ ಪೈಕಿ ಎಲ್ಲರೂ ಅಲ್ಲವಾದರೂ ಕೆಲವು ಅಧಿಕಾರಿಗಳಂತೂ ಬಿಜೆಪಿಯ ಕಾರ್ಯಕರ್ತರಂತೆ ರೂಪಾಂತರ ಹೊಂದಿದ್ದಾರೆ. ನಿವೃತ್ತ ಡಿಐಜಿ ಶಂಕರ್ ಬಿದರಿ ಇವರಲ್ಲಿ ಪ್ರಮುಖರು. ಜಾತಿ, ಪ್ರಮೋಷನ್ನು, ಆಯಕಟ್ಟಿನ ಸ್ಥಾನಗಳಿಗಾಗಿ ಲಾಬಿ ಮಾಡಲು ಅನೇಕರು ಸಂಘ ಪರಿವಾರದ ಮನೋಭಿಲಾಶೆಯಂತೆ ಕುಣಿಯುತ್ತಾ ಬಂದಿದ್ದಾರೆ.

ಕಳೆದ ವರ್ಷ ಅಸ್ಸಾಮಿನಲ್ಲಿ ದೊಂಬಿ ಶುರುವಾದಾಗ ಬೆಂಗಳೂರಿನಲ್ಲೂ ಈಶಾನ್ಯ ರಾಜ್ಯಗಳ ಜನರ ಮೇಲೆ ದಾಳಿ ನಡೆಯಲಿದೆ ಎಂಬ ರೂಮರ್ ಹಬ್ಬಿಸಲಾಗಿತ್ತು. ಇದರಿಂದ ಹೆದರಿದ ಸಾವಿರಾರು ಈಶಾನ್ಯ ರಾಜ್ಯದವರು ಬೆಂಗಳೂರು ಬಿಟ್ಟು ಓಡಿ ಹೋಗಿದ್ದರು. ಎಸ್‌ಎಂಎಸ್ ಮೂಲಕ ಹಬ್ಬಿಸಲಾಗುತ್ತಿದ್ದ ಈ ರೂಮರ್‌ಗೆ ಆರ್‌ಎಸ್‌ಎಸ್‌ನ ಕೆಲವು ಕಾರ್ಯಕರ್ತರೇ ಕಾರಣ ಎಂಬುದು ನಂತರ ಪತ್ತೆಯಾದರೂ ಪೊಲೀಸರು ಅವರ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ಕೇಂದ್ರ ಗೂಢಚರ್ಯೆ ಇಲಾಖೆ IBಯ ಗಮನಕ್ಕೂ ಇದು ಬಂದಿತ್ತಾದರೂ ಪೊಲೀಸರು ಆಗ ಆರ್‌ಎಸ್‌ಎಸ್‌ನವರನ್ನು ರಕ್ಷಿಸಿದರೆಂದು IB ಅಧಿಕಾರಿಗಳಿಗೂ ಅಸಮಾಧಾನವಾಗಿತ್ತು.

ಕರ್ನಾಟಕದಲ್ಲಿ ಮುಸ್ಲಿಮರ ವಿರುದ್ಧ ಸಂಘಟಿತ ದಾಳಿಗಳು ಹೆಚ್ಚಾಗುತ್ತಿದ್ದಾಗ ಆಕ್ರೋಶಗೊಂಡ ಮುಸ್ಲಿಮರು ಅನೇಕ ಸಂಘಟನೆಗಳನ್ನು ಸ್ಥಾಪಿಸಿ ಒಟ್ಟಾಗತೊಡಗಿದ್ದರು. **KFD** ಸೇರಿದಂತೆ ಈ ರೀತಿಯ ಅನೇಕ ಸಂಘಟನೆಗಳು ಕಾನೂನಿನ ಚೌಕಟ್ಟಿನಲ್ಲೇ ಚಟುವಟಿಕೆ ನಡೆಸುತ್ತಿದ್ದಾಗಲೂ ಅವರಿಗೆ ಪೊಲೀಸ್ ಕಿರುಕುಳ ನೀಡಲಾಯಿತು. ಕೆಲವು ಚಡ್ಡಿ ಪತ್ರಿಕೆಗಳಂತೂ ಮುಸ್ಲಿಮರು ಸಂಘಟಿತರಾಗುತ್ತಿರುವುದೇ ಘೋರ ಅಪಾಯವೆಂಬಂತೆ ಬಿಂಬಿಸುತ್ತಾ ಭಯೋತ್ಪಾದಕರೊಂದಿಗೆ ಸಂಪರ್ಕ ಹೊಂದಿವೆಯೆಂದು ಅಪಪ್ರಚಾರ ನಡೆಸಿದವು.

2007 ರ ಜೂನ್‌ನಲ್ಲಿ ಇಂಗ್ಲೆಂಡಿನ ಗ್ಲಾಸ್ಗೋ ಏರ್‌ಪೋರ್ಟ್ ಮೇಲೆ ಬಾಂಬ್ ದಾಳಿಯಾದಾಗಲೂ ಬೆಂಗಳೂರಿನ ಇಬ್ಬರು ಯುವ ಮುಸ್ಲಿಂ ವೈದ್ಯರನ್ನೇ ಹೊಣೆಯಾಗಿಸಿ ಟೆರರಿಸ್ಟರೆಂದು ಬಿಂಬಿಸಲಾಗಿತ್ತು. ಇವರ ಗೆಳೆಯ ಡಾ. ಹನೀಫ್ ಎಂಬಾತನನ್ನು ಆಸ್ಟ್ರೇಲಿಯಾದಲ್ಲಿ ಬಂಧಿಸಿ ಕಿರುಕುಳ ನೀಡಲಾಗಿತ್ತು. ಆದರೆ ಹನೀಫ್ ನಿರಪರಾಧಿ ಎಂದು ಸಾಬೀತಾದಾಗ ಆಸ್ಟ್ರೇಲಿಯಾ ಸರ್ಕಾರವೇ ಹನೀಫನ ಕ್ಷಮೆ ಕೋರಿ ನಾಲ್ಕು ಕೋಟಿ ರೂಪಾಯಿ ಪರಿಹಾರವನ್ನು ನೀಡಿತ್ತು.

ಆದರೆ ನಮ್ಮಲ್ಲಿ ಪೊಲೀಸರಿಗಾಗಲಿ, ಮೀಡಿಯಾಗಳಿಗಾಗಲಿ ಮಾಡಿದ ತಪ್ಪಿಗಾಗಿ ಕ್ಷಮೆ ಕೋರುವ ಗುಣ ಇಲ್ಲ. ಕನಿಷ್ಠ ಪಕ್ಷ ವಿಷಾದ ವ್ಯಕ್ತಪಡಿಸುವ ಸೌಜನ್ಯವೂ ಇಲ್ಲವಾಗಿದೆ.

ರೆಹಮಾನ್ ಸಿದ್ಧಿಕಿಯನ್ನು ಸಿಸಿಬಿ ಪೊಲೀಸರು ಬಂಧಿಸಿದಾಗ 'ಕನ್ನಡ ಪ್ರಭ' ಹಾಗೂ ವಿಜಯವಾಣಿ ಪತ್ರಿಕೆಗಳು ಬೇರೆಲ್ಲಾ ದೈಲಿಗಳಿಗಿಂತ ವಿಪರೀತ ರಣೋತ್ಸಾಹ ಪ್ರದರ್ಶಿಸುತ್ತಾ ಅನೇಕ ದಿನಗಳ ಕಾಲ ಮುಖಪುಟದಲ್ಲೇ ಸುದ್ದಿಗಳನ್ನು ಪ್ರಕಟಿಸಿದ್ದವು. ನಿಜ-ಸುಳ್ಳುಗಳ ವ್ಯತ್ಯಾಸ ಪರಿಗಣಿಸದೆ, ಉತ್ಪ್ರೇಕ್ಷೆ-ವಾಸ್ತವಗಳ ಅಂತರ ನಿರ್ಲಕ್ಷಿಸಿ ಸಿದ್ಧಿಕಿಯನ್ನು ಟೆರರಿಸ್ಟರ ಮಾಸ್ಟರ್ ಮೈಂಡ್ ಎಂದು ಅಪಪ್ರಚಾರ ನಡೆಸಿದ್ದರು.

ಆದರೀಗ ನಿಜ ಏನೆಂದು ನ್ಯಾಯಾಲಯವೇ ಹೇಳಿದೆ.

ಸಿದ್ಧಕಿ ಬಿಡುಗಡೆಯಾಗಿ ಹೊರಬಂದು ಮೊನ್ನೆ ಒಂದು ಪತ್ರಿಕಾಗೋಷ್ಠಿ ನಡೆಸಿದ. ಪೊಲೀಸರ ಅತಿರೇಕದ ವರ್ತನೆಗಳ ಬಗ್ಗೆ ಹಾಗೂ ಮೀಡಿಯಾಗಳ ಬೇಜವಾಬ್ದಾರಿಗಳ ಬಗ್ಗೆ ನೊಂದು ಮಾತನಾಡಿದ. ಈ ವಿಚಾರ ಬೇರೆಲ್ಲಾ ಮಾಧ್ಯಮಗಳಲ್ಲೂ ಪ್ರಕಟವಾಯಿತು. ಆದರೆ ಕನ್ನಡ ಪ್ರಭ ಹಾಗೂ ವಿಜಯವಾಣಿ ಪತ್ರಿಕೆಗಳು ಮಾತ್ರ ಸಿದ್ಧಿಕಿ ನಿರಪರಾಧಿ ಎಂಬುದರ ಬಗ್ಗೆ ಒಂದೇ ಒಂದು ಅಕ್ಷರವನ್ನೂ ಬರೆಯಲಿಲ್ಲ!


ಪತ್ರಿಕಾಧರ್ಮ, ನೈತಿಕತೆ ಅಂದರೆ ಇದೇನಾ?

ಇಂಟಲಿಜೆನ್ಸ್ ಬ್ಯೂರೊ ಎಂಬ RSS ಹುತ್ತ!

ಕೇಂದ್ರ ಸರ್ಕಾರದ ಗೃಹ ಇಲಾಖೆಯಡಿ ಇರುವ ಇಂಟಲಿಜೆನ್ಸ್ ಬ್ಯೂರೊ (**IB**) ಎಂಬ ನಿಗೂಢ ಸಂಸ್ಥೆ ಇಂಡಿಯಾದ ಮುಸ್ಲಿಮರ ವಿರುದ್ಧ **RSS** ನಡೆಸುತ್ತಿರುವ ಅಪಪ್ರಚಾರ ಹಾಗೂ ಪಿತೂರಿಗಳಿಗೆಲ್ಲಾ ನಿರಂತರ ಸಾಥ್ ನೀಡುತ್ತಿರುವ ಬಗ್ಗೆ ಅನೇಕರು ಅನುಮಾನ ಪಡುತ್ತಿದ್ದಾರೆ.

ಬ್ರಾಹ್ಮಣ ಜಾತಿಯವರೇ ಸಂಪೂರ್ಣವಾಗಿ ಆಯಕಟ್ಟಿನ ಸ್ಥಾನಗಳಲ್ಲಿರುವ **IB** ಭಾರತ ದೇಶದ ಯಾವುದೇ ಸಾಂವಿಧಾನಿಕ ಸಂಸ್ಥೆಗಳಿಗೂ ಉತ್ತರದಾಯಿತ್ವ (**accountability**) ಹೊಂದಿಲ್ಲ.

ಭಯೋತ್ಪಾದನೆ ಎಂಬುದು ಭಾರತ ದೇಶಕ್ಕೆ ಅಪಾಯ ತಂದೊಡ್ಡಲಿದೆ ಎಂಬುದು ನಿಜ. ಆದರೆ **IB** ಗೆ ಮುಸ್ಲಿಂ ಟೆರರಿಸಂ ಹಾಗೂ ಮಾವೋವಾದಿಗಳು ಅಪಾಯಕಾರಿಗಳಾಗಿ ಕಂಡಷ್ಟು ಹಿಂದೂತ್ವ ಭಯೋತ್ಪಾದನೆಯೂ ಅಪಾಯಕಾರಿಯಾಗಿ ಕಾಣುತ್ತಿಲ್ಲ ಎಂಬ ಆರೋಪಗಳಿವೆ.



ಡಾ. ಹನೀಫ್

IB ಯಲ್ಲಿ ಇವತ್ತಿಗೂ ದಲಿತರು ಹಾಗೂ ಮುಸ್ಲಿಮರಿಗೆ ಪ್ರವೇಶವೇ ಇಲ್ಲ. ಅನೇಕ ದಶಕಗಳ ಕಾಲ **IB** ಯಲ್ಲಿ ಕೆಲಸ ಮಾಡಿದ್ದ ಆರ್.ಎನ್. ಕುಲಕರ್ಣಿ ಎಂಬುವರು **'A Sin of National Conscience'** ಎಂಬ ಪುಸ್ತಕವನ್ನೇ ಬರೆದು **IB**ಯ ಜಾತಿವಾದಿ, ಕೋಮುವಾದಿ ಹಾಗೂ ಪಕ್ಷಪಾತ, ಅದಕ್ಷತೆಗಳ ದೊಡ್ಡ ವಿವರಗಳನ್ನೇ ನೀಡಿದ್ದಾರೆ. ದಲಿತರು ಹಾಗೂ ಮುಸ್ಲಿಮರು ಭಾರತ ದೇಶದ ರಾಷ್ಟ್ರಪತಿ, ಪ್ರಧಾನಿ, ಮುಖ್ಯ ನ್ಯಾಯಾಧೀಶ, ಸೇನಾ ಮುಖ್ಯಸ್ಥರೂ ಆಗಬಹುದಾದರೂ **IB**ಯೊಳಗೆ ಅವರಿಗೆ ಯಾಕೆ ಪ್ರವೇಶ ಸಿಗುತ್ತಿಲ್ಲವೆಂಬುದನ್ನು ಪ್ರಶ್ನಿಸಿದ್ದಾರೆ.

ಸ್ವಜನಪಕ್ಷಪಾತ, ಸ್ವಾರ್ಥ, ಪ್ರಮೋಷನ್ನು ಪೂರ್ವಗ್ರಹಗಳ ಕೊಚ್ಚೆಗುಂಡಿಯಾಗಿರುವ **IB** ಭಾರತ ದೇಶದ ಆಂತರಿಕ ಭದ್ರತೆಯನ್ನು ಖಾತರಿ ಪಡಿಸುವಷ್ಟು ದಕ್ಷತೆ ಹೊಂದಿಲ್ಲವೆಂಬುದನ್ನು ಕುಲಕರ್ಣಿ ನಿರೂಪಿಸುತ್ತಾರೆ. **IB** ಸಿಬ್ಬಂದಿಗೆ ಅವರ ಸಂಬಳ-ಸಾರಿಗೆಗಳ ನಿಯಮಿತ ಸೌಲಭ್ಯಗಳಲ್ಲದೇ ವಾರ್ಷಿಕ ಹತ್ತು ಸಾವಿರ ಕೋಟಿ ರೂಪಾಯಿಗಳ ರಹಸ್ಯ ನಿಧಿಯೂ ಇದೆ. **IB**ಯೊಳಗಿರುವ **RSS** ಸಿಂಪಥೈಸರ್‌ಗಳು ಈ ನಿಧಿಯನ್ನು ಮನಸೋ ಇಚ್ಛೆ ದುರ್ಬಳಕೆ ಮಾಡುತ್ತಿದ್ದಾರೆ.

ಬೆಂಗಳೂರಿನ ಪತ್ರಕರ್ತ ಸಿದ್ಧಿಕಿಯ ಬಂಧನವಾದದ್ದೂ **IB** ನೀಡಿದ್ದ ಸುಳ್ಳು ಮಾಹಿತಿಯ ಮೇರೆಗೆ. ಆದರೆ ಈಗ ಮುಖಭಂಗವಾಗುತ್ತಿರುವುದು ಕರ್ನಾಟಕ ಪೊಲೀಸರಿಗೆ.

ಮುಸ್ಲಿಮರ ವಿರುದ್ಧ ಭಯೋತ್ಪಾದನೆಯ ಅಪಪ್ರಚಾರ ನಡೆಸುತ್ತಾ ಅವರನ್ನು ದೇಶದ ಮುಖ್ಯವಾಹಿನಿಯಿಂದ ಪ್ರತ್ಯೇಕಗೊಳಿಸುವ **RSS** ಸಂಚನ್ನು **IB** ಕೂಡ ಪಾಲಿಸುತ್ತಿರುವಂತಿದೆ.

ಇದಕ್ಕೆ ಕೇವಲ ಮುಸ್ಲಿಂ ದ್ವೇಷ ಮಾತ್ರ ಕಾರಣವಾಗಿರದೆ ಕೀರ್ತಿ ಪದಕಗಳ ಆಕಾಂಕ್ಷೆಯೂ ಕಾರಣವಾಗಿದೆ.

ಇದಕ್ಕೊಂದು ಉದಾಹರಣೆಯೂ ಇದೆ.

ಕರ್ನಾಟಕದ ಹೆಮ್ಮೆಯ ಪೊಲೀಸ್ ಅಧಿಕಾರಿಯಾಗಿದ್ದ ಕೆಂಪಯ್ಯನವರ ಅಳಿಯ ದಿನೇಶ್ ಕೂಡಾ **IPS** ಆಫೀಸರ್ ಆಗಿದ್ದು **IB**ಯ ಸಂಚಿಗೆ ಬಲಿಯಾಗಿ ಕಳೆದ ಐದು ವರ್ಷಗಳಿಂದ ಜೈಲಿನಲ್ಲಿದ್ದಾರೆ.

ಸಾಧಾರಣ ವಸೂಲಿ ಗ್ಯಾಂಗ್‌ಸ್ಟರ್ ಆಗಿದ್ದ ಗುಜರಾತಿನ ಸೋಹ್ರಾಬುದ್ದೀನ್ ಶೇಟ್‌ನ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ದಿನೇಶ್ ಈಗ ಆರೋಪಿಯಾಗಿ ಜೈಲಿನಲ್ಲಿದ್ದಾರೆ.

IBಯ ಹಿಂದೂತ್ವವಾದಿ ಆಫೀಸರ್‌ಗಳು ಹಾಗೂ ಗುಜರಾತಿನ ನರೇಂದ್ರ ಮೋದಿ ಸರ್ಕಾರ ಸೊಹ್ರಾಬುದ್ದೀನನನ್ನು ವಿನಾಕಾರಣ ಭಯೋತ್ಪಾದಕನೆಂದು ಬಿಂಬಿಸಿ ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿಸಿಬಿಟ್ಟರು. ಆದರೆ ದಿನೇಶ್ ಈ ಒಳಪಿತೂರಿಯನ್ನು ಅರಿಯದೆ ಇದೊಂದು ದೇಶಸೇವೆಯ ಕೆಲಸ ಹಾಗೂ ಶೌರ್ಯ ಪ್ರಶಸ್ತಿ ಸಿಗುತ್ತದೆಂದು ನಂಬಿ ಸೊಹ್ರಾಬುದ್ದೀನ್ ಮತ್ತವನ ಪತ್ನಿಯನ್ನು ಕೊಲೆ ಮಾಡಿದ ಪೊಲೀಸ್ ಟೀಂನಲ್ಲಿ ಸೇರಿಕೊಂಡಿದ್ದರು.

ಇದರ ಪರಿಣಾಮ ದಿನೇಶ್ ಈಗ ಜೈಲಿನಲ್ಲಿದ್ದಾರೆ. ಇದಕ್ಕೆ ಚಿತಾವಣೆ ನೀಡಿದ **IB** ಹಾಗೂ ಮೋದಿ ಆರಾಮಾಗಿದ್ದಾರೆ.

ಕರ್ನಾಟಕ ಸೇರಿದಂತೆ ದೇಶದ ಅನೇಕ ರಾಜ್ಯಗಳ ಪೊಲೀಸರಿಗೆ ಈಗ ನಿಷ್ಪಕ್ಷಪಾತ ಕರ್ತವ್ಯಕ್ಕಿಂತ ಪ್ರಶಸ್ತಿ-ಪದಕ-ಪ್ರಮೋಷನ್ನುಗಳಿಗಾಗಿ ಮುಸ್ಲಿಮರನ್ನು ಟೆರರಿಸಂ ಕೇಸುಗಳಲ್ಲಿ ಸಿಲುಕಿಸುವ ಕೆಟ್ಟ ಟ್ರೆಂಡ್ ಒಂದು ಶುರುವಾಗಿದೆ. ಜೊತೆಗೆ ದೇಶದ ಇನ್ನಿತರ ಪೊಲೀಸ್‌ರೆದುರು ಕರ್ನಾಟಕದವರೇನೂ ಕಡಿಮೆ ಇಲ್ಲ ಎಂದು ತೋರಿಸಿಕೊಳ್ಳುವ ಉಮೇದಿಗೂ ಬಿದ್ದು ಅಪರಾಧಿಗಳು ಅಮಾಯಕರನ್ನೆಲ್ಲಾ ಒಟ್ಟಿಗೆ ಸೇರಿಸಿ ಟೆರರಿಸಂ ಭೂತ ಸೃಷ್ಟಿಸುವ ಕೆಲಸ ನಡೆಯುತ್ತಿದೆ. ಈಗಿನ ಸಿದ್ಧಿಕಿ ಪ್ರಕರಣದಿಂದಲಾದರೂ ರಾಜ್ಯ ಪೊಲೀಸರು ಪಾಠ ಕಲಿಯಲಿ.

● ಪಾರ್ವತೀಶ

ಪೊಲೀಸರು ಹೇಳಿದ್ದನ್ನೇ ಯಥಾವತ್ತಾಗಿ ಸುದ್ದಿ ಮಾಡುವುದಾದರೆ ಅದನ್ನು ಪತ್ರಿಕೋದ್ಯಮ ಅನ್ನುತ್ತಾರಾ? ಅದರ ಸತ್ಯಾಸತ್ಯತೆಗೆ ಯಾವ ಬೆಲೆಯೂ ಇಲ್ವಾ? ವಿಷಯದ ಎರಡೂ ಮಗ್ಗುಲನ್ನು ಕನಿಷ್ಠ ಆಸಕ್ತಿಗಾದರೂ ಪರಿಶೀಲಿಬೇಕಲ್ಲವೆ? ಬೇರೆಲ್ಲ ಪ್ರಕರಣಗಳಲ್ಲೂ ವಾಸ್ತವವನ್ನು ಕೆದಕುವ ಮಾಧ್ಯಮಗಳು ಮುಸ್ಲಿಮರು, ದಲಿತರು, ಹಿಂದುಳಿದವರ ವಿಷಯದಲ್ಲಿ ಮಾತ್ರ ಏಕೆ ಕರ್ತವ್ಯವನ್ನು ಮರೆತುಬಿಡುತ್ತವೆ?

ಸಿದ್ಧಿಕಿಯ ಸತ್ಯದೆದುರು ಬೆತ್ತಲಾದ ಫ್ಯಾಸಿಸ್ಟ್ ಸರ್ಕಾರ+ ಕೇಸರಿ ಮೀಡಿಯಾ





ಡೆಕ್ಕನ್ ಹೆರಾಲ್ಡ್ ವರದಿಗಾರ ಸಿದ್ಧಿಕಿಯನ್ನು 'ನಿರ್ದೋಷಿ' ಎಂದು ಘೋಷಿಸುವ ಮೂಲಕ ನ್ಯಾಯಾಲಯ ಫ್ಯಾಸಿಸ್ಟ್ ಸರ್ಕಾರ ಮತ್ತು ಕೇಸರಿ ಮೀಡಿಯಾಗಳೆರಡಕ್ಕೂ ಒಟ್ಟೊಟ್ಟಿಗೆ ಕಪಾಳಮೋಕ್ಷ ಮಾಡಿದೆ.

ಮಂಗಳೂರಿನ ಕಸ್ತೂರಿ ಟೀವಿ ವರದಿಗಾರ ನವೀನ್ ಸೂರಿಂಜೆ, ಕೇರಳ 'ಓಪನ್' ವರದಿಗಾರ್ತಿ ಶಾಹೀನಾ, ಕರಾವಳಿ ಅಲೆ ಸಂಪಾದಕ ಸೀತಾರಾಮ್ ನಂತರ ಕೇಸರಿ ಪೊಲೀಸ್ ಪಡೆಗೆ ಬಲಿಯಾದ ಮತಿ ಉರ್ ರೆಹಮಾನ್ ಸಿದ್ಧಿಕಿಯನ್ನು **Waging War Against India** ಅಂದರೆ ದೇಶದ ವಿರುದ್ಧ ಯುದ್ಧಕ್ಕಿಳಿದ ಆರೋಪ ಹೊರಿಸಲಾಗಿತ್ತು, ಪಾಕಿಸ್ತಾನದ ಐಎಸ್ಐ ಜೊತೆ ಕೈಜೋಡಿಸಿ ಕರ್ನಾಟಕದ ಪ್ರಮುಖ ರಾಜಕಾರಣಿಗಳನ್ನೂ, ಪತ್ರಕರ್ತರನ್ನೂ ಹತ್ಯೆ ಮಾಡಲು ಸಂಚು ಹೂಡಿದ್ದಾನೆಂದು ಆರೋಪಿಸಿ ಬಂಧಿಸಲಾಗಿತ್ತು, ಹೆಚ್ಚುಕಮ್ಮಿ ಆರು ತಿಂಗಳುಗಳ ಕಾಲ ಜೈಲುವಾಸ ಅನುಭವಿಸಿದ ಓರ್ವ ಜನಪರ ಪತ್ರಕರ್ತನ ಬಿಡುಗಡೆಯ ಮೂಲಕ ಫ್ಯಾಸಿಸ್ಟ್ ಸರ್ಕಾರವೊಂದರ ಏನೆಲ್ಲಾ ಹುನ್ನಾರಗಳು ಬೆಳಕಿಗೆ ಬರಬೇಕಿತ್ತೋ ಅದು ಮಾತ್ರ ಇನ್ನೂ ನಿಗೂಢ!

ಹೆಚ್ಚು ದಿನಗಳಾಗಿಲ್ಲ, ಬಹುಶಃ ಪತ್ರಿಕೆ, ಟೀವಿಗಳ ಯಾವೊಬ್ಬ ಪತ್ರಕರ್ತರೂ ಅದನ್ನು ಮರೆತಿರಲಿಲ್ಲ, ಅವತ್ತು 2012 ರ ಆಗಸ್ಟ್ 29 ರ ಬೆಳಗ್ಗೆಯ ಎಂಟೂವರೆಯ ಹೊತ್ತು, ಬೆಂಗಳೂರಿನ ಮುನಿರೆಡ್ಡಿಪಾಳ್ಯದ ಗಲ್ಲಿಯೊಂದಕ್ಕೆ ಸಿಸಿಬಿ ಎಸಿಪಿ ಜಿತೇಂದ್ರನಾಥರ ಪೊಲೀಸ್ ಪಡೆ ದಾಳಿಯಿಡುತ್ತದೆ. ಬರೋಬ್ಬರಿ ಅರ್ಧ ಡಜನ್ ಇನ್ಸ್‌ಪೆಕ್ಟರ್‌ಗಳೂ ಅವರ ದುಪ್ಪಟ್ಟಿದ್ದ ಪೊಲೀಸರೂ ಬಂದಷ್ಟೇ ವೇಗವಾಗಿ ಅಲ್ಲಿನ ಬಾಡಿಗೆ ಮನೆಯೊಂದರಿಂದ ಆರು ಮಂದಿ ಮುಸ್ಲಿಂ ಯುವಕರನ್ನು ವ್ಯಾನೊಂದಕ್ಕೆ ತುಂಬಿಸಿಕೊಂಡಿದ್ದೇ ಅರೆಕ್ಷಣದಲ್ಲೇ ಕಣ್ಮರೆಯಾಗುತ್ತಾರೆ.

ಅವತ್ತು ಸಿಸಿಬಿ ಪೊಲೀಸರ ಮೂಲಕ ಜೈಲುಪಾಲಾದ ಆರು ಮಂದಿ ಮುಸ್ಲಿಂ ಯುವಕರ ಪೈಕಿ ಈಗ ನಿರ್ದೋಷಿಗಳೆಂದು ಬಿಡುಗಡೆಗೊಂಡ ಮತಿ ಉರ್ ರೆಹಮಾನ್ ಸಿದ್ಧಿಕಿ ಮತ್ತು ಮೊಹಮ್ಮದ್ ಯೂಸೂಫ್ ನಾಲಬಂದ್ ಪ್ರಮುಖರು.

ಇತ್ತ ಬೆಂಗಳೂರಿನಲ್ಲಿ ಸಿಸಿಬಿ ಪೊಲೀಸರು ಮುನಿರೆಡ್ಡಿಪಾಳ್ಯದ ಮನೆಯೊಂದರ ಮೇಲೆ ದಾಳಿ ನಡೆಸಿದ ಹೊತ್ತಿಗೇ ಅತ್ತ ಹುಬ್ಬಳ್ಳಿಯ ಬಂಡಿವಾಡ ಅಗಸಿಯ ಮನೆಯೊಂದರಿಂದ ಮತ್ತೆ ನಾಲ್ವರು ಮುಸ್ಲಿಂ ಯುವಕರನ್ನು ಬಂಧಿಸುತ್ತಾರೆ. ಓಬೇದುಲ್ಲಾ ಇಮ್ರಾನ್, ಮೊಹಮ್ಮದ್ ಸಿದ್ಧಿಕ್, ವಾಹೀದ್ ಹುಸೇನ್ ಮತ್ತು ಜಾಫರ್ ಇಕ್ಬಾಲ್ ಸೋಲಾಪುರ್ ಎಂಬ ಈ ನಾಲ್ವರಿಗೆ ದುಬೈನಿಂದ ಯಾರೋ ಜಾಕಿರ್ ಅಲಿಯಾಸ್ ಉಸ್ತಾದ್ ಎಂಬಾತ ಇ-ಮೇಲ್ ಸಂದೇಶ ಕಳಿಸುತ್ತಿದ್ದನಂತೆ.

ಹೀಗೆ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಬಂಧಿತರಾದ 10 ಮಂದಿಯ ಜೊತೆಗೇ ಕ್ರಮೇಣ 2012 ರ ನವೆಂಬರ್ ನಾಲ್ಕರಂದು ಬೆಂಗಳೂರಿನ ಗೋರಿಪಾಳ್ಯದ ತುಂಜೀಮ್ ಎಂಬ ಯುವಕನನ್ನೂ ಬಂಧಿಸಿ ಇದೇ ಮೊಕದ್ದಮೆಗೆ ಸೇರಿಸಲಾಗುತ್ತದೆ. ಇವರೆಲ್ಲರೂ ಸೇರಿ ಪಾಕಿಸ್ತಾನದ ಐಎಸ್ಐ ಮೂಲಕ ಬಾಂಗ್ಲಾದೇಶದ ಇಸ್ಲಾಮಿಕ್ ಭಯೋತ್ಪಾದಕ 'ಹುಜಿ' ಸಂಘಟನೆಯ ಸಂಪರ್ಕಕ್ಕೆ ಬಂದರೆಂದೂ ಜೊತೆಗೆ ಲಷ್ಕರ್-ಇ-ತೋಯ್ಬಾ ಎಂಬ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಯ ಜೊತೆಗೂ ನೆಂಟಸ್ತಿಕೆ ಸಾಧಿಸಿ ಕರ್ನಾಟಕದ ಪ್ರಮುಖ ರಾಜಕಾರಣಿಗಳು ಮತ್ತು ಗಣ್ಯರ ಹತ್ಯೆಗೆ ಸಂಚು ರೂಪಿಸಿದ್ದಾರೆಂಬುದು ಅವರ ಮೇಲಿನ ಆರೋಪ.

2012 ರ ಆಗಸ್ಟ್ 29ರ ಬೆಳಿಗ್ಗೆ ಬಂಧಿತರಾದವರ ಪೈಕಿ ಡೆಕ್ಕನ್ ಹೆರಾಲ್ಡ್ ವರದಿಗಾರ ಮತಿ ಉರ್ ರೆಹಮಾನ್ ಸಿದ್ಧಿಕಿಯೆ ಇಡೀ ಸಂಚಿನ **`master mind'** ಎಂಬುದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವಿಶ್ಲೇಷಣೆಯಾಗಿತ್ತು, ಹಾಗೇ ಸಿಸಿಬಿ ಪೊಲೀಸರು ಹಿಡಿದೊಯ್ದ ಆರು ಮಂದಿ ಮುಸ್ಲಿಂ ಯುವಕರ ಪೈಕಿ ಇಜಾಜ್ ಅಹ್ಮದ್ ಮಿರ್ಜಾ ದೇಶದ ಸೈನ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ಉತ್ಪಾದಿಸುವ ಡಿಆರ್‌ಡಿಓ ಸಂಸ್ಥೆಯಲ್ಲಿ ಕಿರಿಯ ವಿಜ್ಞಾನಿ. ಆತನ ತಮ್ಮ ಶೋಯಬ್ ಅಹ್ಮದ ಮಿರ್ಜಾ **MCA** ವಿದ್ಯಾರ್ಥಿ. ಮೊಹಮ್ಮದ್ ಯುಸೂಫ್ ನಾಲಬಂದ್ ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿ ಯೊಂದರಲ್ಲಿ ಉದ್ಯೋಗಿಯಾಗಿದ್ದ. ಅಹ್ಮದ್ ಬ್ಯಾಹಟ್ಟಿ ಎಂಬಾತ

ಜನಪರ ಪತ್ರಕರ್ತರ ವಿರುದ್ಧದ ಪ್ರಭುತ್ವದ ಪಿತೂರಿ


ಕೆ.ಕೆ.ಶಾಹೀನಾ


ನವೀನ್ ಸೂರಿಂಜೆ


ಸಯ್ಯದ್ ಇಫ್ತಿಕಾರ್ ಗಿಲಾನಿ


ಸಯ್ಯದ್ ಮೊಹ್ಮದ್ ಖಜ್ಮಿ

ಇವತ್ತು ಸಿದ್ಧಿಕಿ ವಿರುದ್ಧದ ವ್ಯವಸ್ಥಿತ ಸಂಚೇನೋ ಬಯಲಾಗಿದೆ. ಆದರೆ ಪ್ರಭುತ್ವ, ಆರೆಸ್ಸೆಸ್ ಮತ್ತು ಕೇಸರಿ ಮೀಡಿಯಾಗಳ ಅಗೋಚರ ಒಕ್ಕೂಟ ಮಾತ್ರ ಜಾತ್ಯತೀತ, ಪ್ರಗತಿಪರ ಮುಸ್ಲಿಂ ಪತ್ರಕರ್ತರನ್ನು ಆಯ್ದು 'ಭಯೋತ್ಪಾದನೆ'ಯ ನೆಪದಲ್ಲಿ ಹಣಿಯುತ್ತಲೇ ಬಂದಿವೆ.

ಇದಕ್ಕೆ ತಾಜಾ ಉದಾಹರಣೆ ಕೇರಳ ಮೂಲದ ಪತ್ರಕರ್ತೆ ಕೆ.ಕೆ.ಶಾಹೀನಾ. ಈ ಹಿಂದೆ 'ತೆಹಲ್ಕಾ' ವರದಿಗಾರ್ತಿಯಾಗಿ ಹಲವಾರು 'ಶಂಕಿತ' ಆರೋಪಿಗಳನ್ನು ಜೈಲಲ್ಲಿ ಭೇಟಿಯಾಗಿ ಅವರ ಬಂಧನದ ಹಿಂದಿರುವ ಷಡ್ಯಂತ್ರವನ್ನು ಬಯಲಿಗೆಳೆದದ್ದು ಶಾಹೀನಾ ಕಾಳಜಿಯ ಪ್ರತೀಕವಾಗಿತ್ತು, **'Prisoner of an Image'** ಎಂಬ ಆಕೆಯ ವರದಿ ಮತ್ತು ಕಮೇಲಿದೇವಿ ಪ್ರಶಸ್ತಿ ಸಮಾರಂಭದಲ್ಲಿ 'ನಾನೊಬ್ಬ ಮುಸ್ಲಿಂ; ಆದರೆ ಭಯೋತ್ಪಾದಕನಲ್ಲ' ಎಂಬ ವಿಷಯದ ಕುರಿತು ಮಾಡಿದ ಭಾಷಣ-ಇವೆರಡೂ ಪ್ರಭುತ್ವ ಹೇಗೆ ಮುಸ್ಲಿಮರ ವಿರುದ್ಧ ವರ್ತಿಸುತ್ತಿದೆ ಎಂಬುದನ್ನು ಸವಿಸ್ತಾರವಾಗಿ ಬಯಲುಗೊಳಿಸಿತ್ತು.

2010ರಲ್ಲಿ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಪೊಲೀಸರು ಕೇರಳದ ಪಿಡಿಪಿ ಸಂಸ್ಥಾಪಕ ಅಬ್ದುಲ್ ನಾಸೆರ್ ಮದನಿಯನ್ನು ಬಂಧಿಸಿ ಜೈಲಿಗೆ ಹಾಕಿದಾಗ ಅವರ ಸತ್ಯಾಸತ್ಯತೆಯನ್ನು ಕೆದಕಿದ್ದೇ ಶಾಹೀನಾಳ ಅಪರಾಧವಾಯ್ತು, ಮದನಿ ವಿರುದ್ಧ ಪ್ರಕರಣದ ಸಾಕ್ಷಿದಾರನಾಗಿದ್ದ ಕೊಡಗು ಸಿದ್ಧಾಪುರದ ರಫೀಕ್‌ನನ್ನು ಭೇಟಿ ಮಾಡಿ ಆತನ ಸಂದರ್ಶನವೊಂದಕ್ಕೆ ಶಾಹೀನಾ ಯತ್ನಿಸಿದ್ದು ಸಹಜವಾಗೇ ತನಿಖಾ ಪತ್ರಿಕೋದ್ಯಮದ ಭಾಗವಾಗಿತ್ತು, ಆದರೆ ಪೊಲೀಸರು ಅದನ್ನೇ ಆರೋಪಿ ಪರ ವಹಿಸಿ ಸಾಕ್ಷಿದಾರನಿಗೆ ಬೆದರಿಕೆ ಹಾಕಿದಂತೆ, ಆರೋಪಿಯ ಜೊತೆ ಶಾಮೀಲಾದಂತೆ ತಿರುಚಿಬಿಟ್ಟರು.

ಶಾಹೀನಾ ವಿರುದ್ಧ ಸಿದ್ಧಾಪುರ ಪೊಲೀಸ್ ಠಾಣೆಯಲ್ಲಿ ಅಕ್ರಮ ಚಟುವಟಿಕೆ ನಿರ್ಬಂಧ ಕಾಯ್ದೆ, ಐಪಿಸಿ ಕಲಂ 120ಬಿ, 506 (ಕೊಲೆ ಬೆದರಿಕೆ) ಮತ್ತು ಕಲಂ 22ರ ಅಡಿಯಲ್ಲಿ ಗಂಭೀರ ಪ್ರಕರಣಗಳನ್ನು ದಾಖಲಿಸಲಾಯ್ತು, ಇದರ ವಿರುದ್ಧ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದಾಗಲೂ ಮಡಿಕೇರಿ ನ್ಯಾಯಾಲಯಕ್ಕೆಂದು ಬಂದಿದ್ದ ಶಾಹೀನಾ ಮತ್ತವರ ಸಹಚರರ ಮೇಲೆ ಭಜರಂಗದಳದ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದರು. ಈಗ ಕೊಡಗಿನ ಕೋರ್ಟು ಶಾಹೀನಾ ಪರ ಜಾಮೀನು ನೀಡಿದೆಯಾದರೂ ಓರ್ವ ಪತ್ರಕರ್ತೆಯಾಗಿ ಮದನಿ ವಿರುದ್ಧದ ಸಾಕ್ಷಿಯ ಸಂದರ್ಶನಕ್ಕೆ ಯತ್ನಿಸಿದ್ದೇ ಅಪರಾಧವೆಂಬಂತೆ ಕಾಟಕ್ಕಿಳಿದ ಪೊಲೀಸ್ ವ್ಯವಸ್ಥೆಯ ಪೂರ್ವಾಗ್ರಹವನ್ನು ಪ್ರಶ್ನಿಸುವವರ್‍ಯಾರು?

ಮಂಗಳೂರಿನ ಪಡೀಲು ರೆಸಾರ್ಟ್‌ನಲ್ಲಿ ಯುವತಿಯರ ಮೇಲೆ ಭಜರಂಗಿಗಳು ನಡೆಸಿದ ಕೀಚಕ ಕ್ರೌರ್ಯವನ್ನು ಬಹಿರಂಗಪಡಿಸಿದ ಒಂದೇ ತಪ್ಪಿಗೆ ಕಸ್ತೂರಿ ಟೀವಿ ವರದಿಗಾರ ನವೀನ್ ಸೂರಿಂಜೆಯನ್ನು ಜೈಲಿಗೆ ಹಾಕಿದಷ್ಟೇ ಸಲೀಸಾಗಿ ಶಾಹೀನಾರನ್ನೂ ಜೈಲಿಗೆ ಹಾಕುವ ಫ್ಯಾಸಿಸ್ಟ್ ಪಿತೂರಿಗೆ ಸದ್ಯ ಹೈಕೋರ್ಟ್ ಅಡ್ಡಗಾಲಿಟ್ಟಿದೆ. ಇವತ್ತಿಗೂ ಶಾಹೀನಾ ತಿಂಗಳಿಗೆ ಎರಡು ಬಾರಿ ಬೆಂಗಳೂರಿಗೆ ಬಂದು ತನಿಖಾಧಿಕಾರಿಗಳ ಮುಂದೆ ಹಾಜರಾಗಬೇಕು. ಯಾವ ತನಿಖೆ? ಏನು ಅಪರಾಧ?

'ಕಾಶ್ಮೀರ ಟೈಮ್ಸ್' ಪತ್ರಿಕೆಯ ದೆಹಲಿ ಬ್ಯುರೋ ಮುಖ್ಯಸ್ಥರಾಗಿದ್ದ ಸಯ್ಯದ್ ಇಫ್ತಿಕಾರ್ ಗಿಲಾನಿಯನ್ನು 2002ರ ಜೂನ್‌ನಲ್ಲಿ ದೆಹಲಿ ಪೊಲೀಸ್ ವಿಶೇಷ ಘಟಕ ಬಂಧಿಸಿದ್ದು ಕೂಡ ಭಯೋತ್ಪಾದಕ ಚಟುವಟಿಕೆಯ ಹೆಸರಲ್ಲೇ. ಅಫಿಷಿಯಲ್ ಸೀಕ್ರೆಟ್ ಆಕ್ಟ್‌ನಡಿ ಅವರನ್ನು ಜೈಲಿಗೂ ದಬ್ಬಲಾಯ್ತು, ಅದೃಷ್ಟವೋ ಎಂಬಂತೆ 14 ವರ್ಷಗಳ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅವರು ಕೇವಲ ಆರೇ ತಿಂಗಳಲ್ಲಿ ಬಿಡುಗಡೆಯಾದರು. ಕಾರಣವಿಷ್ಟೆ- ಯಾವ ಭಯೋತ್ಪಾದನೆಗೆ ಸಂಬಂಧಿಸಿದ 'ಕ್ಲಾಸಿಫೈಡ್' ಡಾಕ್ಯುಮೆಂಟುಗಳು ಗಿಲಾನಿಯ ಬಳಿ ಸಿಕ್ಕಿವೆಯೆಂದು ಪೊಲೀಸರು ಆರೋಪಿಸಿದ್ದರೋ ಅಂಥ ಡಾಕ್ಯುಮೆಂಟ್‌ಗಳು ಹಲವಾರು ವರ್ಷಗಳಿಂದ ಇಂಟರ್‌ನೆಟ್‌ನಲ್ಲಿ ಉಚಿತವಾಗಿ ಲಭ್ಯವಿದ್ದವೆಂದು ಇಂಡಿಯನ್ ಎಕ್ಸ್‌ಪ್ರೆಸ್ ತನ್ನ ತನಿಖಾ ವರದಿಯಲ್ಲಿ ಬಯಲು ಮಾಡಿತ್ತು.

ಸಾಲದ್ದಕ್ಕೆ ದೆಹಲಿಯ ಪತ್ರಕರ್ತರ ಒಕ್ಕೂಟ ಮತ್ತು ಎಡಿಟರ್ ಗಿಲ್ಡ್ ಆಫ್ ಇಂಡಿಯಾ ಸಂಸ್ಥೆಗಳು ದೆಹಲಿ ಪೊಲೀಸರ ಕುತಂತ್ರ ಸಂಚುಗಳನ್ನು ಬಯಲಿಗೆಳೆದಿದ್ದರು. ಇದರ ಫಲವಾಗೇ ಜೀವಾವಧಿ ಶಿಕ್ಷೆ ಅಥವಾ ಗಲ್ಲಿಗೂ ಏರಬಹುದಾಗಿದ್ದ ಪತ್ರಕರ್ತ ಗಿಲಾನಿ ಆರೋಪ ಮುಕ್ತರಾಗಿ ಜೈಲಿಂದ ಬಿಡುಗಡೆಯಾಗುವಂತಾಯ್ತು.

ಸದ್ಯ ಸಯ್ಯದ್ ಮೊಹ್ಮದ್ ಖಜ್ಮಿ ಎಂಬ ದೆಹಲಿ ಮೂಲದ ಪತ್ರಕರ್ತರೊಬ್ಬರ ಮೇಲಿನ ವಿಚಿತ್ರ ಪ್ರಕರಣವೊಂದು ಹೀಗಿದೆ. ದೆಹಲಿಯಲ್ಲಿದ್ದ ಇಸ್ರೇಲ್ ರಾಜತಾಂತ್ರಿಕ ಕಚೇರಿಯ ಮುಖ್ಯಸ್ಥರ ಕಾರಿನ ಮೇಲೆ ಬಾಂಬ್ ದಾಳಿ ನಡೆಸಲು ಖಜ್ಮಿ ಸಂಚು ರೂಪಿಸಿದ್ದರೆಂಬುದು ಪೊಲೀಸರು ಹೊರಿಸಿದ್ದ ಆರೋಪ. 2012ರ ಫೆಬ್ರವರಿಯಲ್ಲಿ ಅವರನ್ನು ಬಂಧಿಸಿ ಜೈಲಿಗೆ ಹಾಕಲಾಯ್ತು, ಏಳು ತಿಂಗಳುಗಳ ಕಾಲ ಜೈಲು ಶಿಕ್ಷೆಯ ನಂತರವೇ 2012ರಲ್ಲಿ ಅವರಿಗೆ ಜಾಮೀನು ಸಿಕ್ಕಿತ್ತು.

ಖಜ್ಮಿ ಜೈಲಲ್ಲಿದ್ದಾಗಲೇ ಅಂದರೆ 2012 ಜುಲೈ ಹೊತ್ತಿಗೆ ದೆಹಲಿಯ ಹಿರಿಯ ಪತ್ರಕರ್ತರು, ಪ್ರೊಫೆಸರ್‌ಗಳು ಮತ್ತು ಮಾನವ ಹಕ್ಕು ಹೋರಾಟಗಾರರೆಲ್ಲ ಸೇರಿ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಮತ್ತು 'ಟೈಮ್ಸ್ ನೌ' ಚಾನಲ್‌ಗಳಿಗೆ ಪತ್ರ ಬರೆದು ಖಜ್ಮಿ ವಿರುದ್ಧ ಪೂರ್ವಾಗ್ರಹ ಪೀಡಿತ ವರದಿಗಳನ್ನು ಪ್ರಕಟಿಸದಂತೆ ಕೋರಿಕೊಂಡರು. ವಾಸ್ತವಾಂಶಗಳನ್ನು ಆಧಾರ ಸಹಿತ ನೀಡಿದ್ದರೂ ಟೈಮ್ಸ್ ಬಳಗ ಈ ಬಗ್ಗೆ ಕಾಟಾಚಾರಕ್ಕೂ ವರದಿ ಪ್ರಸರಿಸಲಿಲ್ಲ.

2012ರ ಸೆಪ್ಟೆಂಬರ್‌ನಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ 'ಇಂಟರ್ ಪ್ರೆಸ್ ಏಜೆನ್ಸಿ' ಕಡೆಯಿಂದ ಪ್ರಶಸ್ತಿ ವಿಜೇತ ತನಿಖಾ ವರದಿಗಾರ ಗ್ಯಾರೆಟ್ ಪೋರ್ಟರ್ ಈ ಬಗ್ಗೆ ದೂರು ಕಂತುಗಳ ತನಿಖಾ ವರದಿಯೊಂದನ್ನು ಪ್ರಕಟಿಸಿದರು. **'The Delhi car bombing; How police built a false case'** ಎಂಬ ಈ ವರದಿಯಲ್ಲಿ ದೆಹಲಿ ಪೊಲೀಸರ ಮಿಥ್ಯಾರೋಪಗಳು, ಸಂಚುಗಳು, ಕುತಂತ್ರಗಳನ್ನು ಆಧಾರಸಮೇತ ಬಯಲು ಮಾಡಲಾಗಿತ್ತು.

ಈ ವರದಿಯು ಒದಗಿಸಿದ ದಾಖಲೆಗಳ ನೆರವಿನಿಂದಲೇ ಖಜ್ಮಿಗೆ ಜಾಮೀನು ದೊರೆಯಿತು. ಕೇಸು ಇನ್ನೂ ವಿಚಾರಣೆಯಲ್ಲಿದ್ದು ಇವತ್ತಲ್ಲ ನಾಳೆ ಖಾಜ್ಮಿ ಆರೋಪ ಮುಕ್ತರಾಗುವ ಸಾಧ್ಯತೆಗಳೇ ಹೆಚ್ಚಿವೆ. ಈ ಎಲ್ಲ ಪ್ರಕರಣಗಳ ಸಾರಾಂಶವಿಷ್ಟೆ-

ನೀವು ಜನಪರ, ಸತ್ಯನಿಷ್ಠ ಅಥವಾ ಧ್ಯೇಯನಿಷ್ಠ ಪತ್ರಕರ್ತರಾಗಿದ್ದರೆ, ಅದರಲ್ಲೂ ಮುಸ್ಲಿಂ ಪತ್ರಕರ್ತನಾಗಿದ್ದು ಪೊಲೀಸ್ ಚಮಚಾಗಿರಿಯನ್ನೋ, ಪೊಲೀಸರಿಗೆ ಮಾಹಿತಿದಾರರಾಗೋ ಇರಲಿಲ್ಲವೆಂದರೆ, ನಿಮ್ಮ ವಿರುದ್ಧ ಎಲ್ಲೋ ಒಂದು ಕಡೆ ಸಂಚು ನಡೆದಿದೆ ಎಂದೇ ಅರ್ಥ.

ಮುಸ್ಲಿಂ ಪತ್ರಕರ್ತನೊಬ್ಬ ಸತ್ಯ ಕೆದಕ ಹೊರಟರೆ ಟೆರರಿಸ್ಟು, ದಲಿತ, ಹಿಂದುಳಿದ, ಬಡವರ ಪರವಹಿಸಿ ನ್ಯಾಯ ಕೇಳಿದವನು ನಕ್ಸಲೈಟು.



ಸಿದ್ಧಿಕಿ ವಾಸವಿದ್ದ ಬೆಂಗಳೂರು ಮನೆ



ಸಿದ್ದಿಕಿ ಬಡಕುಟುಂಬ ವಾಸಿಸುವ ಹುಬ್ಬಳ್ಳಿ ಮನೆ



...ಗ್ ಎಕ್ಸಿಕ್ಯೂಟಿವ್ ಆಗಿದ್ದರೆ ಅಬ್ದುಲ್ ... ಜಮಾದಾರ್ BCA ವಿದ್ಯಾರ್ಥಿಯಾಗಿದ್ದ. ...ಣಾ ಸಾಮಗ್ರಿ ತಯಾರಿಕಾ ಸಂಸ್ಥೆಯಲ್ಲಿ ವಿಜ್ಞಾನಿ ...ನೊಬ್ಬ, ಡೆಕ್ಕನ್ ಹೆರಾಲ್ಡ್‌ನಲ್ಲಿ ...ನಾಗಿದ್ದ ಮತ್ತೊಬ್ಬ, ಬಹುರಾಷ್ಟ್ರೀಯ ...ಲ್ಲಿ ಕೆಲಸಕ್ಕಿದ್ದವ ಇನ್ನೊಬ್ಬ ಮತ್ತು ...ರ್ ಅಪ್ಲಿಕೇಷನ್ಸ್‌ನ ವಿದ್ಯಾರ್ಥಿಗಳಾಗಿದ್ದ ...ಕ, ಪ್ರತಿಭಾವಂತ ಮುಸ್ಲಿಂ ಯುವಕರೇ ...ಷ್ಕರ್ ಇತೋಮ್ಬಾದಂಥ ಟೆರರಿಸ್ಟ್ ... ಜೊತೆ ಕೈ ಜೋಡಿಸಿದ್ದಾರೆಂದರೆ ಕನ್ನಡದ ...ಚಾನಲ್ಲುಗಳ ಮಟ್ಟಿಗದು ಬ್ರೇಕಿಂಗ್ ನ್ಯೂಸೇ! ... ಜನಕ್ಕೆ ಬಿಟ್ಟಿ ಮನರಂಜನೆ ಸಿಕ್ಕಿದ್ದು ಅವರ ...ಟ್'ನಲ್ಲಿದ್ದ ಅತೀ ಗಣ್ಯರ ಹೆಸರುಗಳನ್ನು ...ಗಲೇ. ಸಿಕ್ಕಿಬಿದ್ದ ಭಯೋತ್ಪಾದಕರು ...ಕಂದಿದ್ದು ಕನ್ನಡಪ್ರಭದ ಬೆತ್ತಲೆ ಕಾಲಮ್ನಿಸ್ಟ್ ...ಸಿಂಹ, ಅದರ ಸಂಪಾದಕ ವಿಶ್ವೇಶ್ವರ ಭಟ್, ...ಣಿ ಪತ್ರಿಕೆಯ ಮಾಲೀಕ ವಿಜಯ್ ... ಮತ್ತು ಧಾರವಾಡದ ಸಂಸದ ಪ್ರಹ್ಲಾದ್ ...ಶನ್ನು! ...ಅೀದ್ ಮುತಾಲಿಕ್‌ನನ್ನೋ, ಕಲ್ಲಡ್ಕ

ಚಾನಲ್ಲುಗಳಂತೂ ದಿನವಿಡೀ 'ಬ್ರೇಕಿಂಗ್ ನ್ಯೂಸ್' ಜಡಿದದ್ದೇ ಬಂತು.

ಆದರೆ ಯಾರೂ ಗಮನಿಸದ ಸೂಕ್ಷ್ಮವೆಂದರೆ ಪತ್ರಿಕಾಗೋಷ್ಠಿಯಲ್ಲಿ ಮುಸ್ಲಿಂ ಉಗ್ರರನ್ನು ಹಿಡಿದ ಕತೆ ಹೇಳುತ್ತಿದ್ದ ಪೊಲೀಸ್ ವರಿಷ್ಠ ಪಟಾವ್ರೋ ಹೇಳಿಕೆಗಳೇ ಪರಸ್ಪರ ತಾಳೆಯಾಗುತ್ತಿರಲಿಲ್ಲ. ಒಮ್ಮೆ ಹುಜಿ ಸಂಘಟನೆಗೆ ಸೇರಿದವರೆಂದು, ಮತ್ತೊಮ್ಮೆ ಲಷ್ಕರ್ ಇ ತೋಯ್ಬಾ ಸಂಪರ್ಕವೂ ಇದೆ ಎನ್ನುತ್ತಿದ್ದರು. ಮಗದೊಮ್ಮೆ ಇಂಡಿಯನ್ ಮುಜಾಹಿದ್ದೀನ್ ಎಂತಲೂ ಹೇಳುತ್ತಿದ್ದರು. ಪಿಸ್ತೂಲು ಸಿಕ್ಕಿದ್ದು ಯಾರ ಬಳಿ, ಎಲ್ಲಿಂದ ಬಂತು, ಹುಬ್ಬಳ್ಳಿಯಲ್ಲಿ ಸಿಕ್ಕವರಿಗೂ ಬೆಂಗಳೂರಿನಲ್ಲಿ ಬಂಧಿಸಲ್ಪಟ್ಟವರಿಗೂ ಪರಸ್ಪರ ಸಂಪರ್ಕವಿದೆಯೇ, ಇವರಿಗೂ ಪಾಕಿಸ್ತಾನದ ಐಎಸ್‌ಐಗೂ ಸಂಪರ್ಕವಿದೆಯೆನ್ನಲು ಆಧಾರವೇನು, ಇವರನ್ನೆಲ್ಲ ಇರಾನಿಗೆ ಕರೆದೊಯ್ದು ತರಬೇತಿ ಕೊಟ್ಟಿದ್ದಾರೆಂಬುದಕ್ಕೆ ಕನಿಷ್ಠ ಪಾಸ್‌ಪೋರ್ಟ್ ಆದರೂ ಇರಬೇಕಲ್ಲವೆ, ಪಾಸ್‌ಪೋರ್ಟೇ ಇಲ್ಲವೆಂದ ಮೇಲೆ ಇರಾನಿಗೆ ಎಲ್ಲಿಂದ ಹೋಗಲು ಸಾಧ್ಯ ಇತ್ಯಾದಿ ಯಾವೊಂದು ಪ್ರಶ್ನೆಗೂ ಯಾವೊಬ್ಬ ಪೊಲೀಸ್ ಅಧಿಕಾರಿಯ ಬಳಿ ಉತ್ತರವಿರಲಿಲ್ಲ. ಅಧಿಕೃತವಾಗಿ ಹೊರತಾಗಿ ಬೇರೆ ಯಾವುದೇ ದಾಖಲೆಗಳಿರಲಿಲ್ಲ. ಸಿದ್ಧಿಕಿ ಬಳಿ ಇದ್ದ ಉರ್ದು ಭಾಷೆಯ ಶಾಯಿರಿಗಳ ಪುಸ್ತಕವನ್ನೇ ಜಿಹಾದಿ ಸರಕೆಂದು ಪೊಲೀಸರು ಭಾವಿಸಿದ್ದರು. ಸಿಕ್ಕ ಉರ್ದು ಪುಸ್ತಕವನ್ನು ಕನಿಷ್ಠ ಭಾಷಾಂತರ ಮಾಡಿಸಿಯಾದರೂ ಅರ್ಥೈಸಿಕೊಳ್ಳಬೇಕೆಂಬ ಕನಿಷ್ಠ ಕಾಳಜಿ ಪೊಲೀಸರಿಗಿರಲಿಲ್ಲ. ಸಿದ್ಧಿಕಿ ಮತ್ತು ಯೂಸುಫ್‌ರ ಮೊಬೈಲುಗಳಲ್ಲಾಗಲಿ, ಬಳಸುತ್ತಿದ್ದ ಲ್ಯಾಪ್‌ಟಾಪ್‌ನಲ್ಲಾಗಲಿ, ಭಯೋತ್ಪಾದಕ ಮಾಹಿತಿಗಳಿರಲಿ ಕನಿಷ್ಠ ಕುರಾನಿನ ಉಲ್ಲೇಖಗಳೂ ಇರಲಿಲ್ಲ. ಇನ್ನು ಗೋರಿಪಾಳ್ಯದಿಂದ ಬಂಧಿತನಾಗಿದ್ದ ತಂಜೀಮ್ ಮತ್ತು ಡಿಆರ್‌ಡಿಓ ವಿಜ್ಞಾನಿ ಎಜಾಜ್ ಮಿರ್ಜಾರದ್ದೂ ಇದೇ ಪಾಡಾಗಿತ್ತು.

ಇದನ್ನೆಲ್ಲ ಕೂಲಂಕಷವಾಗೇ ಅಧ್ಯಯನ ಮಾಡಿದ ಎನ್‌ಐಎ ತನ್ನ ಆರೋಪಪಟ್ಟಿಯಲ್ಲಿ ಸಿದ್ಧಿಕಿ ಮತ್ತು ಯುಸುಫ್ ನಾಲಬಂದ್‌ರನ್ನು ನಿರ್ದೋಷಿಗಳೆಂದೂ, ತಂಜೀಮ್ ಮತ್ತು ಎಜಾಜ್ ಮಿರ್ಜಾರನ್ನು ಆರೋಪಿಗಳೆನ್ನಲು ಯಾವುದೇ ಸಾಕ್ಷ್ಯಾಧಾರಗಳಿಲ್ಲವೆಂದೂ ಸ್ಪಷ್ಟಪಡಿಸಿತ್ತು. ಬಹುಶಃ ಹುಬ್ಬಳ್ಳಿಯಲ್ಲಿ ಸೆರೆಸಿಕ್ಕ ಹುಡುಗರಿಗೆ

ಪೊಲೀಸರ ಹೇಳಿಕೆಯನ್ನು ದಿನವಿಡೀ ಬ್ರೇಕಿಂಗ್ ನ್ಯೂಸ್ ಹೊಡೆದ ಟೀವಿಗಳು ಈಗೇಕೆ ನಿರ್ದೋಷಿಗಳೆಂಬುದಕ್ಕೆ ಮಹತ್ವ ಕೊಡುತ್ತಿಲ್ಲ? ಪತ್ರಕರ್ತ ಸಿದ್ಧಿಕಿಯೇ ಸಂಚಿನ ಸೂತ್ರಧಾರನೆಂಬಂತೆ ಇಂಗ್ಲಿಷ್ ಪತ್ರಿಕೆಯೊಂದು ಮಾಡಿದ ವರದಿಗೆ ಆತ ನಿರ್ದೋಷಿ ಎಂಬುದೂ ಅಷ್ಟೇ ಮಹತ್ವ ಸುದ್ದಿಯಾಗಬೇಕಲ್ಲವೆ? ಇದನ್ನೇ ಫೆಬ್ರವರಿ 26ರ ತನ್ನ ಪತ್ರಿಕಾಗೋಷ್ಠಿಯಲ್ಲಿ ಸಿದ್ಧಿಕಿ ಪ್ರಶ್ನಿಸುತ್ತಿದ್ದರೆ ಆವತ್ತು ಪೊಲೀಸ್ ಹೇಳಿಕೆಯನ್ನೇ ಬ್ರೇಕಿಂಗ್ ನ್ಯೂಸ್ ಮಾಡಿದ ಟೀವಿಗಳ ವರದಿಗಾರರೆಲ್ಲ, ಪೊಲೀಸರು ಹೇಳಿದ್ದನ್ನು ನಂಬಬೇಕಲ್ವಾ? ನಾವು ಸುದ್ದಿ ಮಾಡೋದೇ ಪೊಲೀಸರ ಕಾರ್ಯಾಚರಣೆಯನ್ನು ಆಧರಿಸಿ ತಾನೆ?' ಎಂದು ಮರುಪ್ರಶ್ನೆಯಿಡುತ್ತಿದ್ದರು.

ಪೊಲೀಸರು ಹೇಳಿದ್ದನ್ನೇ ಯಥಾವತ್ತಾಗಿ ಸುದ್ದಿ ಮಾಡುವುದಾದರೆ ಅದನ್ನು ಪತ್ರಿಕೋದ್ಯಮ ಅನ್ನುತ್ತಾರಾ? ಅದರ ಸತ್ಯಾಸತ್ಯತೆಗೆ ಯಾವ ಬೆಲೆಯೂ ಇಲ್ವಾ? ವಿಷಯದ ಎರಡೂ ಮಗ್ಗುಲನ್ನು ಕನಿಷ್ಠ ಆಸಕ್ತಿಗಾದರೂ ಪರಿಶೀಲಿಬೇಕಲ್ಲವೆ? ಬೇರೆಲ್ಲ ಪ್ರಕರಣಗಳಲ್ಲೂ ವಾಸ್ತವವನ್ನು ಕೆದಕುವ ಮಾಧ್ಯಮಗಳು ಮುಸ್ಲಿಮರು, ದಲಿತರು,





...ನ್ನೋ, ಆರೆಸ್ಸೆಸ್ ಜಯದೇವನನ್ನೋ, ...ಂತ್ರಿಯನ್ನೋ ಕೊಲ್ಲಲು ಸಂಚು ...ರೆಂದರೆ ಕನಿಷ್ಠ ಆರೆಸ್ಸೆಸ್ ಪಡ್ಡೆಗಳಾದರೂ ...ರೇನೊ. ಬಿಜೆಪಿ ಸಂಸದ ಪ್ರಹ್ಲಾದ್ ಜೋಷಿ ...ರೆಂಬ ಬಗ್ಗೆಯೇ ಧಾರವಾಡದ ಮಂದಿಗೆ ...ಲ್ಲ. ವಿಜಯ ಕರ್ನಾಟಕದ ಮಾಲೀಕರಾಗಿದ್ದ ...ಸಂಕೇಶ್ವರ್‌ರನ್ನು ಕೊಂದು ಮುಸ್ಲಿಂ ಉಗ್ರರಿಗೆ ...ಲಾಭ ಏನೇನೂ ಇಲ್ಲ. ಇನ್ನೂ ಬೆತ್ತಲೆ ...ಟ್ ಪ್ರತಾಪ ಸಿಂಹನನ್ನು ಕೊಂದರೆ ಆತನ 'ಪಿತೃ' ನರೇಂದ್ರ ಮೋದಿ ಕೂಡ ಕಣ್ಣೀರು ... ಇನ್ನು ಸುವರ್ಣ ಟೀವಿ ಮತ್ತು ಕನ್ನಡ ...ಪ್ರಕ್ಕೂ ಸಂಪಾದಕನಾಗಿರುವ ಹಾಗೂ ಲಾಸ್ ...ಪಿಪ ಕಾರಣಕ್ಕೆ ವಿ.ಭಟ್ಟರನ್ನು ಅದರ ...ಕ ಧಣಿಯಷ್ಟೇ ತಲೆಕೆಟ್ಟು ಕೊಲ್ಲಿಸಬೇಕೇ ...ಬೇರೆ ಯಾರಾದರೂ ಏಕೆ ಕೊಲ್ಲುತ್ತಾರೆ? ಪೊಲೀಸರು ತಮ್ಮ ಕಾರ್ಯಾಚರಣೆಗೆ ...ಂದ ಕಾರಣ. ಪೊಲೀಸರು ಬೇರೆ ... ಕಾರಣ ಕೊಟ್ಟಿದ್ದರೆ ಜನ ...ರೇನೊ. ಮುಸ್ಲಿಂ ಯುವಕರನ್ನು ಬಂಧಿಸಿದ ...ಗಳ ನಂತರ ಪೊಲೀಸ್ ಮುಖ್ಯಸ್ಥ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮೇಲ್ಕಂಡ ...ಘೋಷಿಸಿದ್ದೇ ತಡ ಬಹುತೇಕ ಪತ್ರಿಕೆಗಳು ...ಮುಖಪುಟದ ಸುದ್ದಿಯಾಗಿಸಿದವು. ನ್ಯೂಸ್

ಪೊಲೀಸರು 'ಹಿಟ್ ಲಿಸ್ಟ್'ನ ಗಣ್ಯರ ಹೆಸರನ್ನು ಹೇಳಲಿಲ್ಲವಾದರೂ 'ಆಫ್ ದಿ ರೆಕಾರ್ಡ್' ಎಂದು ಸಿಸಿಬಿಯ ಎಸಿಪಿಯೊಬ್ಬರ ಮೂಲಕ ಭಟ್ಟ, ಸಿಮ್ಹ, ಸಂಕೇಶ್ವರ್‌ರ ಹೆಸರನ್ನು ತೇಲಿಬಿಟ್ಟಿದ್ದರು. ಇದರರ್ಥ ಬಂಧಿಸಲ್ಪಟ್ಟವರು ಯಾರನ್ನು ಕೊಲ್ಲ ಹೊರಟಿದ್ದಾರೆಂಬುದಕ್ಕೆ ಪೊಲೀಸರಿಗೆ ಯಾವುದೇ ಸ್ಪಷ್ಟತೆ, ದಾಖಲೆ, ಕ್ಲೂ ಸಿಕ್ಕೇ ಇರಲಿಲ್ಲ!

ಬಹುಶಃ ದೇಶದ ವಿರುದ್ಧ ಯುದ್ಧಕ್ಕಿಳಿದ ಈ ಥರದ ಪ್ರಕರಣಗಳ ತನಿಖೆಯ ಅಧಿಕಾರ ರಾಜ್ಯದ ಪೊಲೀಸರಿಗಷ್ಟೇ ಇದ್ದುಬಿಟ್ಟಿದ್ದರೆ ಪ್ರತಕರ್ತ ಸಿದ್ಧಿಕಿಯಾಗಲಿ, ಬಹುರಾಷ್ಟ್ರೀಯ ಕಂಪನಿಯ ಉದ್ಯೋಗಿ ಯೂಸುಫ್ ನಾಲಬಂದ್ ಆಗಲಿ ಸದ್ಯಕ್ಕೆ ಜೈಲಿಂದ ಹೊರಬರುತ್ತಿರಲಿಲ್ಲ. ಆದರೆ ಇಂಥ ಪ್ರಕರಣಗಳ ತನಿಖೆಯ ಮೇಲ್ವಿಚಾರಣೆಗೆಂದೇ ರಾಷ್ಟ್ರೀಯ ತನಿಖಾ ಸಂಸ್ಥೆ ಅಂದರೆ **National Investigation Agency (NIA)** ಇದೆ. ಸ್ಥಳೀಯ ಪೊಲೀಸರು ಹಾಕಿದ ಎಫ್‌ಐಆರ್, ಮಾಡಿದ ತನಿಖೆ, ಸಿಕ್ಕ ಸಾಕ್ಷ್ಯಾಧಾರಗಳೆಲ್ಲವನ್ನೂ ಎನ್‌ಐಎ ಕೂಲಂಕಷವಾಗಿ ಪರಿಶೀಲಿಸಿಯೇ ಸಂಬಂಧಪಟ್ಟ ನ್ಯಾಯಾಲಯಕ್ಕೆ ವರದಿ ಸಲ್ಲಿಸುತ್ತದೆ.

ಈ ಪ್ರಕರಣದಲ್ಲಿ ಸಿದ್ಧಿಕಿ ಮತ್ತು ಯೂಸುಫ್ ನಾಲಬಂದ್ ಪೊಲೀಸರು ದಾಳಿ ನಡೆಸಿದ ವೇಳೆ ಆರೋಪಿಗಳ ಜೊತೆ ವಾಸಿಸುತ್ತಿದ್ದರೆಂಬುದರ ದುಬೈನಲ್ಲಿದ್ದವನೊಬ್ಬ ಪ್ರಚೋದಕ ಇಮೇಲ್‌ಗಳನ್ನು ಮಾಡಿರಬೇಕು. ಅದಕ್ಕೆ ಈ ಹುಡುಗರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರಬಹುದು. ಹಾಗೇ ಹುಬ್ಬಳ್ಳಿಯಿಂದ ದುಬೈಗೆ ಇಮೇಲ್ ಕಳಿಸುತ್ತಿದ್ದ ಹುಡುಗರು ಮುನಿರೆಡ್ಡಿಪಾಳ್ಯದಲ್ಲಿ ಬಂಧಿತರಾದವರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಈ ಪೈಕಿ ಯಾರೋ ಒಬ್ಬನ ಬಳಿ ಪಿಸ್ತೂಲು ಇತ್ತೆ? ಅದು ಅಂಡರ್‌ವರ್ಲ್ಡ್ ಸಂಪರ್ಕದ ಕಾರಣದ ಪಿಸ್ತೂಲೇ ಅಥವಾ ನಿಜಕ್ಕೂ ಭಯೋತ್ಪಾದಕ ಕಾರಣಕ್ಕೇ ತಂದಿಟ್ಟುಕೊಂಡಿದ್ದೆ?

ಇಂಥ ಪ್ರಶ್ನೆಗಳಿಗಿನ್ನೂ ನಿಖರ ಉತ್ತರಗಳಿಲ್ಲ. ಆದರೆ ಇದ್ಯಾವುದಕ್ಕೆ ಸಂಬಂಧವೇ ಇಲ್ಲದ ಡೆಕ್ಕನ್ ಹೆರಾಲ್ಡ್ ವರದಿಗಾರ ಸಿದ್ಧಿಕಿ, ಬಹುರಾಷ್ಟ್ರೀಯ ಕಂಪೆನಿ ಉದ್ಯೋಗಿ ಯೂಸುಫ್, ಡಿಆರ್‌ಡಿಓ ವಿಜ್ಞಾನಿ ಎಜಾಜ್ ಮಿರ್ಜಾ ಮತ್ತು ಗೋರಿಪಾಳ್ಯದ ತಂಜೀಮ್ ಕೇವಲ ಪರಿಸ್ಥಿತಿಯ ಕೈಗೊಂಬೆಗಳಾಗಿ ಜೈಲುಪಾಲಾಗಿದ್ದರು. ಸಿದ್ಧಿಕಿ ಮತ್ತು ಯೂಸುಫ್‌ರನ್ನು ಫೆಬ್ರುವರಿ 25 ರಂದು ಬಿಡುಗಡೆ ಮಾಡಲಾಗಿದ್ದರೂ ಎಜಾಜ್ ಮತ್ತು ತಂಜೀಮ್ ವಿರುದ್ಧ ಹೆಚ್ಚಿನ ಚಾರ್ಜ್‌ಶೀಟ್ ಸಲ್ಲಿಸದೆ ಹೋದರಷ್ಟೇ ಬಿಡುಗಡೆ ಸಾಧ್ಯ. ಅಲ್ಲಿಯತನಕ ಇವರಿಬ್ಬರೂ ಕಾಯಬೇಕಷ್ಟೆ.

ಪ್ರಶ್ನೆಯೆಂದರೆ ಆವತ್ತು ಗಣ್ಯರ ಕೊಲೆಗೆ ಸಂಚು ಮಾಡುತ್ತಿದ್ದಾರೆಂದು ಪೊಲೀಸರು ಬಂಧಿಸಿದ್ದನ್ನು, ಹಿಂದುಳಿದವರ ವಿಷಯದಲ್ಲಿ ಮಾತ್ರ ಏಕೆ ಕರ್ತವ್ಯವನ್ನು ಮರೆತುಬಿಡುತ್ತವೆ? ಸಿದ್ಧಿಕಿಯ ಇಂತಹ ಪ್ರಶ್ನೆಗಳಿಗೆ ಅಲ್ಲಿದ್ದ ಯಾವ ವರದಿಗಾರರ ಬಳಿಯೂ ಉತ್ತರವಿರಲಿಲ್ಲ. ಆವತ್ತು ಮುಸ್ಲಿಂ ಉಗ್ರರೆಂದೂ, ಗಣ್ಯರ ಹತ್ಯೆಗೆ ಯತ್ನಿಸಿದ್ದರೆಂದೂ ವೀರಾವೇಶದ ವರದಿ ಪ್ರಕಟಿಸಿದ್ದ ಪತ್ರಿಕೆಯೊಂದು ಈಗ ನಿರ್ದೋಷಿಗಳೆಂದು ನ್ಯಾಯಾಲಯವೇ ಘೋಷಿಸಿದ್ದನ್ನು ಕಾಟಾಚಾರಕ್ಕೂ ವರದಿ ಪ್ರಕಟಿಸಲಿಲ್ಲ. ಒಂದೋ ಎರಡೋ ಟೀವಿಗಳ ಹೊರತಾಗಿ ಮಿಕ್ಕಾವ ಚಾನಲ್ಲುಗಳಿಗೂ ಸಿದ್ಧಿಕಿ ನಿರ್ದೋಷಿಯೆಂಬುದು ಸುದ್ದಿಯೇ ಅಲ್ಲ.

ಯಾವ ತಪ್ಪನ್ನೂ ಮಾಡದೆ ಅನ್ಯಾಯವಾಗಿ ಆರು ತಿಂಗಳುಗಳ ಕಾಲ ಜೈಲು ಶಿಕ್ಷೆ ಅನುಭವಿಸಿದ ಸಿದ್ಧಿಕಿ ಮತ್ತು ಇತರೆ ಮುಸ್ಲಿಂ ಯುವಕರಿಗೆ ಆದ ಹಾನಿಗೆ ಯಾರೂ ಹೊಣೆಯಲ್ಲವೆ? ಮೀಡಿಯಾಗಳು ಮಾಡಿದ ಯಡವಟ್ಟು ಒತ್ತಟ್ಟಿಗಿರಲಿ ಕನಿಷ್ಠ ಸರ್ಕಾರವಾದರೂ ಇಂಥ ಅನ್ಯಾಯಗಳಾಗದ ಹಾಗೆ ಎಚ್ಚರಿಕೆ ವಹಿಸಬೇಕಲ್ಲವೆ? ಅಂಥದೊಂದು ವಿಷಾದವನ್ನು ಬಿಜೆಪಿ ಸರ್ಕಾರದ ಗೃಹಮಂತ್ರಿಯಾಗಲಿ, ಪೊಲೀಸರಾಗಲಿ ಏಕೆ ಇನ್ನೂ ವ್ಯಕ್ತಪಡಿಸುತ್ತಿಲ್ಲ. ಚರ್ಚು, ಮಸೀದಿಗಳ ಮೇಲೆ ದಾಳಿ ಮಾಡಿದವರನ್ನೇ ಖುಲಾಸೆಗೊಳಿಸುವ ಸರ್ಕಾರಕ್ಕೆ ಈ ಮುಗ್ಧರ ದುರ್ಗತಿಗೆ ಸಣ್ಣದೊಂದು ಪಶ್ಚಾತ್ತಾಪವೂ ಇಲ್ಲವೆ?

● ರಾ. ಸೋಮನಾಥ್

ನಗರಪಾಲಿಕೆಯನ್ನ ಮುಂಡಾಮೋಚಿದ ಚೆಡ್ಡಿಗಳು

ದಾವಣಗೆರೆಯಾದ್ಯಂತ ಚುನಾವಣೆಯ ಜ್ವರ ಹೆಚ್ಚಾಗುತ್ತಿದೆ. ರಾಜಕೀಯ ಪಕ್ಷಗಳು ವಿಧಾನಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗಲೇ ಅನಿರೀಕ್ಷಿತವಾಗಿ ಬಂದೆರಗಿದ ಮಹಾನಗರ ಪಾಲಿಕೆಯ ಚುನಾವಣೆಗಳು ಎಲ್ಲಾ ಪಕ್ಷಗಳ ಕೆಳಗೆ ಕೆಂಡ ಸುರಿದಿದೆ.

ಕಳೆದ ಐದು ವರ್ಷಗಳಿಂದ ದಾವಣಗೆರೆ ಜಿಲ್ಲೆಯಾದ್ಯಂತ ಅಧಿಕಾರವನ್ನು ಚಲಾಯಿಸಿದ ಕಪಟ ದೇಶಭಕ್ತರ ಪಾರ್ಟಿ ಬಿಜೆಪಿಯು ಜನರ, ಜಿಲ್ಲೆಯ ಅಭಿವೃದ್ಧಿಗಾಗಿ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ಬರೋಬ್ಬರಿ ಏಳು ಶಾಸಕರು, ಇಬ್ಬರು ಮಂತ್ರಿಗಳು, ಒಬ್ಬ ಸಂಸದ, ಸಾಲದ್ದಕ್ಕೆ ದಾವಣಗೆರೆ ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯತಿಗಳನ್ನು ಕಬ್ಜ ಮಾಡಿಕೊಂಡಿದ್ದ ಬಿಜೆಪಿಯು ಅಖಂಡ ಭ್ರಷ್ಟಾಚಾರದ ಅಖಾಡವಾಗಿದ್ದೇ ಅದು ಮಾಡಿದ ಬಹುದೊಡ್ಡ ಸಾಧನೆ.

ದಾವಣಗೆರೆ ಮಹಾನಗರ ಪಾಲಿಕೆಯ 41 ವಾರ್ಡ್‌ಗಳಲ್ಲಿ 24 ವಾರ್ಡುಗಳನ್ನು ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿ ಜನರ ಪರವಾಗಿ ದುಡಿಯುವ ಬದಲು ತನ್ನ ಅಧಿಕಾರ ದಾಹವನ್ನು ಶಮನ ಮಾಡಿಕೊಳ್ಳುವುದರಲ್ಲೇ ಮಿಂದೇಳಿತು. ಯಾಕೆಂದರೆ ಬಿಜೆಪಿ ಪರವಾಗಿ ಗೆದ್ದವರಲ್ಲಿ ಹೆಚ್ಚಿನವರು ಜನನಾಯಕರಾಗಿರದೇ ಕಾಂಟ್ರಾಕ್ಟುದಾರರಾಗಿದ್ದರು. ಜಾತಿವಾರು ಲೆಕ್ಕಾಚಾರದ ಮೇಲೆ ಕಳೆದ ಐದು ವರ್ಷಗಳಲ್ಲಿ ಏಳು ಜನ ಮೇಯರ್‌ಗಳಾದರು ಎಂಬುದನ್ನು ಬಿಟ್ಟರೆ ಮಹಾನಗರ ಪಾಲಿಕೆಯು ಭ್ರಷ್ಟಾಚಾರದ ಕೂಪವಾಯಿತು. ಆದರೂ ತರಕಾರಿ ಮಂತ್ರಿ ರವೀಂದ್ರನಾಥ, ಹೆಂಡದ ಮಂತ್ರಿ ರೇಣುಕಾಚಾರ್ಯ, ಸಂಸದ ಸಿದ್ದೇಶ್ವರ ಪಾಲಿಕೆ ಸದಸ್ಯರ ಕಬಳಿಕೆಯನ್ನು ಕಂಡೂಕಾಣದಂತೆ ತೆಪ್ಪಗಿದ್ದರು.


ಪಾಲಿಕೆಯ ಮೇಯರ್ ಆಗಿದ್ದ ಸುಧಾ ಜಯರುದ್ರೇಶ್ ಇತ್ತೀಚೆಗೆ ಸಾರ್ವಜನಿಕರ ಎದುರು "ಮುಂದೆ ಯಾರೇ ಅಧಿಕಾರಕ್ಕೆ ಬಂದರೂ ಅವರಿಗೆ ಮಾಡಲೇನೂ ಇರದಂಗೆ ಮಾಡಿ ಮುಗಿಸಿದ್ದೇವೆ. ಇದನ್ನೆಲ್ಲಾ ಮಾಡಲು ಸರ್ಕಾರದಿಂದ ಬಂದ 400 ಕೋಟಿ ರೂಪಾಯಿಗಳ ಅನುದಾನ ಸಾಲದಾಯಿತು" ಎಂದು ಹಲ್ಲುಕಿರಿದಾಗ ಬಿಜೆಪಿಯ ಕೌನ್ಸಿಲರ್‌ಗಳು ಅದ್ಯಾವ ಪರಿ ಹಣ ಮುಕ್ಕಿದ್ದಾರೆಂದು ದಾವಣಗೆರೆ ಜನರಿಗೆ ಅರ್ಥವಾಯಿತು. ಆದ್ದರಿಂದಲೇ ಸ್ಥಳೀಯರು ಮೇಯರ್ ಸುಧಾ ಜಯರುದ್ರೇಶ್‌ರಿಗೆ "400 ಕೋಟಿ ರೂಪಾಯಿ ಎಲ್ಲಿಗೆ ಹೋಯ್ತು ತೋರಿಸಮ್ಮಾ" ಎಂದು ಪಾಲಿಕೆಯೆದುರು ಮಣ್ಣು ತೂರಿದರು.

ದಾವಣಗೆರೆ ಮಹಾನಗರ ಪಾಲಿಕೆಗೆ ರಾಜ್ಯ ಸರ್ಕಾರದಿಂದ ಬಂದ 400 ಚಿಲ್ಲರೆ ಕೋಟಿ ರೂಪಾಯಿಗಳು ಖರ್ಚಾಗಿದ್ದರೂ ದಾವಣಗೆರೆಯ ಬವಣೆಗಳೇನು ಬಗೆಹರಿದಿಲ್ಲ. ಮಾತ್ರವಲ್ಲ ಅಷ್ಟೊಂದು ಹಣ ಖರ್ಚಾಗಿದ್ದಲ್ಲಿ ಇಲ್ಲಿ ಸಾಕ್ಷಿಗಳೂ ಸಿಗುತ್ತಿಲ್ಲ.

ಉದಾಹರಣೆಗೆ ಉದ್ಯಾನವನಗಳ ಅಭಿವೃದ್ಧಿಗೆಂದು ಬಂದ ಹಣವನ್ನೆಲ್ಲ ಮುಂಡಾಮೋಚಲಾಗಿದೆ. ನಾಲ್ಕು ಗಿಡ, ಕಾಂಪೌಂಡುಗಳಿಗೆ ಒಂದಿಷ್ಟು ಬಣ್ಣ ಬಳಿದಿದ್ದನ್ನು ಬಿಟ್ಟರೆ ಹೆಚ್ಚಿನ ಕೆಲಸಗಳಾಗಿಲ್ಲ. ಲಕ್ಷಗಳಲ್ಲಾಗುವ ಕೆಲಸಗಳಿಗೆ ಕೋಟಿಗಳ ಲೆಕ್ಕದಲ್ಲಿ ಉಂಡೆನಾಮ ಹಾಕಲಾಗಿದೆ.

ಪಾಲಿಕೆಯ ಉಪ ಮೇಯರ್ ಆಗಿದ್ದ ಮಹೇಶ್


ಸುಧಾ ಜಯ ಜಯರುದ್ರೇಶ್


ಸುರೇಶ್


ಮಹೇಶ್ ರಾಯಚೂರ್


ಸಿದ್ದೇಶ್

ರಾಯಚೂರು ಎಂಬಾತನ ವಾರ್ಡು 22ರಲ್ಲಿ ನಡೆದಿರುವ ಒಂದೆರಡು ಕಾಮಗಾರಿಗಳನ್ನೇ ಬಿಜೆಪಿಗರ ಭ್ರಷ್ಟಾಚಾರಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈತನ ವಾರ್ಡ್‌ಗೆ ಬರುವ ಅಂಬೇಡ್ಕರ್ ವೃತ್ತದಿಂದ ಜನತಾ ಬಜಾರು ರಸ್ತೆಯ ಗುಂಡಿ ಮುಚ್ಚಲು ಬರೋಬ್ಬರಿ 49 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆದರೆ ಆಚ್ಚರಿಯ ಸಂಗತಿ ಯಾವುದೆಂದರೆ ಎಸ್.ಎಸ್.ಮಲ್ಲಿಕಾರ್ಜುನ್ ಮಂತ್ರಿ ಆಗಿದ್ದಾಗ ಇದೇ ರಸ್ತೆಯನ್ನು ಕಾಂಕ್ರೀಟು ರಸ್ತೆಯಾಗಿ ಪರಿವರ್ತಿಸಿದ್ದರು. ಆದರೀಗ ಆ ರಸ್ತೆಯಲ್ಲಿತ್ತು ಎನ್ನಲಾದ ಗುಂಡಿಗಳನ್ನು ಮುಚ್ಚಲು ಬಿಜೆಪಿಗರು 49 ಸಾವಿರ ಗ್ರಾಂಟು ಗುಳುಮ್ ಮಾಡಿದ್ದಾರೆ. ಹಾಗೆಯೇ ಪಿ.ಬಿ. ರಸ್ತೆಯಿಂದ ಜಯದೇವ ವೃತ್ತದವರೆಗೆ ಇರುವ ಅಶೋಕ ರಸ್ತೆಯಲ್ಲಿ ಗುಂಡಿಮುಚ್ಚಲು 1.5 ಲಕ್ಷದ ಬಿಲ್ ಎತ್ತಲಾಗಿದೆ. ಅಂದಹಾಗೆ ಇದೂ ಕೂಡ ಕಾಂಕ್ರೀಟ್ ರಸ್ತೆಯೇ! ಆದರಲ್ಲಿ ಗುಂಡಿ ಬಿದ್ದಿದ್ದರೆ, ಒಂದೆರಡು ಕಡೆ ರಸ್ತೆ ಶಿಥಿಲಗೊಂಡಿದ್ದರೆ ಅದನ್ನು ಹಲವು ಸಾವಿರ ರೂಪಾಯಿಗಳಲ್ಲಿ ರಿಪೇರಿ ಮಾಡಬಹುದಿತ್ತು. ಆದರೂ ಬಿಜೆಪಿಯ ಸ್ವಾಹಾ ಗಿರಾಕಿಗಳು ಬರೋಬ್ಬರಿ ಒಂದೂವರೆ ಲಕ್ಷ ರೂಪಾಯಿಗಳನ್ನು ಕಾಮಗಾರಿಯ ಹೆಸರಲ್ಲಿ ದೋಚಿದ್ದಾರೆ.

ಅದಕ್ಕಿಂತಲೂ ದೊಡ್ಡದಾದ ಅವ್ಯವಹಾರಗಳೂ ಮಹಾನಗರ ಪಾಲಿಕೆಯಲ್ಲಿ ನಡೆದಿದೆ. ಸೀತಮ್ಮ ಕಾಲೇಜಿನಲ್ಲಿ ಸಭಾಂಗಣ ನಿರ್ಮಾಣಕ್ಕೆಂದು 5 ಲಕ್ಷದ ಕಾಮಗಾರಿಗೆ ಈಗಾಗಲೇ 3.30 ಲಕ್ಷ ಬಿಡುಗಡೆಮಾಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ ಎಂದು ದಾಖಲೆಗಳು ಹೇಳುತ್ತಿವೆ. ಆದರೆ ದಾವಣಗೆರೆಯ ದುರಂತ ಎಂತಹದ್ದೆಂದರೆ ಬಿಜೆಪಿಗಳು ಅಲ್ಲಿ ನಿರ್ಮಿಸಿದ್ದೇವೆ ಎಂದ ಸಭಾಂಗಣವೇ ಮಂಗಮಾಯವಾಗಿದೆ. ಇದು ಎಂತಹ ಪವಾಡ, ಬಿಜೆಪಿಗರ ಅಚ್ಚುಮೆಚ್ಚಿನ ಶ್ರೀರಾಮನೇ ಜನರಿಗೆ ವಿವರಿಸಬೇಕಿದೆ.

ಹಾಗೆಯೇ ಲೇಬರ್ ಕಾಲೋನಿಯಲ್ಲಿ 2008-09ನೇ ಸಾಲಿನಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಕಾಯ್ದಿಟ್ಟ 2.8 ಲಕ್ಷ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲಾಗಿದೆ ಎಂಬ ದಾಖಲೆ ಜನ್ಮತಾಳಿದೆ. ಆದರೆ ಆ ಕಾಲೋನಿಯಲ್ಲಿ ಎಲ್ಲಿ ಹುಡುಕಾಡಿದರೂ ಯಾವುದೇ ಸಮುದಾಯಭವನ ಕಾಣಿಸುವುದಿಲ್ಲ, ಆ ಭವನದಂತೆಯೇ ಅದಕ್ಕೆ 'ವೆಚ್ಚ'ವಾದ ಹಣವೂ ಭೂಗತವಾಗಿದೆ.

ಇನ್ನು 23ನೇ ವಾರ್ಡಿನ ದುರಂತ ಇನ್ನೊಂದು ರೀತಿಯದ್ದು. ತರಕಾರಿ ಮಂತ್ರಿ ರವೀಂದ್ರನಾಥರ ಖಾಸಾ ಅಳಿಯ ಸುರೇಶ್ ಪ್ರತಿನಿಧಿಸುತ್ತಿದ್ದ ವಾರ್ಡ್ ಇದು. ಇಲ್ಲಿ ಸೇತುವೆಗಳು, ಅಂಬೇಡ್ಕರ್ ಭವನ, ಸಮುದಾಯಭವನಗಳ ಹೆಸರಲ್ಲಿ ಲಕ್ಷಲಕ್ಷ ರೂಪಾಯಿಗಳು ಖರ್ಚಾಗಿವೆ. ಆದರೆ ಅವು ಯಾವುವೂ ಭೂಮಿಯ ಮೇಲಿಲ್ಲ.

ದುರಂತವೆಂದರೆ ದಾವಣಗೆರೆಯನ್ನು ಪರಮ ಪ್ರಾಮಾಣಿಕತೆಯಿಂದ ಆಳಿದ ದಿವಂಗತ ಕಾಂ. ಪಂಪಾಪತಿಯವರ ಹೆಸರಲ್ಲೂ ಭ್ರಷ್ಟಾಚಾರ ನಡೆದಿದೆ. ಅವರಗೆರೆಯಲ್ಲಿರುವ ಪಂಪಾಪತಿಯವರ ಸಮಾಧಿಯ ಅಭಿವೃದ್ಧಿ ಕಾಮಗಾರಿಗೆಂದು 7.90 ಲಕ್ಷ ರೂಪಾಯಿಗಳ ವೆಚ್ಚವನ್ನು ದಾಖಲೆಯಲ್ಲಿ ತೋರಿಸಲಾಗಿದೆ. ವಾಸ್ತವವಾಗಿ ಪಂಪಾಪತಿ ಉದ್ಯಾನವನದಲ್ಲಿ ಪಾಲಿಕೆಯ ಹೆಸರಲ್ಲಿ ಒಂದೇ ಒಂದು ಹೂ ಅರಳಿಲ್ಲ.

ಇವು ಮಹೇಶ ರಾಯಚೂರು ಮತ್ತು ಸುರೇಶ್ ಎಂಬ ಬಿಜೆಪಿ ಕೌನ್ಸಿಲರ್‌ಗಳ ನುಂಗಾಟಕ್ಕೆ ಸ್ಯಾಂಪಲ್‌ಗಳಷ್ಟೇ.

ಯಾಕೆಂದರೆ ಬಿಜೆಪಿ ಕಾರ್ಪೋರೇಟರ್‌ಗಳು ಗೆದ್ದಿದ್ದ 2... ವಾರ್ಡುಗಳಲ್ಲೂ ಸಮುದಾಯ ಭವನ, ರಸ್ತೆಗಳ... ಉದ್ಯಾನವನಗಳು ಮಾತ್ರವಲ್ಲ ಚರಂಡಿಗಳನ್ನು... ದೋಚಲಾಗಿದೆ.

ಐದು ವರ್ಷಗಳಲ್ಲಿ 400 ಕೋಟಿ ರೂಪಾಯಿಗಳನ್ನು ಮುಂಡಾಮೋಚಿದ ಬಿಜೆಪಿ ಮತದಾರರ ಮುಂದೆ ನಿಂ... ಮತ ಕೇಳುವ ನೈತಿಕತೆಯನ್ನೇ ಕಳೆದುಕೊಂಡಿದೆ. ಆದ್ದರಿಂ... ತರಕಾರಿ ಮಂತ್ರಿ ರವೀಂದ್ರನಾಥ, ಸಂಸದ ಸಿದ್ದೇಶ್ವರ... ಸಚೇತಕ ಶಿವಯೋಗಿಸ್ವಾಮಿ ಮತ್ತು ಇತರೆ ನಾಯಕರಿ... ಈಗ ಸಂಕಟವೋ ಸಂಕಟ. ತಾವು ಬಿಜೆಪಿ ಪರ ಮ... ಯಾಚಿಸಲು ಹೋದರೆ ಜನ ಕ್ಯಾಕರಿಸಿ ಉಗಿಯುವುದು... ಸ್ಪಷ್ಟವಾಗಿದೆ.


ಮುಂದಿನ ವಾರ ನಡೆಯಲಿರುವ ಮಹಾನಗ... ಪಾಲಿಕೆಯ ಚುನಾವಣೆಯಲ್ಲಿ ಬಿಜೆಪಿಗೆ ಪಾಠ ಕಲಿಸಲು... ಇಲ್ಲಿನ ಮತದಾರ ಮಾನಸಿಕವಾಗಿ ಸಿದ್ಧವಾದಂತಿದೆ. ಬಿಜೆ... ಮತ್ತು ಕೆಜೆಪಿ ಎರಡೂ ಅವಳಿ-ಜವಳಿಗಳೆಂದೇ ಇಲ್ಲಿ... ಜನ ನಂಬಿದ್ದಾರೆ. ಬಿಜೆಪಿ ಟಿಕೆಟು ಸಿಗದವರು ಕೆಜೆಪಿ... ವಲಸೆ ಹೋಗುತ್ತಿದ್ದಾರೆ. ಯಾಕೆಂದರೆ ಅಂಥವರಿಗೆ ಕಾಂಗ್ರೆ... ಬಾಗಿಲು ಬಂದ್ ಆಗಿದೆ.

ಬಿಜೆಪಿಯ ಭ್ರಷ್ಟಾಚಾರದಿಂದ ಬೇಸತ್ತಿರುವ ಮತದಾ... ಕಾಂಗ್ರೆಸ್ ಕಡೆ ಮುಖಮಾಡಿದ್ದಾನೆ. ಕಾಂಗ್ರೆಸ್ ನಾಯ... ಮಾಜಿ ಮಂತ್ರಿ ಮಲ್ಲಿಕಾರ್ಜುನ್ ಹುರುಪಿನಿಂ... ಕಣಕ್ಕಿಳಿದ್ದಾರೆ. ಪಾಲಿಕೆ ಚುನಾವಣೆಯನ್ನು ಪ್ರತಿಷ್ಠೆ... ಚುನಾವಣೆಯಂದೇ ಪರಿಗಣಿಸಿದ್ದಾರೆ. ಮತದಾರನು... ಮಲ್ಲಿಕಾರ್ಜುನ್ ಮಂತ್ರಿಯಾಗಿದ್ದಾಗ ಮಾಡಿದ ಕೆಲ... ತೋರಿದ್ದ ಪ್ರಾಮಾಣಿಕತೆಯನ್ನು ನೆನಪಿಸಿಕೊಂಡೇ ಬಿಜೆಪಿ... ಗೇಟ್‌ಪಾಸ್ ನೀಡಿ ಕಾಂಗ್ರೆಸ್‌ಗೆ ಗೆಲುವು ತಂದು ಕೊಡು... ತವಕದಲ್ಲಿದ್ದಾನೆ.

ದಾವಣಗೆರೆ

ಉತ್ತರ: ರವೀಂದ್ರನಾಥರಿಗೆ ಮಲ್ಲಿ ಬ್ರೇಕ್?

ದಾವಣಗೆರೆ ದಕ್ಷಿಣ ಮತಕ್ಷೇತ್ರದಷ್ಟೇ ಪ್ರತಿಷ್ಠೆಯದ್ದು ಉತ್ತರ ವಿಧಾನಸಭಾ ಮತಕ್ಷೇತ್ರ. ಈ ಹಿಂದೆ ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ ರಾಜಕಾರಣ ಶುರುಮಾಡಿದ ಸದ್ಯದ ತರಕಾರಿ ಮಂತ್ರಿ ರವೀಂದ್ರನಾಥ ಮೂರು ಬಾರಿ ಶಾಸಕರಾಗಿದ್ದರೂ ಮಾಯಕೊಂಡ ಮತಕ್ಷೇತ್ರದ ಬಗ್ಗೆ ದಿವ್ಯ ನಿರ್ಲಕ್ಷ ವಹಿಸಿದರು. 2008ರ ಚುನಾವಣೆಯಲ್ಲಿ ಮಾಯಕೊಂಡ ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾದ ನಂತರ ರವೀಂದ್ರನಾಥರು ಅನಿವಾರ್ಯವಾಗಿ ದಾವಣಗೆರೆ ಉತ್ತರ ಕ್ಷೇತ್ರಕ್ಕೆ ವಕ್ಕರಿಸಿದರು. ಕಳೆದ ಬಾರಿಯ ಚುನಾವಣೆಯಲ್ಲಿ ರವೀಂದ್ರನಾಥರ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್


ಎಸ್.ಎಸ್. ಮಲ್ಲಿ...

ಪಕ್ಷಗಳಿಂದ ಪ್ರಬಲ ಪೈಪೋಟಿ ಇರಲಿಲ್ಲವಾದ್ದರಿಂದ ಆತ ನಿರಾಯಾಸವಾಗಿ ಆರಿಸಿಬಂದಿದ್ದರು.

ದಾವಣಗೆರೆ ಉತ್ತರದಿಂದ ಶಾಸಕರಾದದ್ದೇ ರವೀಂದ್ರನಾಥರಿಗೆ ಮಂತ್ರಿಯೋಗ ಕೂಡ ಒದ್ದುಕೊಂಡು ಬಂದಿತ್ತು. ಮೊದಲು ಸಕ್ಕರೆ ಮಂತ್ರಿ ಆಗಿದ್ದ ರವೀಂದ್ರನಾಥ್ ಆನಂತರ ತರಕಾರಿ ಮಂತ್ರಿಯಾದರು. ಅವರ ಅಧಿಕಾರಾವಧಿಯಲ್ಲಿ ಸಕ್ಕರೆ ಕಾರ್ಖಾನೆಗಳಾಗಲಿ, ತರಕಾರಿ ಬೆಳೆಯುವ ರೈತರಿಗಾಗಲಿ ಮುಕ್ತಿ ಸಿಗದಿದ್ದರೂ ರವೀಂದ್ರನಾಥರು ಮಾತ್ರ ಅಪಾರ ಶ್ರೀಮಂತರಾದರು.

ದಾವಣಗೆರೆ ಉತ್ತರ ಕ್ಷೇತ್ರದಿಂದ ಶಾಸಕ-ಮಂತ್ರಿಯಾದರೂ ತನ್ನನ್ನು ಗೆಲ್ಲಿಸಿದ ಕ್ಷೇತ್ರದತ್ತ ಕಿರುಗಣ್ಣಿನಿಂದ ನೋಡುವಷ್ಟೂ ಪುರುಸೊತ್ತು ಇಲ್ಲದಂತಾದರು. ಕುಟುಂಬ ರಾಜಕಾರಣದಲ್ಲಿ ಬ್ಯುಜಿಯಾದ ರವೀಂದ್ರನಾಥರು ತಮ್ಮ ಮಗಳನ್ನು ಜಿಲ್ಲಾ ಪಂಚಾಯತಿಯ ಸದಸ್ಯೆ ಮಾಡಿ ಅಧ್ಯಕ್ಷಳನ್ನಾಗಿಸಿ ಪುಣ್ಯಕಟ್ಟಿಕೊಂಡರೆ ತಮ್ಮ ಜೀವನ ಸಾರ್ಥಕವಾದೀತು ಎಂಬಂತೆ ವರ್ತಿಸಿದರು.

ರವೀಂದ್ರನಾಥರು ತಮ್ಮ ಹುಟ್ಟೂರು ಶಿರಮಗೊಂಡನಹಳ್ಳಿಯಿಂದ ಹೊರಟರೆಂದರೆ ಅವರು ಬಂದು ನಿಲ್ಲುವುದು ದಾವಣಗೆರೆಯಲ್ಲಿರುವ ಪುರಾತನ ಕಾಲದ ಪ್ರವಾಸಿಮಂದಿರದಲ್ಲಿ, ಅಲ್ಲೇ ಅವರೆಲ್ಲ ರಾಜಕೀಯ ಕಾರುಬಾರುಗಳು ನಡೆಯುವುದು. ಇವರು ಮಂತ್ರಿಯಾಗಿದ್ದ ಐದು ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನ ಬಂದಿದ್ದರೂ ಅದು ಸದುಪಯೋಗವಾಗಿಲ್ಲ.

ರವೀಂದ್ರನಾಥರು ತಾವು ಮಣ್ಣಿನ ಮಗನೆಂದು ಸ್ವಯಂಘೋಷಿಸಿಕೊಂಡರೂ ಕ್ಷೇತ್ರದ ರೈತಸಮುದಾಯದ ಬಗ್ಗೆ ನಿಗಾವಹಿಸಲಿಲ್ಲ. ಜಿಲ್ಲೆಯ ರೈತರು ಸದಾ ಒಂದಿಲ್ಲೊಂದು ಸಮಸ್ಯೆಯ ಬಗ್ಗೆ ಚಳವಳಿ ಮಾಡಿದರೂ ರವೀದ್ರನಾಥರು ತಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಸುಮ್ಮನಿರುತ್ತಿದ್ದರು. ಮೆಕ್ಕೆಜೋಳ, ಅಡಿಕೆ, ಕಬ್ಬಿಗೆ ಬೆಂಬಲ ಬೆಲೆ ನೀಡಬೇಕೆಂದು ರೈತರು ಬೀದಿಗಿಳಿದರೆ 'ಬೀದಿಗಿಳಿದವರ್‍ಯಾರೂ ರೈತರಲ್ಲ' ಎಂಬ ಉಡಾಫೆ ಪ್ರದರ್ಶಿಸಿದರು.

ಕಳೆದ ಬಾರಿಯ ಚುನಾವಣೆ ಸಂದರ್ಭದಲ್ಲಿ "ಹದಿನೈದು ವರ್ಷಗಳಿಂದ ತುಕ್ಕು ಹಿಡಿಯುತ್ತಿರುವ ಭದ್ರಾ ಸಹಕಾರಿ ಸಕ್ಕರೆ ಕಂಪನಿಯನ್ನು ಪುನಶ್ಚೇತನಗೊಳಿಸುತ್ತೇನೆ. ಕಂಪನಿಯಿಂದ ರೈತರಿಗೆ-ಕಾರ್ಮಿಕರಿಗೆ ಬರುವ ಬಾಕಿ-ಸಂಬಳ ಕೊಡಿಸುತ್ತೇನೆ" ಎಂದೆಲ್ಲಾ ಭರವಸೆ ನೀಡಿದ್ದ ರವೀಂದ್ರನಾಥರು ಗೆದ್ದ ನಂತರ ಈ ಬಗ್ಗೆಯೂ ತೆಪ್ಪಗಾದರು.


ದುರಹಂಕಾರಿಯಾದ ರವೀಂದ್ರನಾಥರ ನಾಲಿಗೆಗೆ ಎಲುಬುಗಳೇ ಇಲ್ಲ. ಅಹಂಕಾರ ಮತ್ತು ಅಧಿಕಾರದ ಮದದಿಂದ ರವೀಂದ್ರನಾಥರು ಇವತ್ತು ತಮ್ಮ


ರವೀಂದ್ರನಾಥ್

ಬೆಂಬಲಿಗರನ್ನೇ ದೂರ ಮಾಡಿದ್ದಾರೆ. ಜೊತೆಗೆ ಅವ... ವಿರುದ್ಧ ಸ್ಪರ್ಧಿಸಲಿರುವ ಕೆ.ಜೆ.ಪಿ ಮತ್ತು ಬಿ.ಎಸ್.ಪಿ ತರಹ... ಪಾರ್ಟಿಗಳ ಸದಸ್ಯರಿಗೆ ಅವರನ್ನು ಸೋಲಿಸುವ ತಾಕತ್ತಿಲ್ಲ...

ರವೀಂದ್ರನಾಥರಿಗೆ ಅಮರಿಕೊಂಡಿರು... ಅಹಂಕಾರ-ದುರಹಂಕಾರಕ್ಕೆ ಅಂಕುಶ ಇಡುವ ... ಇರುವುದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ. ಅದರಲ್ಲೂ ಮಾ... ಮಂತ್ರಿ ಎಸ್.ಎಸ್.ಮಲ್ಲಿಕಾರ್ಜುನ್ ಸ್ಪರ್ಧಿಸಿದ...

...ಕ್ಷಿಣ: ಬಿಜೆಪಿಗೆ ಮತ್ತೊಮ್ಮೆ ಸೋಲು




ದಾವಣಗೆರೆ

...ಸ್ತದ ರಾಜಕೀಯ ವಾತಾವರಣದಲ್ಲಿ ದಾವಣಗೆರೆ ...ತ್ತವು ಜಿಲ್ಲಾ ರಾಜಕಾರಣದ ಕೇಂದ್ರಬಿಂದುವಾಗಿದೆ. ...ದೆ ಇಲ್ಲಿ ದಾವಣಗೆರೆಯ ಧಣಿ ಶಾಮನೂರು ...ಪ್ಪ ಮತ್ತು ಅವರ ಪುತ್ರ ಮಾಜಿ ಮಂತ್ರಿ ...ರ್ಜುನ್ ರೂಪಿಸಬಹುದಾದ ಚುನಾವಣೆಯ ...ಕೆ ಮಹತ್ವ ಪಡೆದಿದೆ.

...ಗಲೇ ದಾವಣಗೆರೆ ದಕ್ಷಿಣದಿಂದ ಚುನಾವಣಾ ...ಲು ವಿವಿಧ ಪಕ್ಷಗಳಿಂದ ಸಿದ್ಧರಾಗಿರುವ ...ವಾರರು ಲೆಕ್ಕಾಚಾರ ಹಾಕುತ್ತಿದ್ದಾರೆ. ಅವರೆಲ್ಲ ...ಪಕ್ಷದ ಅಭ್ಯರ್ಥಿ ಯಾರಾಗಬಹುದು ಎನ್ನುವುದನ್ನೇ ...ಗಳಂತೆ ಕಾಯುತ್ತಿದ್ದಾರೆ. ಸದ್ಯ ಶಿವಶಂಕರಪ್ಪನವರು ...ರೆ ದಕ್ಷಿಣವನ್ನು ಪ್ರತಿನಿಧಿಸುತ್ತಿದ್ದರೂ ಬರಲಿರುವ ...ಣೆಯಲ್ಲಿ ಯಾರು ಸ್ಪರ್ಧಿಸಲಿದ್ದಾರೆಂಬ ಕುತೂಹಲ ... ಇದ್ದೇ ಇದೆ.

...ವು ಮೂಲಗಳ ಪ್ರಕಾರ ಬರಲಿರುವ ...ಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೈಯದ್ ...ಕಣಕ್ಕಿಳಿಯುವ ಸಾಧ್ಯತೆ ಇದೆ. ಸೈಫುಲ್ಲಾ ...ಕಾಂಗ್ರೆಸ್ ಟಿಕೆಟ್ ಸಿಕ್ಕರೆ ಕಣಕ್ಕಿಳಿಯುವ ...ರಲ್ಲಿದ್ದಾರೆ. ಆದರೆ ಈ ಕ್ಷೇತ್ರದಲ್ಲಿರುವ ...ಸಮುದಾಯಗಳ ಮತಗಳನ್ನು ಲೆಕ್ಕಹಾಕಿದರೆ ...ಗೆಲ್ಲುವುದು ಕಷ್ಟ ಅನ್ನಿಸುತ್ತದೆ.

ಈ ಕ್ಷೇತ್ರದಲ್ಲಿ ಸರಿಸುಮಾರು 40 ...ಷ್ಟು ಮುಸಲ್ಮಾನರ ಓಟುಗಳಿವೆ. ಉಳಿದಂತೆ ... ವೀರಶೈವರು, ಕುರುಬರು, ಗೊಲ್ಲರು ...ಸೇರಿದರೆ 60,000ದಷ್ಟು ಮತಗಳಾಗುತ್ತವೆ. ...ಗಿ ಈಗ ಮುಸಲ್ಮಾನರ ಮತಗಳೆಲ್ಲವೂ ...ಆಗಿ ಕಾಂಗ್ರೆಸ್‌ಗೆ ಬೀಳುವುದು ಅಸಾಧ್ಯದ ...ಮಾಕೆಂದರೆ ಈಗ ಆ ಸಮುದಾಯದಲ್ಲಿ ಅಲ್ಪಸ್ವಲ್ಪ



...ಸರೂ ಬಿಜೆಪಿ, ಜೆಡಿಎಸ್ ಮತ್ತು ಕೆಜೆಪಿ ಬೇರು ...ಣನ್ನು ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್ ...ಅಲ್ಪಸಂಖ್ಯಾತರಿಗೇ ಟಿಕೆಟ್ ಕೊಡುವ ಮಾತು ...ತ್ತಿದೆ. ಹಾಗೆಯೇ ಜೆಡಿಎಸ್‌ನಿಂದಲೂ ಮುಸಲ್ಮಾನ

● ಟಿ.ಎನ್.ಷಣ್ಮುಖ

...ಾಥರ ಥರಗುಟ್ಟುವುದು ಗ್ಯಾರಂಟಿ. ಯಾಕೆಂದರೆ ...ೆ ದಾವಣಗೆರೆ ಒಂದೇ ಮತ ಕ್ಷೇತ್ರವಾಗಿದ್ದಾಗ ...ಾಗಿದ್ದ ಮಲ್ಲಿಕಾರ್ಜುನ್ ಅವರು ನಗರವನ್ನು ...ಮಾಡಲು ಶ್ರಮಿಸಿದ್ದರು. ಯಾರಿಗೂ ಬೇಡವಾಗಿ ...ಳಗಾಗಿದ್ದ ಕುಂದುವಾಡದ ಪುರಾತನ ಕೆರೆಗೆ ...ನೀಡಿ ನಗರದ ಕುಡಿಯುವ ನೀರಿನ ಬವಣೆಯನ್ನು ...ಮಾಡಿದ್ದರು. ದಾವಣಗೆರೆ ನಗರದಲ್ಲೆಲ್ಲ ಕಾಂಕ್ರೀಟು ...ಸದ ವ್ಯವಸ್ಥೆ, ಒಳಚರಂಡಿ, ಉದ್ಯಾನವನ... ಹೀಗೆ ...ಮರಗಿಗೆ ದುಡಿದು ಮತದಾರರ ಮೆಚ್ಚುಗೆಗೆ ...ದ್ದರು. ವಿಪರ್ಯಾಸವೆಂದರೆ ದಾವಣಗೆರೆ ...ರ ಪಾಲಿಕೆಯಲ್ಲಿ ಐದು ವರ್ಷ ಅಧಿಕಾರ ...ದ ಬಿಜೆಪಿಯ 24 ಸದಸ್ಯರು ಮಲ್ಲಿಕಾರ್ಜುನ್ ...ಾಗಿದ್ದಾಗ ಮಾಡಿದ್ದ ಕಾಮಗಾರಿಗಳನ್ನೇ ತೋರಿಸಿ ... ಬಿಲ್ಲು ಮಾಡಿಸಿಕೊಂಡು ಕೃತಾರ್ಥರಾಗಿದ್ದರು.

ದಾವಣಗೆರೆ ಬಿಜೆಪಿಯೊಳಗೆ ಬಂಡಾಯ ...ಡುತ್ತಿದೆ. ಬಿಜೆಪಿಯ ಹೆಚ್ಚಿನ ಕಾರ್ಯಕರ್ತರು ...ರಷ್ಟು ಕೆಜೆಪಿಗೆ ವಲಸೆ ಹೋಗುತ್ತಿದ್ದಾರೆ. ಇಂತಹ ...ಲ್ಲಿ ಮಲ್ಲಿಕಾರ್ಜುನ್ ಉತ್ತರದಿಂದ ಕಣಕ್ಕಿಳಿದರೆ ...ಜೆಪಿಯಲ್ಲಿ ಅಸಮಾಧಾನಗೊಂಡಿರುವವರು ...ೃ ತರಕಾರಿ ಮಂತ್ರಿ ರವೀಂದ್ರನಾಥರಿಂದ ...ಸಗೊಂಡವರೂ ಮಲ್ಲಿಕಾರ್ಜುನರ ...ಸುವುದು ನಿಶ್ಚಿತ. ಹಾಗಾದಾಗ ರವೀಂದ್ರನಾಥರ ...ರದ ರಾಜಕೀಯಕ್ಕೆ ತೆರೆ ಬೀಳುತ್ತದೆ.

...ಶ, ಅವಕಾಶಕ್ಕಾಗಿ ಇಲ್ಲಿನ ಮತದಾರರು ...ನ್ನಾರೆ. ■

ಅಭ್ಯರ್ಥಿ ಕಣಕ್ಕಿಳಿಯುವ ಸಂಭವವಿದೆ. ಇದೆಲ್ಲದರರ್ಥ ಬರುವ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತಗಳು ವಿವಿಧ ಪಕ್ಷಗಳ ನಡುವೆ ಹಂಚಿಹೋಗಲಿದೆ. ಪರಿಣಾಮವಾಗಿ ಕಾಂಗ್ರೆಸ್ ಪರವಾಗಿ ಸೈಫುಲ್ಲಾ ಗೆಲ್ಲುವ ಬದಲಾಗಿ ಬಿಜೆಪಿ ಇನ್ನಷ್ಟು ಈ ಕ್ಷೇತ್ರದಲ್ಲಿ ಗಟ್ಟಿಗೊಳ್ಳುವಂತಾಗುತ್ತದೆ.

ಇದೆಲ್ಲದರೊಂದಿಗೆ ದಾವಣಗೆರೆ ದಕ್ಷಿಣ ಮತಕ್ಷೇತ್ರದ ಗುಣಲಕ್ಷಣಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ. 1990ರ ದಶಕದಲ್ಲಿ ಅಯೋಧ್ಯೆಯಲ್ಲಿದ್ದ ಬಾಬರಿ ಮಸೀದಿಯನ್ನು ಕೆಡವಿ ಅಲ್ಲೊಂದು ರಾಮ ಮಂದಿರವನ್ನು ಕಟ್ಟುವ ಅಜೆಂಡಾ ಇಟ್ಟುಕೊಂಡು ಹಿಂದೂ ಕೋಮುವಾದಿಗಳು ಎಲ್.ಕೆ.ಅಡ್ವಾನಿ ನೇತೃತ್ವದಲ್ಲಿ ರಥಯಾತ್ರೆಯಲ್ಲಿ ಹೊರಟಾಗ ದೇಶದ ವಿವಿಧ ಭಾಗಗಳಲ್ಲಿ ಕೋಮುಗಲಭೆಗಳು ಭುಗಿಲೆದ್ದಿದ್ದವು. ಅವುಗಳ ಕಿಡಿಗಳು ದಾವಣಗೆರೆಗೂ ಬೆಂಕಿ ಹಚ್ಚಿತ್ತು.

ಆ ಗಲಭೆಗಳಲ್ಲಿ ಸ್ಥಳೀಯ 25 ಜನ ಸಾವಿಗೀಡಾಗಿದ್ದರು. ಜನಸಾಮಾನ್ಯರೂ ಕರ್ಫ್ಯೂ ಅಡಿ ನರಳಿದ್ದರು. ಅಮತ್ತಿನಿಂದ ಈ ಕ್ಷೇತ್ರ ಕೋಮುಭಾವನೆಯ ಸೂಕ್ಷ್ಮ ಕ್ಷೇತ್ರವೂ ಆಗಿಹೋಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಪಕ್ಷಗಳ ಮುಸಲ್ಮಾನ ಅಭ್ಯರ್ಥಿಗಳ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಯಶವಂತರಾವ್ ಸ್ಪರ್ಧಿಸಿದರೆ ಚೆಡ್ಡಿಗಳು ಶತಾಯಗತಾಯ ಗೆಲ್ಲುವ ಉದ್ದೇಶದಿಂದ ಕೋಮುಭಾವನೆಗಳನ್ನು ಪ್ರಚೋದಿಸುವ ಸಾಧ್ಯತೆಗಳಿವೆ. ಯಶವಂತರಾವ್ ಈ ಹಿಂದೆ ಮೂರು ಬಾರಿ ಸೋತಿರುವುದಿಂದ ಹಿಂದೂ ಮತಗಳು ಬಿಜೆಪಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜಮೆ ಆಗುವುದನ್ನೂ ತಳ್ಳಿಹಾಕಲಾಗುವುದಿಲ್ಲ.

2008ರ ಚುನಾವಣೆ ಸಂದರ್ಭದಲ್ಲೂ ಸೈಫುಲ್ಲಾ ಅವರು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಪಕ್ಷವು ಸೈಫುಲ್ಲಾ ಬದಲಿಗೆ ಶಾಮನೂರರಿಗೆ ಟಿಕೆಟ್ ಕೊಟ್ಟಿತ್ತು. ಸೈಫುಲ್ಲಾರಿಗೆ ಟಿಕೆಟು ಸಿಗಲಿಲ್ಲವೆಂದು ಇಲ್ಲಿನ ಅಲ್ಪಸಂಖ್ಯಾತರು ಜೆಡಿಎಸ್ ಅಭ್ಯರ್ಥಿಯನ್ನೋ, ಮತ್ತಿನ್ಯಾವ ಪಕ್ಷವನ್ನೋ ಬೆಂಬಲಿಸಲಿಲ್ಲ, ಬದಲಾಗಿ ಮುಸಲ್ಮಾನ ಮತದಾರರು ಶಾಮನೂರರನ್ನೇ ಬೆಂಬಲಿಸಿ ಗೆಲ್ಲಿಸಿದ್ದರು. ಅಷ್ಟೇ ಅಲ್ಲ, ಇಲ್ಲಿನ ಹಿಂದೂಗಳೂ ಬಿಜೆಪಿಯ ಯಶವಂತರಾವ್ ಬದಲಾಗಿ ಶಾಮನೂರರಿಗೇ ಮತಹಾಕಿದ್ದರು. ಇದಕ್ಕೆ ಕಾರಣ ಶಾಮನೂರರು ಜಾತ್ಯತೀತರು ಮತ್ತು ಧರ್ಮಾತೀತರು ಎಂಬ ಜನರ ನಂಬಿಕೆ. ಶಾಮನೂರರು ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಗೆದ್ದು ಶಾಸಕರಾದ ನಂತರ ಕಳೆದ ಐದು ವರ್ಷಗಳಲ್ಲಿ ಇಲ್ಲಿ ಒಂದೇ ಒಂದು ಕೋಮುಗಲಭೆ ನಡೆದಿಲ್ಲ ಎಂಬುದೇ ಜನರ ನಂಬಿಕೆಗೆ ಪುಷ್ಟಿ ನೀಡುತ್ತದೆ.

ರಾಜ್ಯದೆಲ್ಲೆಡೆ ಈಗಾಗಲೆ ಕೆಟ್ಟ ಹೆಸರು ಪಡೆದಿರುವ ಬಿಜೆಪಿಯನ್ನು ಸೋಲಿಸಬೇಕೆಂದರೆ, ಅದರಲ್ಲೂ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಗಳು ಕೋಮುಗಲಭೆಗಳನ್ನು ಎಬ್ಬಿಸದಂತೆ ತಡೆಯಬೇಕಿದ್ದರೆ, ಇಲ್ಲಿನ ಸೌಹಾರ್ದ ವಾತಾವರಣವನ್ನು ಹಿಂದೂ ಕೋಮುವಾದಿಗಳು ಕೆಡಿಸದಂತೆ ಎಚ್ಚರ ವಹಿಸಬೇಕಿದ್ದರೆ, ಅಧಿಕಾರದ ಸ್ಥಾನಗಳಿಂದ ಭ್ರಷ್ಟರನ್ನು ಒದ್ದೋಡಿಸಬೇಕಿದ್ದರೆ ಇಲ್ಲಿಂದ ಜಾತ್ಯತೀತರಾದ ಶಾಮನೂರು ಶಿವಶಂಕರಪ್ಪನವರೇ ಚುನಾವಣಾ ಕಣಕ್ಕೆ ಇಳಿಯುವುದು ಮತ್ತು ಜನ ಅವರನ್ನು ಗೆಲ್ಲಿಸುವುದು ಅತ್ಯವಶ್ಯಕವಾಗಿದೆ. ■

ಉಕ್ಕಡ ಕಳ್ಳರಿಗೆ ಗೇಟ್‌ಪಾಸ್

ಪತ್ರಿಕೆ ಎಫೆಕ್ಟ್


ಉಕ್ಕಡ ಮಾರಮ್ಮ ದೇವಿಯ ಭಕ್ತರ ಶಾಪ ಕೊನೆಗೂ ತಟ್ಟಿದೆ. ಉಕ್ಕಡ ಮಾರಮ್ಮನ ಹಣವನ್ನು ತಿಂದುಂಡು ಕೊಬ್ಬಿದ್ದ ಕೆಲವು ಖದೀಮರಿಗೆ ಗೇಟ್‌ಪಾಸ್ ಕೊಟ್ಟು ಕೊನೆಗೂ ಸರ್ಕಾರ ಈ ದೇವಸ್ಥಾನದ ಉಸ್ತುವಾರಿಯನ್ನು ಕೈಗೆತ್ತಿಕೊಂಡಿದೆ. ಆ ಮೂಲಕ ಕಳೆದ ಕೆಲವು ವರ್ಷಗಳಿಂದ ಉಕ್ಕಡ ಮಾರಮ್ಮ ಟ್ರಸ್ಟ್‌ನ ಹೆಸರಿನಲ್ಲಿ ನಡೆಯುತ್ತಿದ್ದ ಹಗಲು ದರೋಡೆಯನ್ನು ವಿರೋಧಿಸಿ ರಾಜ್ಯ ರೈತ ಸಂಘದ ಉತ್ಸಾಹಿ ಯುವ ಕಾರ್ಯಕರ್ತ ಕಿರಂಗೂರು ಪಾಪು ಮತ್ತು ಸಂಗಡಿಗರು ನಡೆಸಿದ್ದ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ.

ಹಾಲಿ ಮಂಡ್ಯ ಜಿಲ್ಲಾಧಿಕಾರಿ ಕೃಷ್ಣಯ್ಯನವರ ನೇತೃತ್ವದ ಅಧಿಕಾರಿಗಳ ತಂಡ ಮೊನ್ನೆ ದೇವಿಯ ಹಣ ಒಡವೆಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಈ ಅಧಿಕೃತ ಸರ್ಕಾರಿ ಆದೇಶವನ್ನು ಪ್ರಕಟಿಸುವ ಒಂದು ಬೋರ್ಡ್ ಕೂಡಾ ದೇವಸ್ಥಾನದ ಮುಂಭಾಗದಲ್ಲಿ ನಿಲ್ಲಿಸಲಾಗಿದೆ. ಸರ್ಕಾರದ ದಿಢೀರ್ ಕ್ರಮದಿಂದ ಆಘಾತಗೊಂಡ ಕಳ್ಳರ ಕೂಟ ಮಾರಮ್ಮದೇವಿಯನ್ನು ತಮ್ಮ ಕಬ್ಜಾದಲ್ಲೇ ಉಳಿಸಿಕೊಳ್ಳಲು ಶತಾಯಗತಾಯ ಹೆಣಗುತ್ತಿದ್ದಾರೆ.

ನಮ್ಮ ಪತ್ರಿಕೆ ಉಕ್ಕಡ ಮಾರಮ್ಮನ ಟ್ರಸ್ಟ್ ಹೆಸರಿನಲ್ಲಿ ಕೆಲವು ಖದೀಮರು ಲೂಟಿ ಹೊಡೆಯುತ್ತಿದ್ದ ಬಗ್ಗೆ ಕೆಲವು ವಾರಗಳ ಹಿಂದೆ ಸವಿವರವಾದ ವರದಿಯನ್ನು ಪ್ರಕಟಿಸಿತ್ತು. ಆದರೆ ಇಂಥಾ ಕಳ್ಳರಕೂಟದ ಹಿಂದೆ ಯಾರೆಲ್ಲಾ ಇದ್ದಾರೆಂಬ ಅಂಶ ನಿಧಾನವಾಗಿ ಬೆಳಕಿಗೆ ಬರುತ್ತಿದೆ.

ನಾನಾ ಅಕ್ರಮಗಳಲ್ಲಿ ತೊಡಗಿದ್ದ ನಾಲಾಯಕ್ ಟ್ರಸ್ಟ್‌ನ ಅಧಿಕಾರವನ್ನು ಕಿತ್ತುಹಾಕಿ ಸರ್ಕಾರದ ಧಾರ್ಮಿಕ ಪರಿಷತ್‌ನ ನಿರ್ಣಯದಂತೆ ದೇವಸ್ಥಾನವನ್ನು ಮುಜರಾಯಿ ಇಲಾಖೆ ತನ್ನ ಸುಪರ್ದಿಗೆ ತೆಗೆದುಕೊಂಡ ನಂತರ ನಡೆಯುತ್ತಿರುವ





ವಿದ್ಯಮಾನಗಳು ಈ ಕಳ್ಳ ಟ್ರಸ್ಟ್‌ನ ಹಿಂದಿರುವ ಬಲಾಢ್ಯ ಕೈಗಳು ಎಷ್ಟೊಂದು ಕೊಬ್ಬಿವೆ ಎಂಬುದನ್ನು ತೋರಿಸುತ್ತಿವೆ. ಇಂಥಾ ಅಧಿಕೃತ ತೀರ್ಮಾನಕ್ಕೆ ಮುಜರಾಯಿ ಸಚಿವರ ಅಂತಿಮ ಮುದ್ರೆ ಬಿದ್ದ ನಂತರ ಕಳ್ಳರಕೂಟ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಹಿಡಿದು ಕಾನೂನುಬಾಹಿರ ಲಾಬಿ ನಡೆಸುತ್ತಿದೆ. ಈ ಲಾಬಿಯ ಹಿಂದೆ ರಾಜ್ಯ ರೈತ ಸಂಘದ ನಾಯಕ ಹಾಗೂ ಮಾಜಿ ಶಾಸಕರಾದ ಕೆ.ಎಸ್.ಪುಟ್ಟಣ್ಣಯ್ಯನವರು ಬಲವಾಗಿ ನಿಂತಿದ್ದಾರೆಂಬ ಗುಮಾನಿ ಇದೀಗ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತಾಗಿಬಿಟ್ಟಿದೆ.


ಜನಾಭಿಪ್ರಾಯ ಹಾಗೂ ಭಕ್ತರ ಅಭಿಪ್ರಾಯಗಳನ್ನು ಧಿಕ್ಕರಿಸಿರುವ ಈ ಲಾಬಿಕೋರರು ಟ್ರಸ್ಟ್‌ನ ಕಳ್ಳರ ಪರವಾಗಿ ನಿಂತು ಮುಖ್ಯಮಂತ್ರಿಯ ಮೇಲೆ ಒತ್ತಡ ತಂದು ಈ ಆದೇಶಕ್ಕೆ ತಡೆಯೊಡ್ಡುವ ಸನ್ನಾಹ ನಡೆಸಿದ್ದಾರೆ. ಪರಿಣಾಮವಾಗಿ 22/02/2013ರಂದು ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಧಾರ್ಮಿಕ ದತ್ತಿ ಇಲಾಖೆಗೆ ಒಂದು ಅಧಿಕೃತ ಪತ್ರ ಬರೆದು "... ಶ್ರೀಯುತ ಕೆ.ಎಸ್.ಪುಟ್ಟಣ್ಣಯ್ಯ, ವರಿಷ್ಠರು ಹಾಗೂ ಮಾಜಿ ಶಾಸಕರು, ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರುಸೇನೆರವರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಉಲ್ಲೇಖ(2)ರಲ್ಲಿನ ಮನವಿಯಲ್ಲಿ ಸದರಿ ದೇವಾಲಯವನ್ನು ಘೋಷಿತ ಸಂಸ್ಥೆಯೆಂದು ಪರಿಗಣಿಸಿ ಸರ್ಕಾರ ಮಾಡಿರುವ ಆದೇಶವನ್ನು ಕೂಡಲೇ ತಡೆಹಿಡಿದು ಈ ಹಿಂದಿನಂತೆ ಯಥಾಸ್ಥಿತಿ ಕಾಪಾಡಲು ಕೋರಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಸದರಿ ಆದೇಶವನ್ನು ತಡೆಹಿಡಿದು ಯಥಾಸ್ಥಿತಿ ಕಾಯ್ದುಕೊಂಡು ಹೋಗಲು ಸೂಚಿಸಿರುತ್ತಾರೆ. ... ಆದ್ದರಿಂದ ಸರ್ಕಾರದ ಆದೇಶವನ್ನು ವಿಳಂಬನೆಯಲ್ಲಿಟ್ಟು ಯಥಾಸ್ಥಿತಿ ಮುಂದುವರೆಸಲು ಸರ್ಕಾರದ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ." ಸಹಿ (ಎವಿ ಶ್ರೀನಿವಾಸ ದೀಕ್ಷಿತ್, ಅಧೀನ ಕಾರ್ಯದರ್ಶಿ) ಎಂಬ ಅಪ್ಪಟ ಕಾನೂನುಬಾಹಿರ ಆದೇಶವನ್ನು ಕಳಿಸಿಕೊಟ್ಟಿದ್ದಾರೆ.

ಇದು ಮತ್ತೊಂದು ಕಾನೂನು ಸಮರಕ್ಕೆ ದಾರಿ ಮಾಡಿ ಈ ಲಾಬಿಕೋರರು ಮತ್ತು ಸರ್ಕಾರ ಮತ್ತೊಮ್ಮೆ ಮುಖಭಂಗ ಅನುಭವಿಸುವುದರಲ್ಲಿ ಯಾವುದೇ ಸಂಶಯವಿಲ್ಲ, ಅದು ಹಾಗಿರಲಿ.

ಅನೇಕ ಪ್ರಗತಿಪರ, ರೈತ ಚಳವಳಿಗಳಲ್ಲಿ ಭಾಗವಹಿಸಿ ಹೆಸರುವಾಸಿಯಾಗಿದ್ದ ಪುಟ್ಟಣ್ಣಯ್ಯನವರಿಗೆ ಇಂಥಾ ಕಳ್ಳರಕೂಟದ ಜೊತೆ ಸೇರುವ ದೌರ್ಭಾಗ್ಯ ಬಂದಿರುವುದಂತೂ ಈ ನಾಡಿನ ದುರಂತವೇ ಸರಿ!

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹಾನಗಲ್ ಮೋಹನಕುಮಾರ್ ಎಂಟ್ರಿ... ತಹಶೀಲ್ದಾರ್, ಉದಾಸಿಗೆ ಡಿಸೆಂಟ್ರಿ...



ವಿಧಾನಸಭೆಯ ಮಾಜಿ ಉಪ ಸಭಾಪತಿ ಮನೋಹರ ತಹಶೀಲ್ದಾರ ಹಾನಗಲ್ ಕ್ಷೇತ್ರದ ಕಾಂಗ್ರೆಸ್‌ಗೆ ತಂದಿಟ್ಟದ್ದ ರೋಗಕ್ಕೆ, ಗಂಗಾಮತ ಸಮಾಜದ ರಾಜ್ಯಾಧ್ಯಕ್ಷ ಬಿ.ಕೆ.ಮೋಹನಕುಮಾರ ದಿವ್ಯ ಔಷಧಿಯಾಗಿ ಜೀವ ತುಂಬುತ್ತಿದ್ದಾರೆ. ಕಾಂಗ್ರೆಸ್‌ನ ಭದ್ರಕೋಟೆ ಎನಿಸಿಕೊಂಡಿದ್ದ ಈ ಕ್ಷೇತ್ರ ಕಳೆದ ಎರಡು ಅವಧಿಯಿಂದ ಬಿಜೆಪಿಯ ಪಾಲಾಗಿತ್ತು. ಅದು ಬಿಜೆಪಿಯ ಸಿ.ಎಂ.ಉದಾಸಿಯ ಗೆಲುವು ಎನ್ನುವುದಕ್ಕಿಂತ ತಹಶೀಲ್ದಾರನ ಮ್ಯಾಚ್ ಫಿಕ್ಸಿಂಗ್ ಪ್ರೋಗ್ರಾಮಿನ ವಿಜಯವಾಗಿತ್ತು.

ಈ ಕ್ಷೇತ್ರದ ಮತದಾರರು ಒಂದು ಬಾರಿ ಉದಾಸಿಗೆ ಅವಕಾಶ ಕೊಟ್ಟರೆ, ಇನ್ನೊಂದು ಬಾರಿ ಕಾಂಗ್ರೆಸ್‌ನ ತಹಶೀಲ್ದಾರನನ್ನು ಗೆಲ್ಲಿಸುತ್ತಾ ಬಂದಿದ್ದರು. ಯಾವಾಗ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ವಿಧಾನಸಭೆಯ ಉಪ ಸಭಾಪತಿಯಾಗಿ ತಹಶೀಲ್ದಾರ ಆಯ್ಕೆಯಾದರೋ ಆಗಿಂದ ಆತ ರಾಜಧಾನಿಯನ್ನೇ ತನ್ನ ಕ್ಷೇತ್ರವನ್ನಾಗಿಸಿಕೊಂಡು ಹಾನಗಲ್ ಕಡೆ ತಿರುಗಿಯೂ ನೋಡಲಿಲ್ಲ. ಅಧಿಕಾರದಲ್ಲಿದ್ದಾಗಲೂ ಒಂದೇ ಒಂದು ಘನಂದಾರಿ ಕಾರ್ಯ ಮಾಡಲಿಲ್ಲ ಈ ತಹಶೀಲ್ದಾರ. ಈತನ ಇಂತಹ ವರ್ತನೆಯಿಂದಲೇ ಕ್ಷೇತ್ರದಲ್ಲಿ ಕಾಂಗ್ರೆಸ್ ಹಳ್ಳ ಹಿಡಿಯಿತು.

ಈಗ ಮತ್ತೆ ಚುನಾವಣೆ ಹತ್ತಿರವಾಗುತ್ತಿರುವಾಗ ತಹಶೀಲ್ದಾರ ಪಕ್ಷದ ವರಿಷ್ಠರ ಮುಂದೆ ತಾನೊಬ್ಬ ಪ್ರಮುಖ ನಾಯಕನೆಂಬಂತೆ ಪೋಜು ಕೊಡುತ್ತಾ ಕ್ಷೇತ್ರದಲ್ಲಿ ಅಲ್ಲೊಂದು ಇಲ್ಲೊಂದು ಸಭೆ ಮಾಡಿ ಬಿ ಫಾರ್ಮ್ ಗಿಟ್ಟಿಸಲು ಹವಣಿಸುತ್ತಿದ್ದಾರೆ. ಆದರೆ ಈತ ಎಂತಹ ವ್ಯಕ್ತಿಯೆಂದರೆ ತನ್ನ ಪ್ರತಿಸ್ಪರ್ಧಿ ಬಿಜೆಪಿಯ ಉದಾಸಿಯೊಂದಿಗೂ ಒಳಒಪ್ಪಂದ ಮಾಡಿಕೊಂಡು ಸೋಲಬಲ್ಲ ಗಿರಾಕಿ.

ಅನುಕಂಪದ ಗೆಲುವು

ಇಲ್ಲಿಯವರೆಗೆ ಎಂಟು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ತಹಶೀಲ್ದಾರ ಗೆದ್ದಿದ್ದು ಮಾತ್ರ ಕೇವಲ ಮೂರು ಬಾರಿ. ಅದು ಕೂಡ ಅನುಕಂಪದ ಅಲೆಯ ಮೇಲೆ. ಒಮ್ಮೆ ಇಂದಿರಾಗಾಂಧಿಯ ಹತ್ಯೆಯ ನಂತರ ಉಂಟಾದ ಅನುಕಂಪದ ಅಲೆ ಮೇಲೆ ಗೆದ್ದ ತಹಶೀಲ್ದಾರ ಇನ್ನೊಮ್ಮೆ ರಾಜೀವ್ ಗಾಂಧಿಯ ಹತ್ಯೆಯ ನಂತರ ಎದ್ದ ಕಾಂಗ್ರೆಸ್ ಪರ ಗಾಳಿಯಲ್ಲಿ ವಿಧಾನಸಭೆಯನ್ನು ಹೊಕ್ಕಿದ್ದರು. ಹಾಗೆಯೇ ಮೂರನೆ ಬಾರಿ ಕ್ಷೇತ್ರದಲ್ಲಿ ಉದಾಸಿ ವಿರುದ್ಧ ಬಂಡೆದ್ದ ಹಿಂದುಳಿದ ವರ್ಗಗಳ ಜನ ಈತನನ್ನು ಗೆಲ್ಲಿಸಿದ್ದರು. ಹೀಗೆ ಮೂರು ಬಾರಿ ಸಲೀಸಾಗಿ ಗೆದ್ದ ತಹಶೀಲ್ದಾರ ಸಾಹೇಬರು ಕ್ಷೇತ್ರದ ಅಭಿವೃದ್ಧಿಗಾಗಲಿ, ಕಾರ್ಯಕರ್ತರ ರಕ್ಷಣೆಗಾಗಲಿ ಎಂದೂ ಧಾವಿಸಲಿಲ್ಲ.

ಸಾಮಾನ್ಯವಾಗಿ ಒಂದು ರಾಷ್ಟ್ರೀಯ ಪಕ್ಷದ ಅಭ್ಯರ್ಥಿ ತನ್ನ ಗೆಲುವಿಗಾಗಿ ಪ್ರತಿ ಕ್ಷೇತ್ರಕ್ಕೂ ಭೇಟಿ ನೀಡುತ್ತಾನೆ. ಆದರೆ ತಹಶೀಲ್ದಾರ ಮಾತ್ರ ಇದಕ್ಕೆ ಒಂದು ಅಪವಾದ. ಉದಾಹರಣೆಗೆ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕ್ಷೇತ್ರದ ಅದೆಷ್ಟೋ ಗ್ರಾಮದ ಮತದಾರರಿಗೆ ಈತನ ಮುಖ ದರ್ಶನವೂ ಆಗಲಿಲ್ಲ. ಅತಿ ದೊಡ್ಡ ಗ್ರಾಮಪಂಚಾಯತ್ ಅಕ್ಕಿಆಲೂರಲ್ಲೂ ಈತ ಕಾಲಿಡಲಿಲ್ಲ. ಹೀಗಾಗಿ ಮತ್ತೆ ತಹಶೀಲ್ದಾರನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೆ ಆತನಿಗೆ ಸೋಲು ಗ್ಯಾರಂಟಿ ಎನ್ನುತ್ತಿದ್ದಾರೆ ಸ್ಥಳೀಯ ಜನ.

ಚೇಲಾಗಳು ದರ್ಬಾರ್‌ನಲ್ಲೇ ಮಿಂದೆದ್ದರು

ತಹಶೀಲ್ದಾರನ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಿಂತ ಸರ್ಕಾರಿ ಅನುದಾನ ಲೂಟಿಯಾಗಿದ್ದೇ ಹೆಚ್ಚು. ಸದಾ ಬೆಂಗಳೂರಲ್ಲಿ ಕುಳಿತುಕೊಂಡಿರುತ್ತಿದ್ದ ತಹಶೀಲ್ದಾರನ ಚೇಲಾಗಳು ಇಲ್ಲಿ ವಸೂಲಿ ಕಾರ್ಯವನ್ನೇ ಪ್ರಾರಂಭಿಸಿದರು. ಕ್ಷೇತ್ರದ ಜವಾಬ್ದಾರಿಯನ್ನು ತಹಶೀಲ್ದಾರ ಸಾಹೇಬರು ತಮ್ಮ ಸಹೋದರ ಸುಭಾಸನಿಗೆ ವಹಿಸಿದರು. ಇನ್ನೊಬ್ಬ ಸಹೋದರ ಕೂಡ ಲೂಟಿ ಮಾಡಿ ಸುಸ್ತಾಗಿ ಕೊನೆಗೆ ಶಿವನ ಪಾದ ಸೇರಿಕೊಂಡಿದ್ದಾನೆ.

ಈ ಹಿಂದೆ ಖೋಟಾನೋಟಿನ ದಂಧೆಯಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದ ರಾಜಶೇಖರ್ ಸಾಲಿಮಠನಂತಹವರೂ ಈಗ ತಹಶೀಲ್ದಾರನ ವಿರುದ್ಧ ತಿರುಗಿ ಬಿದ್ದಿದ್ದಾರೆ. 'ಈತನನ್ನ ನಂಬಿ ನಾವು ಬೀದಿಪಾಲಾದ್ವಿ' ಎಂದು ಕಣ್ಣೀರಿಡುತ್ತಾ ಅವರೆಲ್ಲ ಈಗ ತಹಶೀಲ್ದಾರನಿಂದ ದೂರವಾಗಿದ್ದಾರೆ. ಇಂತಹ ಕಳ್ಳಕಾಕರ ನೆರವಿಲ್ಲದೆ ತಹಶೀಲ್ದಾರ ಗೆಲ್ಲುವುದು ಕಷ್ಟ ಎಂಬ ಮಾತು ಕೇಳಿಬರುತ್ತಿದೆ.

ಪ್ರಬಲ ವಿರೋಧ ಪಕ್ಷವಾಗಲಿಲ್ಲ

ಉದಾಸಿ ಗೆಲುವಿಗೆ ಸಹಕಾರಿಯಾಗುವಂತೆ ನಡೆದುಕೊಂಡು ಕ್ಷೇತ್ರದಿಂದ ಕಣ್ಮರೆಯಾಗುವ ತಹಶೀಲ್ದಾರ ಕಳೆದ ಹತ್ತು ವರ್ಷಗಳಲ್ಲಿ ಜನಪರವಾದ ಒಂದೇ ಒಂದು ಹೋರಾಟವನ್ನೂ ಕ್ಷೇತ್ರದಲ್ಲಿ ಕೈಗೊಂಡಿಲ್ಲ.



ಉದಾಸಿ



ಸತೀಶ್ ದೇಶಪಾಂಡೆ



ಮನೋಹರ್



ಪ್ರಕಾಶ್‌ಗೌಡ

ಉದಾಸಿ ಬಿಜೆಪಿ ಸರ್ಕಾರದಲ್ಲಿ ಮಂತ್ರಿ ಆದ ಅವಧಿಯಲ್ಲಿ ಕ್ಷೇತ್ರದಲ್ಲಿ ಹತ್ತಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆಯಿತು. ಎಲ್ಲಿ ನೋಡಿದರಲ್ಲಿ ಕಳಪೆ ಕಾಮಗಾರಿ, ಅಧಿಕಾರಿಗಳ ಅಂಧಾ ದರ್ಬಾರ್, ಉದಾಸಿ ಮತ್ತು ಆತನ ಮಕ್ಕಳ ಅಟ್ಟಹಾಸ, ಸ್ವಜಾತಿ ಅಧಿಕಾರಿಗಳನ್ನು ಆಯಕಟ್ಟಿನ ಜಾಗೆಗಳಲ್ಲಿ ಕೂರಿಸಿ ಹಗಲು ದರೋಡೆ ಮಾಡಿದ್ದು... ಇವೆಲ್ಲಾ ಕಣ್ಣು ಮುಂದೆ ನಡೆಯುತ್ತಿದ್ದರೂ ತಹಶೀಲ್ದಾರ ಸಾಹೇಬರು ಒಮ್ಮೆಯೂ ತುಟಿಪಿಟಕ್ ಎನ್ನಲಿಲ್ಲ. ಒಮ್ಮೆಯೂ ಬೀದಿಗಿಳಿಯಲಿಲ್ಲ. ಸ್ಥಳೀಯ ಮುಖಂಡರು ಉದಾಸಿ ವಿರುದ್ಧ ಪ್ರತಿಭಟನೆಗೆ ಮುಂದಾದರೆ ಅವರ ಬಾಯಿ ಮುಚ್ಚಿಸಿದರು ತಹಶೀಲ್ದಾರ ಸಾಹೇಬರು. ಇನ್ನು ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಬಲ ವಿರೋಧ ಪಕ್ಷವಾಗಿ ಬೆಳೆಯುವುದಾದರೂ ಹೇಗೆ?

ಕಳೆದ ಅವಧಿಯಲ್ಲಿ ಜರುಗಿದ ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲೂ ಕಾಂಗ್ರೆಸ್ ಮಣ್ಣುಮುಕ್ಕಿತ್ತು. ಇಲ್ಲಿರುವ ಒಟ್ಟು ಆರು ಜಿ.ಪಂ.ಗಳಲ್ಲಿ ಕೇವಲ ಎರಡರಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಅದೂ ಕೂಡ ಆ ಅಭ್ಯರ್ಥಿಗಳ ಸ್ವಂತ ಬಲದಿಂದಲೇ ಹೊರತು ತಹಶೀಲ್ದಾರನ ಶ್ರಮದಿಂದಲ್ಲ.

ತಾಲೂಕ್ ಪಂಚಾಯತಿಯಲ್ಲಿರುವ ಒಟ್ಟು 21 ಸ್ಥಾನಗಳಲ್ಲಿ ಕಾಂಗ್ರೆಸ್ 10 ಸ್ಥಾನಗಳನ್ನು ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿಯುವ ಸನ್ನಿಹಕ್ಕೆ ಬಂದಿತ್ತು. ಆ ಆಸೆಗೂ ತಣ್ಣೀರೆರಚಿದ್ದ ತಹಶೀಲ್ದಾರ ಸಲೀಸಾಗಿ ಉದಾಸಿಗೆ ಅಧಿಕಾರ ಬಿಟ್ಟುಕೊಟ್ಟಿದ್ದರು. ಇದನ್ನು ಕಂಡು ರೋಸಿಹೋದ ಕಾಂಗ್ರೆಸ್ ಕಾರ್ಯಕರ್ತರು ಆ ಸಮಯದಲ್ಲಿ ಎದುರಾದ ಪುರಸಭೆಯ ಚುನಾವಣೆಯಲ್ಲಿ ಬಿ ಫಾರ್ಮ್ ಹಂಚಿಕೆಯನ್ನು ಸ್ಥಳೀಯ ಕಾಂಗ್ರೆಸ್ ಮುಖಂಡ ಹಾಗೂ ಅಂಜುಮನ್ ಸಂಸ್ಥೆಯ ಅಧ್ಯಕ್ಷ ನಜೀರ್ ಅಹ್ಮದ್ ಸವಣೂರು ಅವರಿಗೆ ನೀಡುವಂತೆ ಪಟ್ಟು ಹಿಡಿದಿದ್ದರು. ಪರಿಣಾಮವಾಗಿ ಒಟ್ಟು 23 ಸ್ಥಾನಗಳಲ್ಲಿ 13 ಕ್ಕೆ ತಹಶೀಲ್ದಾರ ಉಳಿದ 10 ಸ್ಥಾನಕ್ಕೆ ನಜೀರ್ ಅಹ್ಮದ್ ಟಿಕೆಟ್ ಹಂಚಿಕೆ ಮಾಡಿದ್ದರು. ಆಗಲೂ ತಹಶೀಲ್ದಾರನ ಒಬ್ಬ ಅಭ್ಯರ್ಥಿಯೂ ಗೆಲುವು ಸಾಧಿಸಲಿಲ್ಲ. ಆದರೆ ನಜೀರ್ ಅಹ್ಮದ್ ಬಣದ ಐದು ಜನ ಪುರಸಭೆಯ ಪ್ರವೇಶ ಮಾಡಿದ್ದರು.

ವಿಚಿತ್ರವೆಂದರೆ, ಕಳೆದ ಒಂದೂವರೆ ದಶಕದಿಂದ ಉದಾಸಿಯ ಹಿಡಿತದಲ್ಲೇ ಇರುವ ಪಿಎಲ್‌ಡಿ ಬ್ಯಾಂಕಿಗೆ ಅಪರೂಪಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಾಮನಗೌಡ ಪಾಟೀಲ ಸ್ವಂತ ಬಲದಿಂದ ಚುನಾಯಿತರಾದರೂ ಅವರನ್ನು ಗೌರವಿಸುವ ಗೋಜಿಗೂ ತಹಶೀಲ್ದಾರ ಸಾಹೇಬರು ಹೋಗಿಲ್ಲ. ಬದಲಾಗಿ ತನಗೂ, ಪಕ್ಷಕ್ಕೂ ಸಂಬಂಧವೇ ಇಲ್ಲ ಎಂಬಂತೆ ವರ್ತಿಸಿದ್ದಾರೆ.

ಗಂಗಾಮತಸ್ಥರು ದೂರಾಗಿದ್ದರು

ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಉಸಿರಾಡಿದ್ದು ಪ್ರಬಲರಾಗಿರುವ ಗಂಗಾಮತ ಸಮಾಜ ಹಾಗೂ ಹಿಂದ[...] ಸಮುದಾಯದ ಬೆಂಬಲದಿಂದ. ಕೇವಲ [...] ಮತದಾರರನ್ನು ಹೊಂದಿರುವ ಆಂಧ್ರ ಬಲಿಜಿಗ ಸಮು[...] ತಹಶೀಲ್ದಾರನನ್ನು ಇಲ್ಲಿಯವರೆಗೂ ಗೆಲ್ಲಿಸುತ್ತಾ ಬಂ[...] ಇದೇ ಸಮುದಾಯಗಳು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗಂಗಾ[...] ಸಮಾಜದ ಜಿಪಂ ಸದಸ್ಯ ನಾರಾಯಣಗೌಡ ಪಾ[...] ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಪಕ್ಷದ ವರಿ[...] ಕೂಡ ಅವರನ್ನೇ ಬಿಜೆಪಿಯ ಉದಾಸಿ ವಿರುದ್ಧ ಕಣಕ್ಕಿ[...] ನಿರ್ಧಾರಕ್ಕೆ ಬಂದಿದ್ದರು. ಅಭ್ಯರ್ಥಿಗಳ ಪಟ್ಟಿ [...] ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿತ್ತು. ಕಾಂ[...] ಪಕ್ಷದ ಈ ನಿರ್ಧಾರದಿಂದ ಇಡೀ ಗಂಗಾಮತ ಸಮ[...] ಒಗ್ಗಟ್ಟಾಗಿ ಉದಾಸಿ ವಿರುದ್ಧ ತೊಡೆ ಕೂಡ ತಟ್ಟಿತ್ತು. [...] ಬೆಳವಣಿಗೆ ಉದಾಸಿಯಲ್ಲಿ ನಡುಕ ಹುಟ್ಟಿಸಿತ್ತು.

ಪ್ರತಿ ಬಾರಿ ಒಂದಲ್ಲ ಒಂದು ಗೊಂದಲ ಸೃಷ್ಟಿ[...] ಫಾರ್ಮ್ ಗಿಟ್ಟಿಸಿಕೊಳ್ಳುವ ಕಲೆಯನ್ನು ಕರ[...] ಮಾಡಿಕೊಂಡಿರುವ ತಹಶೀಲ್ದಾರ ಅವತ್ತು ಪಕ್ಷದ ವರಿ[...] ಕೊನೆ ಗಳಿಗೆಯಲ್ಲಿ ಅದೇನು ಬತ್ತಿ ಇಟ್ಟನೋ ಏನ[...] ನಾರಾಯಣಗೌಡರಿಗೆ ಬಿ ಫಾರ್ಮ್ ಸಿಗಲೇ ಇಲ್ಲ. ಇದ[...] ಅಸಮಾಧಾನಗೊಂಡ ಗಂಗಾಮತ ಸಮ[...] ಅನಿವಾರ್ಯವಾಗಿ ತಹಶೀಲ್ದಾರನಿಗೆ ಬೆಂಬಲ ನೀ[...] ಉದಾಸಿಯತ್ತ ವಾಲುವಂತಾಯಿತು. ಇದರಲ್ಲಿ ಉದಾಸಿ[...] ಕೈಚಳಕವೂ ಇದ್ದದ್ದು ರಹಸ್ಯವೇನಲ್ಲ.

ಆದರೆ ಈ ಬಾರಿ ಪರಿಸ್ಥಿತಿ ಬದಲಾಗಿದೆ. ತಹಶೀ[...] ವಿರುದ್ಧ ರಾಜ್ಯ ಗಂಗಾಮತ ಸಮಾಜದ ಅ[...] ಬಿ.ಕೆ.ಮೋಹನ್‌ಕುಮಾರ್ ಎಂಬ ಪ್ರಬಲ ಎದುರಾಳಿ[...] ಟಿಕೆಟ್ ಆಕಾಂಕ್ಷಿಯನ್ನಾಗಿ ಹಿಂದುಳಿದ ಹಾಗೂ ಅಲ್ಪಸಂ[...] ಜನ ಕಣಕ್ಕಿಳಿಸಿದ್ದಾರೆ. ಪ್ರತಿ ಚುನಾವಣೆಯಲ್ಲಿ ಸಲೀ[...] ಸೋಲೊಪ್ಪಿಕೊಳ್ಳುತ್ತಿದ್ದ ತಹಶೀಲ್ದಾರ ಹಾಗೂ ಅ[...] ನೆರವಿನಿಂದ ಸಲೀಸಾಗಿ ಗೆಲ್ಲುತ್ತಿದ್ದ ಉದಾಸಿಗೆ [...] ಬೆಳವಣಿಗೆಯನ್ನು ಕಂಡು ಚುನಾವಣಾ ಪೂರ್ವದ[...] ಸೋಲಿನ ನಡುಕ ಶುರುವಾಗಿದೆ.

ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭ[...] ಕಣಕ್ಕಿಳಿಯುವ ಕಾತುರದಲ್ಲಿರುವ ಕಾಂಗ[...] ಕ್ಯಾಂಡಿಡೇಟ್‌ಗಳಿಗೆ ಪಕ್ಷ ಸಂಘಟನೆಯೇ ತಲೆನೋವ[...] ಪರಿಣಮಿಸಿದೆ. ಆದರೆ ಈ ನಿಟ್ಟಿನಲ್ಲಿ ಮೋಹನ್‌ಕುಮ[...] ಕಳೆದ ತಿಂಗಳು 'ಗಂಗಾಮತಸ್ಥರ ನಡಿಗೆ ಕಾಂಗ್ರೆಸ್ ಕ[...] ಎಂಬ ರಥಯಾತ್ರೆಯನ್ನು ಜಿಲ್ಲೆಯಾದ್ಯಂತ ನಡೆಸಿ ಯ[...] ಆಗಿದ್ದಾರೆ. ಆದರೆ ಇದನ್ನು ಸಹಿಸದ ತಹಶೀಲ್ದಾರ ಮ[...] ಉದಾಸಿ ಗ್ಯಾಂಗ್ ಮೋಹನ್‌ಕುಮಾರ್ ಮನೆ ಮೇ[...] ರಾತ್ರಿ ಹೊತ್ತು ಕಲ್ಲು ತೂರಾಟ ನಡೆಸಿದ್ದಲ್ಲದೆ, ರಥಯಾತ್[...] ಅಲ್ಲಲ್ಲಿ ಅಡ್ಡಿಪಡಿಸಿ ಜನರಿಂದ ಛೀಬ[...] ಹಾಕಿಸಿಕೊಂಡಿದ್ದಾರೆ.

ಕಳೆದ ಎರಡು ವರ್ಷಗಳಿಂದ ಕ್ಷೇತ್ರದಲ್ಲಿ ಸಕ್ರಿಯ[...] ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲೇ ತೊಡಗಿ[...] ಮೋಹನ್‌ಕುಮಾರ್ ಕಾಂಗ್ರೆಸ್‌ನಿಂದ ದೂರವಾ[...] ಬಹುತೇಕ ಎಲ್ಲ ಮುಖಂಡರನ್ನು ಮತ್ತು ಸಮುದಾಯಗ[...] ಈಗ ಒಂದುಗೂಡಿಸಿದ್ದಾರೆ. ಇದೆಲ್ಲದರಿಂದಾಗಿ ಹಾನ[...] ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತೆ ಜೀವ ಪಡೆದಿದೆ.

ಸದ್ಯ ನಡೆಯುತ್ತಿರುವ ಪುರಸಭೆ ಚುನಾವಣೆಯ[...] ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಮೋಹನ್‌ಕುಮ[...] ಪಣತೊಟ್ಟು ಅಖಾಡದಲ್ಲಿ ಉದಾಸಿಗೆ ಸೆಡ್ಡು ಹೊಡೆದಿ[...] ಬಿಜೆಪಿ ತೊರೆದು ಕೆಜೆಪಿ ಸೇರಿರುವ ಉದಾಸಿ ಪುರ[...] ಚುನಾವಣೆಯಲ್ಲಿ ಹೀನಾಯಸೋಲು ಕಾಣುವ ಲಕ್ಷಣಗ[...] ಗೋಚರಿಸುತ್ತಿವೆ.

ಸದ್ಯ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಪಟ್ಟಿ[...] ತಹಶೀಲ್ದಾರನ ಬಾಲಂಗೋಚಿಗಳಾಗಿರುವ ಪ್ರಕಾಶ[...] ಪಾಟೀಲ, ಸತೀಶ್ ದೇಶಪಾಂಡೆ, ನಿವೃತ್ತ ಡಿವೈಎ[...] ಸೋಲಭೇಶ್ವರಪ್ಪ, ನ್ಯಾಯವಾದಿ ಚಂದ್ರಶೇ[...] ಮುದುಕಣ್ಣನವರ, ಶೋಭಾ ಪಾಟೀಲ, ಕೃಷ್ಣಮೂ[...] ವಡ್ಡಿಕೊಪ್ಪ ಎಂಬುವವರು ಇದ್ದಾರೆ. ಆದರೆ ಇವ[...] ಬಹುತೇಕರು ಆಕಾಂಕ್ಷಿಗಳಾಗಿ ಪೈಪೋಟಿ ನಡೆಸಿ ಕೊ[...] ಗಳಿಗೆಯಲ್ಲಿ ತಹಶೀಲ್ದಾರನಿಗೆ ಟಿಕೆಟ್ ದಕ್ಕುವ[...] ನೋಡಿಕೊಳ್ಳುವುದು ಹಿಂದಿನಿಂದಲೂ ನಡೆದುಕೊಂ[...] ಬಂದಿರುವ ಸಂಪ್ರದಾಯ.

ಈ ಬಾರಿ ಕಾಂಗ್ರೆಸ್ ಪಕ್ಷದ ವರಿಷ್ಠರು ಕ್ಷೇತ್[...] ಟಿಕೆಟ್ ಘೋಷಣೆ ಮಾಡುವಾಗ ಇಂತಹ ಸೋಕಾ[...] ಲೀಡರ್‌ಗಳನ್ನು ಸೈಡಿಗಿಟ್ಟು ಮೋಹನ್‌ಕುಮಾರ್ ಅವರ[...] ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿದರೆ ಪಕ್ಷಕ್ಕೇ ಒಳ್ಳೆಯದು[...]

ಕಳೆದ ಹತ್ತು ವರ್ಷಗಳಿಂದ ಇಡೀ ಕ್ಷೇತ್ರವನ್ನು ಹರಿ[...] ಮುಕ್ಕಿ ಹಣದ ಮದದಲ್ಲೇ ಚುನಾವಣೆ ಎದುರಿಸು[...] ಭಂಡ ಧೈರ್ಯದಲ್ಲಿರುವ ಉದಾಸಿ ಮತ್ತು ಆತನ ಮಗ[...] ಸೋಲಿನ ರುಚಿಯನ್ನು ತೋರಿಸಬೇಕಿದೆ. ಸದ್[...] ಪರಿಸ್ಥಿತಿಯಲ್ಲಿ ಅದು ಮೋಹನ್‌ಕುಮಾರ್ ಅವರಿ[...] ಮಾತ್ರ ಸಾಧ್ಯ ಎಂದು ಕಾಂಗ್ರೆಸ್ ವಲಯದಲ್ಲೇ ಪಿಸುಮಾ[...] ಕೇಳಿಬರುತ್ತಿದೆ.

● ಹುರಳಿಕೊಪ್ಪಿ ವಿನಯ[...]

ವಿಡಂಬಾರಿ: ಬೆಂಕಿಯಲ್ಲಿ ಅರಳಿದ...

→ 8

ಹಿಂದುಳಿದವರೇ ನಮ್ಮ ಮೈಮೇಲೆ ಬರುವ ಪರಿಸ್ಥಿತಿಯಿದೆ. ಇದು ನನ್ನನ್ನು ಕಂಗೆಡಿಸಿದೆ.

ಪತ್ರಿಕೆ: ಈಗ ನಿಮ್ಮ ಜೀವನ ದೋಣಿ ಹೇಗೆ ಹೋಗುತ್ತಿದೆ?

ವಿಡಂಬಾರಿ: ನೌಕರಿಯಿಂದ ನಾನು 1995ರಲ್ಲಿ ನಿವೃತ್ತನಾದೆ. ನನ್ನ ನಿವೃತ್ತಿ ವೇತನ ಬರೀ 950 ರೂ! ಸದಾ ಕಾಯಿಲೆಯಿಂದ ಬಳಲುವ ನನ್ನವಳು, ಮಕ್ಕಳ ಶಿಕ್ಷಣ, ಮಗಳ ಮದುವೆ, ಹೊಟ್ಟೆ-ಬಟ್ಟೆ ಎಂದು ಹಣ ನಿಲ್ಲುತ್ತಲೇ ಇರಲಿಲ್ಲ. ಜತೆಗೆ ಅಣ್ಣನೇ 20 ಗುಂಟೆ ತೋಟ ಕಸಿದುಕೊಂಡಿದ್ದ. ಬಾಡಿಗೆ ಮನೆಯ ಮಹಲಾಯ್ತು. ಒಂದು ಸ್ವಂತದ ಗುಡಿಸಲೂ ಕಟ್ಟಲಾಗಲಿಲ್ಲ. ಮಾರಣಾಂತಿಕ ಕಾಯಿಲೆಗೆ ಬಿದ್ದಿದ್ದ ಹೆಂಡತಿಯನ್ನು ಡಾ. ಸರಾಫ್ ಎಂಬ ಸಾಹಿತ್ಯ ಪ್ರೇಮಿ ಶಸ್ತ್ರಕ್ರಿಯೆ ಮಾಡಿಸಿ ಉಳಿಸಿಕೊಟ್ಟರು. ಬದುಕು ಭದ್ರವಾಗಲೇ ಇಲ್ಲ. ಜಲ್ಲಿ ಕ್ರಶರ್‌ನಲ್ಲಿ ಕೆಲಸಕ್ಕೆ ಉಳಿದೆ. ಬರಕತ್ತಾಗಲಿಲ್ಲ. ಆರೋಗ್ಯ ಕೆಟ್ಟಿತು. ಬೀದಿಗೆ ಬಿದ್ದೆ.

ಆಗ ಉತ್ತರ ಕನ್ನಡದ 'ಚಿಂತನ' ಸಂಘಟನೆಯವರು ಅವರ ಪುಸ್ತಕ ಮಳಿಗೆಯಲ್ಲಿ ಆಶ್ರಯ ಕೊಟ್ಟರು. ಅಲ್ಲಿ 9 ವರ್ಷ ನಗುನಗುತ್ತ ಕಳೆದೆ. 'ಚಿಂತನ' ಪುಸ್ತಕದ ಮೂಟೆ ಹೊತ್ತುಕೊಂಡು ಊರೂರು ಅಲೆದು ಮಾರಿದೆ. ವೈಚಾರಿಕ ಹಸಿವಿನವರಿಗೆ ಪುಸ್ತಕ ಮಾರಿದೆ; ನನ್ನ ಅನ್ನದ ಹಸಿವೂ ಇಂಗಿತು. ಹೇಗೋ ದಿನ ಕಳೆಯುತ್ತಿತ್ತು. ಮುಂಬೈನಲ್ಲಿ ನೌಕರಿ ಮಾಡುತ್ತಿದ್ದ ವಿವಾಹಿತ ಮಗ ಇದ್ದಕ್ಕಿದ್ದಂತೆ ತೀರಿಹೋದ! ಆ ಶಾಕ್‌ನಿಂದ ಹೆಂಡತಿ ಶಾಶ್ವತವಾಗಿ ಹಾಸಿಗೆ ಹಿಡಿದಳು. ಅವಳ ಆರೈಕೆಗೆ ತಿಂಗಳಿಗೆ ಸಾವಿರಾರು ರೂ. ಬೇಕು. ಇಂಥ ಸನ್ನಿವೇಶದಲ್ಲಿ ಅನ್ನ ಕೊಟ್ಟ 'ಚಿಂತನ' ಬಿಟ್ಟು ಬರಬೇಕಾಯ್ತು. ಮಗಳು-ಅಳಿಯ-ಮೊಮ್ಮಗ ನಮಗೆ ಆಶ್ರಯ ಕೊಟ್ಟರು. ಈಗ ಹೊನ್ನಾವರದ ಕಡತೋಕ ಎಂಬಲ್ಲಿ ಮಗಳ ಮನೆಯಲ್ಲಿ ಹೆಂಡತಿಯೊಂದಿಗಿದ್ದೇನೆ. ನನ್ನ ಅಸ್ಥಿರ ಬದುಕು ಜರ್ಜರಿತ ಆಗುತ್ತಲೇ ಇದೆ. ಎದೆಯೆತ್ತರಕ್ಕೆ ಬೆಳೆದ ಮೊಮ್ಮಗ- 'ಮೇಲ್ ನರ್ಸ್' ಆಗಿದ್ದವ- ಕೆಲ ವರ್ಷದ ಹಿಂದೆ ಹುಬ್ಬಳ್ಳಿಯಲ್ಲಿ ಸಾವಿಗೀಡಬೇಕಾ? ನನ್ನನ್ನು ತುಂಬ ಕಾಳಜಿಯಿಂದ ಕಾಣುತ್ತಿದ್ದ 24 ಹರೆಯದ ಹುಡುಗನವನು. ಅವನ ತಾಯ್ತಂದೆಯ ನೋವಿನ ಮುಖ ನೋಡಲಾಗದೆ ಚಡಪಡಿಸುತ್ತೇನೆ. ನಾನು ಕಳೆದುಕೊಳ್ಳಲು ಮತ್ತೇನಿದೆ?

ಪತ್ರಿಕೆ: ದಿನಕರ ದೇಸಾಯಿ ನಿಮ್ಮ ಗುರು ಅಂತೀರಿ. ಅವರ ಬಗ್ಗೆ ಹೇಳಿ.

ವಿಡಂಬಾರಿ: ಆ ಮಹಾ ಮಾನವತಾವಾದಿ-ದಾರ್ಶನಿಕರ ಬಗ್ಗೆ ನನಗನಿಸಿದ್ದನ್ನು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಭಾಷಣದಲ್ಲಿ ಹೇಳಬೇಕೆಂದಿದ್ದೇನೆ. ಆಗ ಉತ್ತರ ಕನ್ನಡದಂಥ ತೀರ ಹಿಂದುಳಿದ ಜಿಲ್ಲೆಯ ಮೂಲೆ-ಮೂಲೆಯಲ್ಲಿ ಹೈಸ್ಕೂಲು ತೆರೆದ ವಿದ್ಯೆಯ ದೇವರು. ಅವರು ಕಂಡ ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗದ ಕನಸು ನಾವು ನನಸಾಗಿಸಲು ಪ್ರಯತ್ನಿಸಬೇಕಾಗಿದೆ.

ಪತ್ರಿಕೆ: ಕೊನೆಯ ಪ್ರಶ್ನೆ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಕ್ಕೆ ಏನೆನ್ನಿಸುತ್ತದೆ?

ವಿಡಂಬಾರಿ: ಖಂಡಿತ ಇದು ನನ್ನ ಯೋಗ್ಯತೆಗೆ ಮೀರಿದ ಗೌರವ. ಇದನ್ನು ನಾನು ಕನಸು-ಮನಸಿನಲ್ಲೂ ನಿರೀಕ್ಷಿಸಿದವನಲ್ಲ. ಕನ್ನಡಾಭಿಮಾನಿಗಳ ಔದಾರ್ಯವಿದು. ನನ್ನನ್ನು ಒಬ್ಬ ಮನುಷ್ಯನಾಗಿ ಗುರುತಿಸಿದ್ದಾರಲ್ಲ, ದೇವದಾಸಿಯ ಮಗನ ಸಾಧನೆಯ ಸಾರ್ಥಕತೆಯಿದು. ಆ ತಾಯಿ ಧನ್ಯೆ!!

ನೋಡಿ ಸರ್, ಒಂದು ಮಾತು ಕಟ್ಟಕಡೆಯಲ್ಲಿ ಹೇಳ್ತೇನೆ. ನಾನು ನೋವಲ್ಲೇ ಅರಳಿದವನು, ಬೆಳೆದವನು. ಇಡಗುಂಜಿ ದೇವಾಲಯದಲ್ಲಿ ಹೂಡುತ್ತಿದ್ದ ಒಲೆಯ ಬೂದಿಯಲ್ಲಿ ಇದ್ದಲು ಹೆಕ್ಕಿ ಹಲ್ಲುಜ್ಜಿ ದೇವರ ನಂಬಿದ್ದವನು.. ಸರಣಿ ಕಷ್ಟಗಳು ಎಳೆವೆಯಲ್ಲೇ ಶುರುವಾಗಿತ್ತು. ಪ್ರಾಯಕ್ಕೆ ಬಂದಾಗ ದೇವರು ದುರ್ಬಲ ಘಾತುಕನೆಂದು ತಿರುಗಿಬಿದ್ದೆ. ಇಂಥವನೀಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷನೆಂದರೆ ನನಗೇ ದಿಗಿಲು... ನನಗೆ ಶೃಂಗಾರದ ರಥದ ಮೆರವಣಿಗೆ ಬೇಡ. ಅಡ್ಡ ಪಲ್ಲಕ್ಕಿ ಬೇಡ. ಅನಿಸಿಕೆ ಹೇಳಲು ವೇದಿಕೆ ಒಂದೇ ಸಾಕು. ಬದುಕಿನ ಸಂಧ್ಯಾಕಾಲದಲ್ಲಿ ಸಿಕ್ಕ ಈ ಭಾಗ್ಯಕ್ಕೆ ಎಣೆಯುಂಟಾ?

...ಕ್ಕಮಗಳೂರು: ಕಳ್ಳಿ ಮತ್ತು ಮೂರ್ಖ ಪೊಲೀಸರು

...ಕ್ಕಮಗಳೂರು ಜಿಲ್ಲೆಯಲ್ಲೊಂದು ವಿಲಕ್ಷಣ ಘಟನೆ ... ಬೇಲಿಯೇ ಎದ್ದು ಹೊಲ ಮೇಯ್ದಂತೆ ...ಲ್ಲ ಹಾಗೆ. ಕಾನೂನುಪರಿಪಾಲಕನ ಸೋಗಿನಲ್ಲಿದ್ದ ...ದೀಮನೋರ್ವ ನಗೆಪಾಟಲಿಗೆ ಈಡಾಗಿದ್ದಾನೆ. ...ರ್ಷ ಸಂಸತ್ತಿಗೆ ನಡೆದ ಉಪಚುನಾವಣೆ ವೇಳೆ ... ಪೊಲೀಸ್ ಠಾಣೆಗೆ ವಕ್ಕರಿಸಿಕೊಂಡವನು ಎಸ್ಸೈ ...ರ್. ಈತನ ದರ್ಪ ಕಂಡವರು ಈತನ ಸೊಕ್ಕು ...ಲು ಹವಣಿಸಿದ್ದು ಸುಳ್ಳಲ್ಲ.

...ಕ್ಕೂ ಈ ಘನಂದಾರಿ ಮನುಷ್ಯನಿಗೆ ಎಡತಾಕಿರುವ ...ವೇನು ಗೊತ್ತಾ? ಮಹಿಳೆಯೋರ್ವಳನ್ನು ಅಕ್ರಮ ...ಲ್ಲಿಟ್ಟುಕೊಂಡು ಇಬ್ಬರು ಪೇದೆಗಳೊಂದಿಗೆ ಸೇರಿ ...ಮೇಲೆ ಅತ್ಯಾಚಾರ ಎಸಗಿದ ಗಂಭೀರ ಆರೋಪ.

...ಯು ಈ ಎಡವಟ್ಟನ ವಿರುದ್ಧ ದೂರು ನೀಡಿರುವ ...ಯಾರಂತೀರಾ? ಆಕೆಯ ಪೂರ್ವಾಪರ ತಿಳಿದರೆ ...ಡ ಮೂಗಿನ ಮೇಲೆ ಬೆರಳಿಡುತ್ತೀರಿ. ಮಾಂಗಲ್ಯ ...ವಿಸಿ ಆಲ್ದೂರಿನ ಮೂರ್ಖ ಪೊಲೀಸರ ಕೈಗೆ ...ಬಿದ್ದ ಚಾಲಾಕಿ ಹೆಂಗಸು ಆಕೆ. ಹೆಸರು ರೇಖಾ. ...ಲ್ಲಿಕಾರ್ಜುನ ಮತ್ತು ಪುಟ್ಟ ಮಗುವಿನೊಂದಿಗೆ ...ಲ್ದೂರಿನ ವಿಜಯಪುರ ಬಡಾವಣೆಯಲ್ಲಿ ವಾಸಿಸು... 2011ರಲ್ಲಿ ಅರಸೀಕೆರೆಯ ಮಹಿಳೆಯೊಬ್ಬರಿಗೆ ...ು ಬಳಿದ ಪ್ರಕರಣದಲ್ಲಿ ಒಂದು ವರ್ಷದ ಸಜೆ ...ಂದಿದ್ದಾಳೆ.

...6 ರಂದು ರೇಖಾ ಬಸ್ಕಲ್ ಸಮೀಪದ ...ಬೆಯಲ್ಲಿರುವ ತನ್ನ ತವರುಮನೆ ಹತ್ತಿರ ವಾಸಿಸುತ್ತಿದ್ದ ... ನಿದ್ರೆ ಮಾತ್ರೆ ಕೊಟ್ಟು ಆಕೆಯ ಕೊರಳಿಂದ ...ಸರವನ್ನು ಎಗರಿಸಿದ್ದಳು. ರೇಖಾ ವಿರುದ್ಧ ಆ ...ು ಪತಿ ರಾಜೇಗೌಡ ಆಲ್ದೂರು ಪೊಲೀಸರಿಗೆ ...ೀಡಿದರು. ಪ್ರಕರಣವನ್ನು ಕೈಗೆತ್ತಿಕೊಂಡ ಎಸ್ಐ ...ಾರ್ ಅದೇ ದಿನ ರೇಖಾಳನ್ನು ತನಿಖೆ ನೆಪದಲ್ಲಿ ...ಕ್ಕೆ ಪಡೆದು ಅಕ್ರಮ ಬಂಧನದಲ್ಲಿಟ್ಟ.

...ಗೆ ಬರುವ ಹೊತ್ತಿಗೆ ರೇಖಾ ತಾನು ಕದ್ದಿದ್ದ ... ಸರದ ಬಗ್ಗೆ ಬಾಯ್ಬಿಟ್ಟಿದ್ದಳು. ಸರ ಎಗರಿಸಿ ...ವಿನ ತನ್ನ ಪ್ರಿಯಕರ ನಿರಂಜನನಿಗೆ ಕೊಟ್ಟಿದ್ದಾಗಿ ...ಿವಿ ಊದಿದ್ದಳು. ಆಕೆ ಹೇಳಿದ್ದನ್ನು ಶಿವಕುಮಾರ್


ಗುರುರಾಜ್


ಮಹೇಶ್


ಶಿವಕುಮಾರ್(ಎಸ್ಐ)

ಕಿವಿಯಲ್ಲಿ ಹೂವಿಟ್ಟುಕೊಂಡ ಮೂರ್ಖನಂತೆ ನಂಬಿ ಬಿಟ್ಟ. ತಕ್ಷಣ ನಿರಂಜನನನ್ನು ಮೊಬೈಲ್‌ನಲ್ಲಿ ಸಂಪರ್ಕಿಸಿ ಸರವನ್ನು ಹಿಂದಕ್ಕೆ ಕೊಡುವಂತೆ ರೇಖಾಳ ಮೂಲಕ ಕೋರಿಕೆಯಿತ್ತ. ಬೆಂಗಳೂರಿಗೆ ಬಂದು ಸರ ತೆಗೆದುಕೊಂಡು ಹೋಗುವಂತೆ ನಿರಂಜನ ಹೇಳಿದ. ನಂಬಿದ ಶಿವಕುಮಾರ್ ಫೆ.16ರಂದು ಬೆಂಗಳೂರಿಗೆ ತೆರಳಲು ನಿರ್ಧರಿಸಿದ. ಹೋಗುವಾಗ ಪೇದೆಗಳಾದ ಮಹೇಶ್, ಗುರುರಾಜ್ ಜೊತೆಗೆ ಕೃತಿಕಾ ಮತ್ತು ನಂದಿನಿ ಶೆಟ್ಟಿ ಎಂಬವರನ್ನು ಬಸ್ಸಿಗೆ ಹತ್ತಿಸಿಕೊಂಡ. ಬೆಂಗಳೂರು ತಲುಪುವ ಹೊತ್ತಿಗೆ ಹೈನಾತಿ ನಿರಂಜನನ ಮೊಬೈಲ್ ಸ್ವಿಚ್ ಆಫ್ ಆಗಿತ್ತು.

ಛಲ ಬಿಡದ ತ್ರಿವಿಕ್ರಮನಂತೆ ಎಗರಾಡಿದ ಶಿವಕುಮಾರ್ ನಿಮ್ಹಾನ್ಸ್ ಹತ್ತಿರದ ಲಾಡ್ಜೊಂದರಲ್ಲಿ ಎರಡು ರೂಮುಗಳನ್ನು ಬಾಡಿಗೆಗೆ ಪಡೆದುಕೊಂಡ. ಒಂದರಲ್ಲಿ ಮಹಿಳಾ ಪೇದೆಗಳೊಂದಿಗೆ ರೇಖಾ ಉಳಿದರೆ, ಮತ್ತೊಂದರಲ್ಲಿ ಎಸ್ಸೈ ಶಿವಕುಮಾರ್, ಗುರುರಾಜ್ ಮತ್ತು ಮಹೇಶ್ ವಾಸ್ತವ್ಯ ಹೂಡಿದರು. ಹೇಗಾದರೂ ಸರಿ, ಸರದೊಂದಿಗೆ ನಿರಂಜನನನ್ನು ಸೆರೆ ಹಿಡಿಯಲು ಕಸರತ್ತು ನಡೆಸಿದ ಶಿವಕುಮಾರ್ ಎರಡು ದಿನ ಕಳೆಯುವ ಹೊತ್ತಿಗೆ ಬೆಪ್ಪನಂತಾಗಿದ್ದ. ಬರಿಗೈಲಿ ಹಿಂದಿರುಗಿ ರೇಖಾಳನ್ನು ನ್ಯಾಯಾಲಯಕ್ಕೆ ಒಪ್ಪಿಸಿ ಕೈತೊಳೆದುಕೊಂಡ.

ಜಾಮೀನು ಪಡೆದು ಹೊರಬಂದ ರೇಖಾ ಎಸ್ಪಿ ಶಶಿಕುಮಾರ್ ಎದುರು ನಿಂತು ಬಡಬಡಿಸತೊಡಗಿದಳು. "ಎಸ್ಐ ಶಿವಕುಮಾರ್ ನನ್ನನ್ನು ಅಕ್ರಮ ಬಂಧನದಲ್ಲಿಟ್ಟಿದ್ದಲ್ಲದೇ, ತನಿಖೆ ನೆಪದಲ್ಲಿ ಬೆಂಗಳೂರಿಗೆ ಕರೆದೊಯ್ದರು. ಲಾಡ್ಜಿನಲ್ಲಿ ಮಹಿಳಾ ಪೇದೆಗಳೊಂದಿಗೆ ಮಲಗಿದ್ದ ನನ್ನನ್ನು ಮಧ್ಯ ರಾತ್ರಿ ಎಸ್ಐ ಶಿವಕುಮಾರ್ ಕೊಠಡಿಗೆ ಕರೆಸಿಕೊಂಡ. ಮಹಿಳಾ ಪೇದೆಗಳು ಅಲ್ಲಿಯೇ ಉಳಿದರು. ಆತ ನನ್ನ ಮೇಲೆರಗಿ ಅತ್ಯಾಚಾರ ನಡೆಸಿದ. ಗುರುರಾಜ್, ಮಹೇಶ್ ಕೂಡ ಭಾಗಿಯಾದರು. ಎರಡು ದಿನ ಸಾಮೂಹಿಕ ಅತ್ಯಾಚಾರ ನಡೆಸಿದರು. ಈ ಸಂಗತಿಯನ್ನು ಕೃತಿಕಾ ಮತ್ತು ನಂದಿನಿ ಶೆಟ್ಟಿಗೆ ತಿಳಿಸಿದೆ. ಅವರು ನನ್ನನ್ನು ಗದರಿಸಿ ಹಲ್ಲೆ ನಡೆಸಿದರು. ನನ್ನ ಬಾಯಿ ಮುಚ್ಚಿಸಲು ಪ್ರಯತ್ನಿಸಿದರು. ಇದೆಲ್ಲಾ ಸಹಜ ಅಂದರು. ಹೊರಗಿನವರಿಗೆ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಸಿದರು" ಎಂದಳು ರೇಖಾ.

ವಿಷಯದ ಗಂಭೀರತೆಯನ್ನು ಅರಿತ ಶಶಿಕುಮಾರ್ ತಡಮಾಡದೇ ಆಕೆಯನ್ನು ನಗರ ಪೊಲೀಸ್ ಠಾಣೆಗೆ ಕಳಿಸಿದರು. ಹೀಗಾಗಿ ಶಿವಕುಮಾರ್, ಗುರುರಾಜ್, ಮಹೇಶ್, ಕೃತಿಕಾ ಮತ್ತು ನಂದಿನಿ ಶೆಟ್ಟಿ ವಿರುದ್ಧ ಐಪಿಸಿ 346, 375, 504, 506 ಕಲಂನಡಿ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಅಷ್ಟೇ ಅಲ್ಲ, ಮರು ದಿನ ಐವರು ಸಸ್ಪೆಂಡಾದರು.

ಅತ್ಯಾಚಾರ ಎಸಗಿರುವ ಆರೋಪ ಹೊರಿಸಿರುವ ರೇಖಾಳನ್ನು ಹಾಸನದ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ. ಎಸ್ಐ ಶಿವಕುಮಾರನ ಡಿಎನ್ಎ ಪರೀಕ್ಷೆ ಇನ್ನಷ್ಟೇ ನಡೆಯಬೇಕಿದೆ. ಸದ್ಯ ಕೃತಿಕ ಮತ್ತು ನಂದಿನಿ ಶೆಟ್ಟಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಆದರೆ ಗುರುರಾಜ್ ಮತ್ತು ಮಹೇಶ್ ಈವರೆಗೆ ಯಾರ ಕಣ್ಣಿಗೂ ಕಾಣಿಸಿಲ್ಲ.

ಮೇಲ್ನೋಟಕ್ಕೇ ಶಿವಕುಮಾರನ ಸರಣಿ ತಪ್ಪುಗಳು ಕಣ್ಣಿಗೆ ರಾಚುತ್ತವೆ. ಎಸ್ಐ ಶಿವಕುಮಾರ್ ಮತ್ತು ಪೇದೆಗಳು ಅಹಂಕಾರಿಗಳು ನಿಜ. ಆದರೆ ಕಳ್ಳತನದ ಆರೋಪಿಯ ಮೇಲೆ ಅತ್ಯಾಚಾರ ಎಸಗುವ ಪಾಪಿಗಳಲ್ಲ ಎನ್ನುವವರಿಗೆ ಕೊರತೆಯಿಲ್ಲ. ರೇಖಾ ಶಿವಕುಮಾರನ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ಹೂಡಿದ್ದಾಳೆ. ಹಾಗಂತ ಶಿವಕುಮಾರ ಪರಮ ದಕ್ಷ ಅಧಿಕಾರಿಯೇನಲ್ಲ. ಈತನ ದುರ್ವರ್ತನೆಗಳಿಂದ ಸ್ಥಳೀಯರು ಬೇಸತ್ತಿರುವುದೂ ಸುಳ್ಳಲ್ಲ.


ಒಂದು ಖಚಿತ ಮಾಹಿತಿಯ ಪ್ರಕಾರ ಎಸ್ಐ ಶಿವಕುಮಾರನನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವಲ್ಲಿ ಸ್ಥಳೀಯ ದುಷ್ಕರ್ಮಿಗಳು ಕೈಜೋಡಿಸಿದ್ದಾರೆ. ಯಾಕೆಂದರೆ ಇದೇ ಶಿವಕುಮಾರನ ವಿರುದ್ಧ ಆಲ್ದೂರಿನ ಬಜರಂಗದಳ ಮತ್ತು ಶ್ರೀರಾಮಸೇನೆ ಕಾರ್ಯಕರ್ತರು ಎಗರಾಡುತ್ತಿದ್ದರು. ಮುಸ್ಲಿಂ ಮತ್ತು ಹಿಂದುತ್ವದ ಅಜೆಂಡಾಗಳು ಈ ವ್ಯಾಪ್ತಿಯನ್ನು ಮತೀಯ ಸೂಕ್ಷ್ಮ ಪ್ರದೇಶವನ್ನಾಗಿ ಮಾಡಿಟ್ಟಿವೆ. ತಿಂಗಳಿಗೊಮ್ಮೆ ವಿವಿಧ ಕೋಮುಗಳ ನಡುವಿನ ಬಾಂಧವ್ಯವನ್ನು ಕದಡುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಆದರೆ ಯಾವತ್ತಿಗೂ ಶಿವಕುಮಾರ ಬಜರಂಗಿಗಳ ಅಥವಾ ಎಸ್‌ಡಿಪಿಐ, ಪಿಎಫ್ಐ ಸಂಘಟನೆಗಳ ತಾಳಕ್ಕೆ ತಕ್ಕಂತೆ ಕುಣಿಯಲಿಲ್ಲ. ಇದು ಅವರೆಲ್ಲರ ಹಗೆತನಕ್ಕೆ ಕಾರಣವಾಗಿರುವ ಶಂಕೆಯಿದೆ.

ಒಟ್ಟಾರೆ ಕಳ್ಳಿಯ ಬಲೆಗೆ ಬಿದ್ದ ಎಸ್ಐ ಶಿವಕುಮಾರ ಸ್ವತಃ ಮೂರ್ಖನಾಗಿದ್ದಲ್ಲದೇ ಇತರೆ ನಾಲ್ವರನ್ನು ಮೂರ್ಖರಾಗುವಂತೆ ಮಾಡಿದ್ದಾನೆ. ಖಾಕಿ ಖದರಿನಲ್ಲಿ ನೆಲ ಕಾಣದಂತೆ ದರ್ಪದಿಂದ ಬೀಗುತ್ತಿದ್ದ ಪೊಲೀಸರ ಸದ್ಯದ ಪರಿಸ್ಥಿತಿ ನೋಡಿ ಚಿಕ್ಕಮಗಳೂರಿನ ಜನ ಮುಸಿ, ಮುಸಿ ನಗುತ್ತಿದ್ದಾರೆ.

● ಅಜೀಜ್ ಕಿರುಗುಂದ

ಪರಪ್ಪನ ಅಗ್ರಹಾರದ ಸೈಟು ಹಗರಣ

...ಘಾಟಿ ಮುದುಕನ ಲೂಟಿ ಬುದ್ಧಿ





...ಗಳೂರಿಗೆ ಲ್ಯಾಂಡ್ ಮಾಫಿಯಾ ಹೊಸದೇನೂ ...ತೆಯೇ ಇಲ್ಲಿ ವಿಚಿತ್ರಗಳಿಗೂ ಬರವಿಲ್ಲ. ಸತ್ತವರು ...ಬದು ಖಾತೆ ಮಾಡಿಸಿಕೊಳ್ಳುವುದು, ಹುಟ್ಟದ ...ಸೈಟು ಖರೀದಿಸುವುದು ಸರ್ವೇಸಾಮಾನ್ಯವಾಗಿದೆ. ...ಗೂರಿನ ಘಾಟಿ ಮುದುಕನೊಬ್ಬ ಲೋಕಾಯುಕ್ತ ...ರಿಗೇ ಚಳ್ಳೆ ಹಣ್ಣು ತಿನ್ನಿಸುತ್ತಿರುವ ಕತೆ ...ಾದರೂ ಸತ್ಯ!


...ಾಶಂಕರ್. ಇವರು ಲೋಕಾಯುಕ್ತ ಎಸ್‌ಪಿ ...ಿ. ಈಗ ರಿಟೈರ್ಡ್ ಆಗಿದ್ದಾರೆ. ನಿವೃತ್ತಿ ನಂತರ ...ವಾಗಿ ಬದುಕಬೇಕೆಂದೇ 1992ರಲ್ಲಿ ತಮ್ಮ ಹೆಂಡತಿ ... ಶೀಲಾ ಹೆಸರಲ್ಲಿ ಪರಪ್ಪನ ಅಗ್ರಹಾರದ ಬಳಿ ...ಸೈಟು ಖರೀದಿಸಿದ್ದರು. ಅದು ಆಗ ತಾನೇ ... ಎಕರೆಯಲ್ಲಿ ಮೈದಳೆದಿದ್ದ ಹೊಚ್ಚಹೊಸ ... ಹಾಗಾಗಿ ಇವರ ತಂಗಿ ರಶ್ಮಿ ಸಂಗಮೇಶ್ವರ್ ...ಅದೇ ಲೇಔಟ್‌ನಲ್ಲಿ ಸೈಟು ಖರೀದಿಸಿದ್ದರು. ... ಎನ್ನುವವರ ಹೆಸರಿನಲ್ಲಿದ್ದ ಜಾಗಕ್ಕೆ ಜಿ.ಪಿ.ಎ ಆಗಿದ್ದ ಕೃಷ್ಣಮೂರ್ತಿ ಎನ್ನುವವರು ಸದರಿ ಸೈಟುಗಳನ್ನು ಮಾರಿದ್ದರು.

ಇವರಂತೆಯೇ ಸುಮಾರಷ್ಟು ಜನ ಆ ಹೊಸ ಲೇಔಟ್‌ನಲ್ಲಿ ಸೈಟು ಖರೀದಿಸಿ ಮನೆ ಕಟ್ಟುವ ಕನಸು ಕಾಣುತ್ತಿರುವಾಗಲೇ ಈ ಘಾಟಿ ಮುದುಕ ಎಂಟ್ರಿ ಕೊಟ್ಟಿದ್ದಾನೆ. ಇವನ ಹೆಸರು ಗೋಪಾಲ್ ರೆಡ್ಡಿ. ಬೇಗೂರಿನ ಅಶ್ವತ್ಥಕಟ್ಟೆಯ ವಾಸಿ. ಹೊಸ ಲೇಔಟ್‌ಗೆ ಜಮೀನು ಕೊಟ್ಟಿದ್ದು ಚಿನ್ನಮ್ಮಳ ಮಗ. ಈತನೊಬ್ಬ ಅಪ್ಪಟ ಲ್ಯಾಂಡ್ ಗ್ರ್ಯಾಬರ್. ಮಹಾನ್ ರೌಡಿ ಎಲಿಮೆಂಟು. ಇಡೀ ಜಮೀನಿನ ವ್ಯವಹಾರ 1992ರಲ್ಲೇ ಮುಗಿದುಹೋಗಿದ್ದರೂ ಈ ರೆಡ್ಡಿಗಾರು ಅಧಿಕಾರಿಗಳ ಬಾಯಿಗೆ ತುಪ್ಪ ಮೆತ್ತಿಸಿ 08.02.2006ರಲ್ಲಿ ಜಮೀನನ್ನು ತನ್ನ ಹೆಸರಿಗೆ ಮ್ಯುಟೇಷನ್ ಮಾಡಿಸಿಕೊಂಡಿದ್ದ.

ಕಂಡವರ ಸೈಟಿಗೆ ಬೇಲಿ ಸುತ್ತುವ ಕಾಯಕದ ರೆಡ್ಡಿ ಯಾವಾಗಲೋ ಈ ಕೆಲಸ ಮಾಡಬಹುದಿತ್ತು. ಆದರೆ ಜಮೀನನ್ನು ಮಾರಾಟ ಮಾಡಿದ್ದ ಖುದ್ದು ಚಿನ್ನಮ್ಮಳು ಅಂದರೆ ಇವನ ತಾಯಿ ಬದುಕಿದ್ದರಿಂದ ಬಾಲ ಮುದುರಿಕೊಂಡಿದ್ದ. ಆದರೆ ಚಿನ್ನಮ್ಮ 2005ರಲ್ಲಿ ಸಾವನ್ನಪ್ಪಿದ ಬಳಿಕ ತನ್ನ ಆಟ ಶುರುಹಚ್ಚಿಕೊಂಡ.

ಪಕ್ಕಾ ಡಾಕ್ಯುಮೆಂಟ್‌ಗಳು ಕೈಗೆ ಬರುತ್ತಲೇ ಲೇಔಟ್‌ನಲ್ಲಿ ಬಿಕರಿಯಾಗಿದ್ದ ಸೈಟುಗಳಿಗೆ ಬೇಲಿ ಸುತ್ತಿ ಖರೀದಿಸಿದ್ದವರನ್ನು ಖಾಲಿ ಮಾಡಿಸಲು ನಿಂತ. ಎರಡು ದಶಕದ ಹಿಂದೆ 30/60 ಸೈಟುಗಳ ಬೆಲೆಯೇ ಐವತ್ತು ಅರವತ್ತು ಸಾವಿರ ಇತ್ತು. ಆದರೆ ಈಗ ಅಲ್ಲಿ ಮಾರ್ಕೆಟ್ ಬೆಲೆ ಚದರಡಿಗೆ ಒಂದೂವರೆಯಿಂದ ಎರಡು ಸಾವಿರ ಮುಟ್ಟುತ್ತಿದೆ. ಹೀಗಿರುವಾಗ ಅನಾಮತ್ತು ಐದು ಎಕರೆ ಜಾಗವನ್ನು ಲಪಟಾಯಿಸಿ ಬಿಟ್ಟರೆ ಕೈ ತುಂಬಾ ಕಾಸು ಮಾಡಬಹುದೆನ್ನುವುದು ರೆಡ್ಡಿಯ ಲೆಕ್ಕಾಚಾರ.


ಈ ಮೊದಲು ಸೈಟು ಖರೀದಿಸಿದ್ದ ನಿವೃತ್ತ ಲೋಕಾಯುಕ್ತ ಎಸ್.ಪಿ ಉಮಾಶಂಕರ್ ಮತ್ತು ಇನ್ನುಳಿದ ಖರೀದಿದಾರರು ಅವತ್ತಿನಿಂದ ಪಾಲಿಕೆಗೆ ತೆರಿಗೆ ಕಟ್ಟುತ್ತಲೇ ಬಂದಿದ್ದಾರೆ. ಎಲ್ಲಾ ಸರ್ವೇ ನಂಬರ್‌ಗಳು ಬಿಕರಿಯಾಗಿದ್ದರ ಕುರಿತು ಅವರವರ ಬಳಿ ದಾಖಲೆಗಳೂ ಇವೆ. ಅಲ್ಲದೆ ಸೈಟಿನ ಖಾತೆ ಪತ್ರಗಳೂ ಅವರ ಹೆಸರುಗಳಲ್ಲೇ ಇವೆ. ಆದರೆ ಇವ್ಯಾವುದಕ್ಕೂ ಗೋಪಾಲ್ ರೆಡ್ಡಿ ಕೇರ್ ಮಾಡುತ್ತಿಲ್ಲ. "ನನ್ನಪ್ಪ ಮತ್ತು ಅಮ್ಮ ಯಾರಿಗೂ ಸೈಟ್ ಮಾರಿಯೇ ಇಲ್ಲ. ಹಾಗಾಗಿ ಇದಿಷ್ಟೂ ನನ್ನದೇ ಜಾಗ" ಎಂಬ ತಕರಾರು ತೆಗೆಯುತ್ತಿದ್ದಾನೆ. ಉಮಾಶಂಕರ್ ತರಹದ ಒಂದಷ್ಟು ಸಭ್ಯಸ್ಥ ಮಂದಿ ದಾಖಲೆ, ಖಾತೆ, ತೆರಿಗೆ ಅಂತೆಲ್ಲಾ ಮಾತನಾಡಲು ಶುರು ಮಾಡಿದ ಕೂಡಲೇ ಗೂಂಡಾಗಳನ್ನು ಕರೆತಂದು ಗಲಾಟೆಯನ್ನೂ ಮಾಡಿಸಿದ್ದಾನೆ. ಆದಷ್ಟು ಬೇಗ ಜಾಗದ ತಂಟೆ ಬಿಟ್ಟು ದೂರ ಸರಿಯದಿದ್ದರೆ ಪರಿಣಾಮ ನೆಟ್ಟಗಿರಲಿಕ್ಕಿಲ್ಲ ಎನ್ನುವ ಬೆದರಿಕೆಯನ್ನೂ ಹಾಕಿದ್ದಾನೆ ಈ ಮುದುಕ.


ಎಸ್.ಪಿ. ಉಮಾಶಂಕರ್

ವಿಷಯ ಹೈಕೋರ್ಟ್‌ಗೆ ಎಡತಾಕಿದಾಗಲೂ ಖರೀದಿದಾರರ ಪರವಾಗಿಯೇ ತೀರ್ಪು ಬಂದಿತ್ತು. ಆದರೂ ಪಟ್ಟು ಬಿಡದ ರೆಡ್ಡಿ ಕಾನೂನಿಗೇ ಸವಾಲೆಸೆಯುವಂತೆ ವರ್ತಿಸುತ್ತಾ ಸೈಟು ಖರೀದಿಸಿದವರ ಮೇಲೆ ದಬ್ಬಾಳಿಕೆ ಶುರು ಮಾಡಿದ್ದಾನೆ. ನಿವೃತ್ತ ಪೊಲೀಸ್ ಅಧಿಕಾರಿಗೇ ಕೇರ್ ಮಾಡದ ರೌಡಿ ಮುದುಕನ ತಂಟೆ ಬೇಡವೆಂದು ಸುಮಾರಷ್ಟು ಜನ ತೆಪ್ಪಗಾಗಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಗೋಪಾಲ್ ರೆಡ್ಡಿ ದಿನೇ ದಿನೇ ಗೂಂಡಾ ದಂಡಿನೊಂದಿಗೆ ದಾಂಗುಡಿ ಇಡುತ್ತಿದ್ದಾನೆ. ಬೆಂಗಳೂರಿನ ರಾಯಲ್‌ಸೀಮೆ ಕಡಪ್ ರಿಯಲ್ ಮಾಫಿಯಾದ ತವರು ನೆಲವೆನ್ನುವ ಕುಖ್ಯಾತಿಗೆ ಈಡಾಗಿರುವ ಬೊಮ್ಮನಹಳ್ಳಿ, ಬೇಗೂರಿನಲ್ಲಿ ಗೋಪಾಲ್ ರೆಡ್ಡಿಯಂತ ರೌಡಿ ಎಲಿಮೆಂಟ್‌ಗಳನ್ನು ತಡವಿಕೊಳ್ಳುವ ತಾಕತ್ತು ಪೊಲೀಸರಿಗೂ ಇಲ್ಲವೆನ್ನುವುದು ಮಾತ್ರ ಸತ್ಯ.

● ವರದಿಗಾರ

ಆಳೆತ್ತರದ ತಾರೆಗಳು, ಹತ್ತಾಳೆತ್ತರದ ಕಟೌಟ್



ಕೆಳಜಾತಿಯ ಬಡ ಕುಟುಂಬದಿಂದ ಬಂದು, ಗುಬ್ಬಿ ಕಂಪನಿಯಲ್ಲಿ ಸಣ್ಣ ಸಣ್ಣ ಪಾತ್ರ ಪರಿಚಾರಿಕೆ ಮಾಡ್ಕೊಂಡಿದ್ದ ಮುತ್ತುರಾಜ್, ಕರ್ನಾಟಕದ ಕಣ್ಮಣಿ 'ಅಣ್ಣಾವ್ರು' ಆದ್ರಲ್ಲ ಕಣ್ರಿ! ಇದು ನಿಜಕ್ಕೂ ನಮ್ಮ ಕಾಲದ ಕುತೂಹಲ ಹುಟ್ಟಿಸೋ ಸಾಮಾಜಿಕ ಕಥನ ಅಲ್ವೇನ್ರಿ? ರಜತಪರದೆಯ ಸೀಮೆಯನ್ನೂ ಹರಿದು ಅಣ್ಣಾವ್ರು ಕನ್ನಡದ ಜನರ ಬುದ್ಧಿಭಾವಗಳಲ್ಲಿ 'ನೈತಿಕ ನಾಯಕ' ಆದದ್ದರ ಹಿಂದೆ ಅವರ ವ್ಯಕ್ತಿತ್ವ, ಅವರಿಗೆ ಕೆತ್ತಿ ಕೊಡಲಾದ ಪಾತ್ರಗಳು, ಜನ ಒಳಗೊಳಗೆ ಮೀರಲು ಬಯಸುವ ಆದರೆ ಮೀರಲಾಗದ ನಿತ್ಯದ ಬದುಕಿನ ಅದ್ದಿ ಆತಂಕ, ಕಾಲದಲ್ಲಿ ಬಿಚ್ಚಿಕೊಂಡ ಪ್ರಜಾಪ್ರಭುತ್ವದ ಯುಗಧರ್ಮ...ಇವೆಲ್ಲವುಗಳು ಹ್ಯಾಗ್ಯಾಗೆ ಹೆಣಕೊಂಡು ಮುತ್ತುರಾಜನನ್ನು 'ಅಣ್ಣಾವ್ರು' ಮಾಡಿದ್ವು ಅನ್ನೋದನ್ನು ಪಂಡಿತರು ಅಧ್ಯಯನ ಮಾಡ್ಬೇಕು ಕಣ್ರಿ, ನನ್ನಂಥ ರೀಲುರಂಗೀಲ ಅಲೆಮಾರಿಗೆ ಆಗೋ ಮಾತಲ್ಲ ಅಂತಿಟ್ಕೋಳೋಣ. ಆದ್ರೆ ನಮ್ಮಂಥ ಅಲೆಮಾರಿಗಳೂ ಗಮನಿಸಬೇಕಾದ ಕೆಲವು ಸಂಗತಿಗಳಿವೆ. ಅಣ್ಣಾವ್ರು ಮಾಡಿದ ಪಾತ್ರಗಳನ್ನು ನೋಡಿ: ಬಡವನಾಗಿದ್ದು ಸಿರಿವಂತರಿಗೆ ಸವಾಲಾಗೋನು, ಸಿರಿವಂತನಾಗಿದ್ದೂ ಬಡವರ ನೋವಿಗೆ ಮಿಡಿವ ಹೃದಯವೈಶಾಲ್ಯ ಉಳ್ಳಾತ, ಕೊಡುಗೈ ದಾನಿಯಾಗಿ ತಾನೇ ನಾಶವಾಗ್ತಾನೆ ಆದ್ರೆ ದಾನ ಮಾತ್ರ ನಿಲ್ಲಿಸದ ತ್ಯಾಗಿ; ಹಳ್ಳಿ ಹೈದನಾಗಿ ಪಟ್ಟಣಕ್ಕೆ ಬಂದು ನೊಂದು ಗಟ್ಟಿಯಾಗಿ ಪಟ್ಟಣಕ್ಕೆ ನಿಜ ನಾಯಕತ್ವ ನೀಡೋನು; ನಮ್ಮ ಕರುನಾಡಿಗೆ ಅಪರಿಚಿತವಾದ ಜೇಮ್ಸ್ ಬಾಂಡ್-ಕೌಬಾಯ್ ಪಾತ್ರಗಳನ್ನು ಮಾಡಿ ನಮ್ಮವ್ರೇ ಅನ್ನೋ ಹಾಗೆ ಮಾಡೋ ಮಾಂತ್ರಿಕ ನಟನಾ ಕುಶಲಿ; 'ರಣಧೀರ ಕಂಠೀರವ'-'ಮಯೂರ ವರ್ಮ'-'ಶ್ರೀಕೃಷ್ಣದೇವರಾಯ'; 'ನನ್ನಾಸೆಯ ಹೂವೇ..' ಅಂತ ಸುಂದರಿಯನ್ನು ಶೃಂಗಾರಕ್ಕೆ ಸೆಳೆವ ರಸಿಕ-'ತಾಳು ತಾಳು ನಲ್ಲ ನಾನು ಬರುವೆನು ನಿನ್ನೊಡನೆ...' ಎಂದು ಮಾದಕ ಜಾಲ ಬೀಸುವ ಸುಂದರಿಗೆ ಮರುಳಾಗದ ಸಂಯಮಿ...ಏನ್ಸಾರ್ ಪಾತ್ರಗಳ ಮೆರವಣಿಗೆ! ಒಟ್ಟಿಗೆ 'ಜನರಿಂದ ನಾನು ಮೇಲೆ ಬಂದೆ, ಜನರನ್ನೇ ನನ್ನ ದೇವರೆಂದೆ..' ಎನ್ನೋ ನಿರಹಂಕಾರಿ, ಅಧಿಕಾರ ನಿರ್ಮೋಹಿ 'ಬಹದ್ದೂರ್ ಗಂಡು'. ಇಷ್ಟೆಲ್ಲಾ ಇದ್ದೂ ಅವರ ಪಾತ್ರಗಳು 'ಉಪ್ಪುಂಡ ಮನೆಗೆ ಎರಡು ಬಗೆಯದ' ಸ್ವಾಮಿನಿಷ್ಠ ಸಿರಿವಂತರನ್ನು ಕೆಚ್ಚೆದೆಯಿಂದ ಮನಪರಿವರ್ತಿಸೋ ನ್ಯಾಯವಂತಿಕೆಯವು; ಹೆಂಗಸರು ತಮ್ಮ ಸ್ಥಾನವರಿತು ಗಂಡಸರನ್ನು ಅನುಸರಿಸುವಂತೆ ಬೋಧಿಸುವಂಥವು. ಅರಿತು ನಡೆದರೆ ಚಿನ್ನ-ಇಲ್ಲಾಂದ್ರೆ ಗಂಡಸಿನ ತಾಕತ್ತು ತೋರಿಸಿ ಬಗ್ಗಿಸಬಲ್ಲ 'ಮರ್ಯಾದಾ ಪುರುಷೋತ್ತಮ'- 'ಮುತ್ತಿನಂಥ ಮಾತೊಂದು ಗೊತ್ತೇನಮ್ಮ..' ಅಂದಾಗ ಮುಚ್ಕೊಂಡು ಕೇಳಿದ್ರೆ ಸೈ, ಇಲ್ಲಾಂದ್ರೆ 'ನನ್ನ ನೀನು ಗೆಲ್ಲಲಾರೆ..' ಅಂತ ಬೆತ್ತಲೆ ಸ್ಪರ್ಧೆಯಲ್ಲಿ ಸೋಲಿಸೊ ಆಸಹ್ಯಕ್ಕೂ ಸೈ. ಅಣ್ಣಾವ್ರು ಮಾಡಿದ ಯಾವ ಪಾತ್ರಗಳನ್ನಾದರೂ ನೋಡಿ-ಅವು ನೊಂದವರ ಆಕ್ರೋಶವನ್ನು ಉಗುಳುತ್ತವೆ, ಆದ್ರೆ ವ್ಯವಸ್ಥೆ ಬುಡಮೇಲಾಗದ ಹಾಗೆ ತಡೆಯುತ್ತವೆ. ಹೂಂ ನಾ ಹೇಳೋಕೆ ಹೊರಟಿದ್ದು ಏನಂದ್ರೆ-ಕನ್ನಡ ಭಾಷೇಲ್ಲಿ 'ಡಾ.ರಾಜಕುಮಾರ್' ಅವರ ಹತ್ತಾಳೆತ್ತರದ ಕಟೌಟಿನ ಹಿಂದಿರುವ 'ರಾಜಣ್ಣ'ನೆಂಬ ಮನುಷ್ಯ ಮಾತ್ರನ ನಿತ್ಯಜೀವನದ ಕಥನವನ್ನು, ಯಾರಾದ್ರೂ ದಿಲ್ ಕೋಲ್ ಕೇ ಬರೆದಿದ್ದರೆ...ಮುತ್ತುರಾಜ್ ನಿಜಕ್ಕೂ ಕನ್ನಡದ ಜನಸಾಮಾನ್ಯರಿಗೆ ಹೆಚ್ಚು ಹತ್ತಿರವಾಗಿ, ನಮ್ಮ ಸಮಾಜದ ದೋಖಗಳು ನಮ್ಮ ಅರಿವಿಗೆ ಬರುತ್ತಿದ್ದವು ಅನಿಸೋಲ್ವೇನ್ರಿ? ಒಪ್ಪೊಳಗಿನ ತಪ್ಪುಗಳು ಕಾಣಿಸ್ತಿರಲಿಲ್ವೇನ್ರಿ?

ಬೊಂಬಾಯಿ ರೀಲುರಂಗೀಲ ದುನಿಯಾದ ತಾರೆಗಳ ಬಗ್ಗೆ ಹಲವು ಒಳ್ಳೆಯ ಬರಹಗಳಿವೆ. ತಾರೆಗಳ ವೈಯಕ್ತಿಕ ಬದುಕಿನ ವಿವರಗಳನ್ನೂ ಮೀರಿ ಸಮಾಜದಲ್ಲಿ ಯಜಮಾನಿಕೆಯ ರಂಗುಗಳು ಇರುವ ಪರಿಯನ್ನು ಅವು ತೋರಿಸ್ತವೆ. ನಂಗೆ ತುಂಬ ಮೆಚ್ಚಿನದು ಸಾದತ್ ಹಸನ್ ಮಾಂಟೊ ಬರೆದಿರೊ ಸ್ವಾತಂತ್ರಪೂರ್ವ ಬೊಂಬಾಯಿ ಸಿನಿಮಾ ಜಗತ್ತಿನ 13 ತಾರೆಗಳ ವ್ಯಕ್ತಿಚಿತ್ರವಿರುವ ಪುಸ್ತಕ "ಸ್ಟಾರ್ಸ್ ಫ್ರಂ ಅನದರ್ ಸ್ಕೈ". ಇವುಗಳಲ್ಲಿ ಅಂದಿನ ಜಮಾನಾದ ಮಿಂಚಿಂಗ್ ನಾಯಕರಾದ ಶ್ಯಾಂ ಮತ್ತು ಅಶೋಕ್ ಕುಮಾರರ ವ್ಯಕ್ತಿ ಚಿತ್ರಗಳನ್ನು ವಿಮರ್ಶಕರು ಮಾಂಟೊನ ಪ್ರಖ್ಯಾತ ಕತೆಗಳ ಜೊತೆಗಿಟ್ಟು ವಿಶ್ಲೇಷಣೆ ಮಾಡಿ ಕಾಲದರ್ಶಿ ಬರಹಗಳು ಎಂದಿದ್ದಾರೆ. ಆದರೆ ಇಲ್ಲಿ ಖ್ಯಾತ ನಟಿ ನರ್ಗಿಸ್ ಬಗ್ಗೆ ಮಾಂಟೊ ಬರೆದಿರೋದನ್ನು ಸ್ವಲ್ಪ ವಿವರಿಸುವೆ. ಅದು 1940ರ ದಶಕ. ನರ್ಗಿಸ್ ಆಗಿನ್ನೂ ಬಾಲನಟಿಯಿಂದ ನಾಯಕಿಯಾಗಿ ಬೆಳೆದು ಪ್ರೇಕ್ಷಕರ ಗಮನ ಸೆಳೆಯುತ್ತಿದ್ದವಳು. ಆಕೆ ಆ ಕಾಲದ ವಿಖ್ಯಾತ ಆಸ್ಥಾನ ಗಾಯಕಿ ಜದ್ದನ್ ಬಾಯಿ ಮತ್ತು ಮೋಹನ್ ಬಾಬು ಎಂಬ ಶ್ರೀಮಂತನ ಜೊತೆಗಾರಿಕೆಗೆ ಹುಟ್ಟಿದ ಹುಡುಗಿ. ತಾಯಿ ಮುಸಲ್ಮಾನಳಾಗಿದ್ದು ನರ್ಗಿಸಳ ನಿಜನಾಮ ಫಾತಿಮ ಎಂದಿತ್ತು, ಅದೇನಿದ್ದರೂ ಜದ್ದನ್ ಬಾಯಿಗೆ ಅವಳು 'ಬೇಬಿ'. ಜದ್ದನ್ ಬಾಯಿ ಮಗಳನ್ನು ಬೊಂಬಾಯಿ ಚಿತ್ರರಂಗದಲ್ಲಿ ದೊಡ್ಡ ತಾರೆಯಾಗಿಸುವ ಆಕಾಂಕ್ಷೆಯುಳ್ಳವಳಾಗಿದ್ದು, ಮಗಳ ವೃತ್ತಿಜೀವನದ ಸೂತ್ರವನ್ನು ಕಟ್ಟುನಿಟ್ಟಾಗಿ ತನ್ನ ಕೈಯಲ್ಲಿಟ್ಟುಕೊಂಡಿದ್ದಳು. ಮಾಂಟೊ ಆ ಕಾಲಕ್ಕೆ ಬೊಂಬಾಯಿ ಚಿತ್ರರಂಗದ ಖ್ಯಾತ ಚಿತ್ರಕಥಾಕಾರನಾಗಿದ್ದ. ಅವನ ಸಾಹಿತ್ಯದ ಖ್ಯಾತಿಯೂ ಚಿತ್ರರಂಗದ ಮಂದಿಗೆ ಗೊತ್ತಿತ್ತು, ದೊಡ್ಡ ದೊಡ್ಡ ತಾರೆಯರ ಜೊತೆ ಮಾಂಟೊಗೆ ವೈಯಕ್ತಿಕ ಒಡನಾಟವಿತ್ತು-ಹಾಗಾಗಿ ಜದ್ದನ್ ಬಾಯಿಯದ್ದೂ ಮಾಂಟೊಗೆ ಒಳ್ಳೆ ಪರಿಚಯವೇ. ಪ್ರಸ್ತುತ ಬರಹದಲ್ಲಿ ಮಾಂಟೊ ನರ್ಗಿಸ್ ಹಾಗು ತನ್ನ



ಇಬ್ಬರು ಹದಿಹರೆಯದ ನಾದಿನಿಯರ ಒಡನಾಟದ ಪ್ರಸಂಗವನ್ನು ನಿರೂಪಿಸುತ್ತಾನೆ. ಮಾಂಟೊನಿಗೆ ತಿಳಿಸದೆ, ಅವನ ನಾದಿನಿಯರು ನರ್ಗಿಸಳ ಫೋನ್ ನಂಬರ್ ಸಂಪಾದಿಸಿ, ತಮ್ಮ ನಿಜ ಪರಿಚಯ ತಿಳಿಸದೆ ಅವಳ ಅಭಿಮಾನಿಗಳೆಂದು ಹೇಳಿಕೊಂಡು, ಅವಳ ಸ್ನೇಹ ಸಂಪಾದಿಸಿರುತ್ತಾರೆ. ಫೋನಿನ ಮಾತುಕತೆಯಲ್ಲೇ ಆ ಇಬ್ಬರು ಹುಡುಗಿಯರಿಗೂ, ಅವರಷ್ಟೇ ವಯಸ್ಸಿನವಳಾದ ನರ್ಗಿಸಳಿಗೂ ಆಪ್ತತೆ ಬೆಳೆದುಬಿಟ್ಟಿರುತ್ತದೆ. ನರ್ಗಿಸಳಿಗೆ ಅವರ ಸಂಗದಲ್ಲಿ ತಾನು ಉದಯೋನ್ಮುಖ ತಾರೆ ಎನ್ನೋ ಚಹರೆ ಮರೆಯಾಗಿ, ತನ್ನ ವಯೋಮಾನದ ಉತ್ಸಾಹ-ಹುಮ್ಮಸ್ಸಿನ ಹುಡುಗ ಬುದ್ಧಿ ಉಕ್ಕಿ ಹರಿಯುತ್ತಿರುತ್ತದೆ. ಮಾಂಟೊ ಚಲನಚಿತ್ರ ಕಥೆಯ ಹಾಗೆ ಈ ಮೂವರು ಹುಡುಗಿಯರ ಎರಡು ಭೇಟಿಯ ಪ್ರಸಂಗಗಳನ್ನೂ ಮತ್ತೂ ನರ್ಗಿಸ್ ತಾನು ಪ್ರವರ್ಧಮಾನಕ್ಕೆ ಬರುತ್ತಿರುವ ನಟಿ ಎಂಬ ಜಾಗ್ರತೆಯಲ್ಲಿ ವ್ಯವಹರಿಸಿದ ಮತ್ತೆರಡು ಪ್ರಸಂಗಗಳನ್ನೂ ಒಟ್ಟಿಗೆ ಹೆಣೆದು, ತಾರೆಯೊಬ್ಬಳ ಬದುಕಿನ ಅಂತರಂಗ ಬಹಿರಂಗಗಳ ನಡುವಿನ ಸೆಣಸಾಟವನ್ನು ತನ್ನ ಕಥನ ಕೌಶಲದಲ್ಲಿ ತೆರೆದಿಡುತ್ತಾನೆ.


ಮಾಂಟೊನ ಪ್ರಕಾರ ನರ್ಗಿಸ್ ಸುಂದರಿಯೂ ಅಲ್ಲ, ಅವಳಿಗೆ ನಟನೆಯ ಸಾಮರ್ಥ್ಯವೂ ಇರಲಿಲ್ಲ, ದೊಡ್ಡ ನಟಿಯಾಗಬೇಕೆಂಬ ಅವಸರವಿಲ್ಲದ ಸಂಯ... ಸಂಕಲ್ಪ ಮಾತ್ರವೇ ಅವಳ ಆಸ್ತಿಯಾಗಿತ್ತು, ಜದ್ದನ್ ಬಾಯಿ ತನ್ನ ಮಗ... ಊನಗಳನ್ನು ಹಿಂದಿಕ್ಕಿ ಅವಳಲ್ಲಿದ್ದ ಕೊಂಚ ಪ್ರತಿಭೆಯನ್ನೇ ಮುನ್ನೆಲೆಗೆ ತಂ... ಉದ್ಯಮದಲ್ಲಿ ಚಾತುರ್ಯದಿಂದ ಅವಳನ್ನು ಮೇಲೇರಿಸಲು ಶ್ರಮಿಸುತ್ತಿದ್ದವ... ಮಾಂಟೊ ನರ್ಗಿಸಳ ಸ್ಥಿತಿಯನ್ನು ಹೀಗೆ ವಿವರಿಸುತ್ತಾನೆ: "ಅವಳ ಕಣ್ಣುಗಳ... ನೋವು ಮಡುಗಟ್ಟಿತ್ತು, ಆ ನೋವು ಶಾಂತ ಕೊಳವೊಂದರಲ್ಲಿ ನಿರ್ಗತಿಕವ... ಬಿದ್ದ ಹೆಣದಂತೆ ಇತ್ತು...ತೆರೆಯ ಮೇಲೂ ಗಂಟಲೊಣಗಿ, ಮರುಭೂಮಿಯ... ಮರೀಚಿಕೆ ಬೆನ್ನತ್ತಿದಂಥ ಅವಳ ಮುಖದ ಮೇಲಿನ ನೋವನ್ನು ನಾ... ಕಾಣಬಹುದು...ದಿನಕಳೆದಂತೆ ಆ ನೋವು ವಿಷಾದವಾಯಿತು, ತನ... ಬಾಯಾರಿರುವುದೇ ಭ್ರಮೆ ಎಂದು ಅವಳು ನಂಬುವಂತಾಯ್ತು....ಬದು... ನಡುಗೆಯಲ್ಲಿ ಕತ್ತಲೂ ಬೆಳಕೂ ಇರುತ್ತದೆ, ಅಲ್ಲಿ ಕತ್ತಲೆ-ಬೆಳಕಿನ ಗಡಿಯ... ಗುರುತಿಸಲೂಬಹುದು. ಆದರೆ ಚಿತ್ರರಂಗ ಕೋರೈಸುವ ಬೆಳಕಿನಲ್ಲಿ ಎಲ್ಲವ... ಮಾಯವಾಗಿ ಝಗಮಗ ಬೆಳಕೊಂದೇ ತೋರುತ್ತದೆ."

ನಾನು ಈ ಬರಹವನ್ನು ಓದುವ ಹೊತ್ತಿಗೆ ನರ್ಗಿಸ್ ರಾಜಕಪೂರ... ಜೊತೆಗೆ ರಮ್ಯ ಪ್ರಣಯದ ಚಿತ್ರಗಳ ನಾಯಕಿಯಾಗಿ ('ಬರಸಾತ್' ಚಿತ್ರದ... ರಾಜಕಪೂರ್ ನರ್ಗಿಸಳನ್ನು ಅಪ್ಪಿದ ಚಿತ್ರ ಅವನ ಆರ್.ಕೆ.ಫಿಲ್ಮ್ಸ್‌ನ ಲಾಂಛನವ... ಆಗಿಬಿಟ್ಟಿತು), ನೋವುಂಡು, ಎದೆಗುಂದದೇ ಬದುಕಿ, ನ್ಯಾಯವಂತಿಕೆಗಾ... ಯಾವ ತ್ಯಾಗಕ್ಕೂ ಸಿದ್ಧಳಾದ 'ಮದರ್ ಇಂಡಿಯಾ' ಆಗಿ (ಭಾರತ... ರಾಷ್ಟ್ರೀಯತೆಯ ನಿರೂಪಣೆಗೆ ಈ ಸಿನಿಮಾ ಒದಗಿಬಂತು), ಸುನೀಲ್ ದತ್... ಜೊತೆ ಮದುವೆಯ ನಂತರ ರಾಷ್ಟ್ರೀಯ ಭಾವೈಕ್ಯತೆಗಾಗಿ ದುಡಿವ ಸಮಾ... ಸೇವಕಿಯಾಗಿ ನರ್ಗಿಸ್ ದಂತ ಕತೆಯಾಗಿಬಿಟ್ಟಿದ್ದಳು.

ಮಾಂಟೊ ನರ್ಗಿಸಳ ಈ ಬಗೆಯ ಖ್ಯಾತಿಯನ್ನು ಕಾಣಲು ಬದುಕಿರಲಿ... ನಿಜ. ಆದರೆ, ನರ್ಗಿಸಳ ಈ ಸಾರ್ವಜನಿಕ ಚಿತ್ರದ ಜೊತೆ ಮಾಂಟೊನ ... ವ್ಯಕ್ತಿ ಚಿತ್ರವನ್ನು ಓದಿದಾಗ, ಅವನ ನಿರೂಪಣೆಗೆ ಲೋಕ ಟೀಕೆಯ ಹೊ... ಮೊನಚು ಬಂದುಬಿಡುತ್ತದೆ.

ಆದರೆ, ಮೊನ್ನೆಯಷ್ಟೇ ಈ ಬರಹವನ್ನು ಓದಿದ ನನ್ನ ಗೆಳೆಯರೊಬ್ಬ... "ಅಲ್ರಿ, ಮಾಂಟೊ ನರ್ಗಿಸನ್ನು ಎಷ್ಟು ಅಸಡ್ಡೆಯಿಂದ ಕಾಣ್ತಾನಲ್ಲ. ಸೌಗಂಧಿಯಂ... ಕತೆ ಬರೆದ ಮಾಂಟೊ ಏನ್ರೀ ಇವನು! ನಂಗೆ ಸಿಕ್ಕಾಪಟ್ಟೆ ನಿರಾಶೆಯಾಯ್ತು..." ಅಂತ ನನ್ನಲ್ಲಿ ಹೇಳಿದರು. ಅವರ ಅಭಿಪ್ರಾಯ ಕೇಳಿ ನಾನು ಮತ್ತೆ ಪುಸ್... ಎತ್ತಿಕೊಂಡೆ. ಸಮಾಜ ಕೀಳು ಹುಟ್ಟಿನವಳೆಂದು ಕಾಣುವ ಹೆಣ್ಣಿನ ಬಗ್... ಕಥನಾ ಕೌಶಲದ ಸರದಾರನಾದ ಲೇಖಕನೊಬ್ಬನ ಬರಹವಾಗಿ ಓದತೊಡಗಿದ... ಹೌದು, ನನ್ನ ಗೆಳೆಯರು ಹೇಳಿದ್ದರಲ್ಲಿ ಹುರುಳಿದೆ ಅನಿಸಿತು. ಮಾಂಟೊ... ನರ್ಗಿಸಳ ವೈಯಕ್ತಿಕ ಬದುಕಿನ ನೋವು ಮತ್ತು ಸಾರ್ವಜನಿಕ ಬದುಕಿ... ಡಂಬಾಚಾರವನ್ನು ಸೂಕ್ಷ್ಮದಲ್ಲಿ ನಿರೂಪಿಸುತ್ತಾನೆ. ಆದರೆ, ಅವನ 'ಸೌಗಂಧಿ'... 'ಕಾಲಿ ಸಲ್ವಾರ್' ಕತೆಗಳಲ್ಲಿ ಇರುವಂತೆ ಸಮಾಜ ಕೀಳೆಂದು ಭಾವಿಸು... ಹೆಣ್ಣುಗಳ ಜೊತೆ ನಿರೂಪಕ ಎಳೆ ಎಳೆಯಾಗಿ ಹೆಣೆದುಕೊಳ್ಳುವ ಆತ್... ಸಂಬಂಧ ಇಲ್ಲಿಲ್ಲ. ಮಾಂಟೊ ಈ ಬರಹಕ್ಕೆ ಕೊಟ್ಟಿರುವ ತಲೆಬರಹ... 'ನರ್ಗಿಸ್-ಸದಾ ಹಸಿರಾಗಿರೋ ಆತ್ಮರತಿಯವಳು'! ಅಲ್ಲಿ ನಮಗೆ ಕಾಣೋದು... ಮಾಂಟೊನ ನೋಟದ ಚೌಕಟ್ಟಿನಲ್ಲಿ ಕಾಣೋ ನರ್ಗಿಸ್; ಈ ಚಿತ್ರದ... ಮಾಂಟೊನ ಅಹಂನ ಉಡಾಫೆ, ಅವನೊಳಗೆ ಸುಪ್ತವಾದ ಸಮಾಜದ... ಪೂರ್ವಾಗ್ರಹಗಳು ಎಲ್ಲಾ ಕೆಲಸ ಮಾಡಿವೆ. ಆದರೆ ಮಾಂಟೊ ತ... ಪೂರ್ವಾಗ್ರಹಗಳನ್ನು ಮುಚ್ಚಿಡಲು ಹೋಗೊಲ್ಲ-ಅವನ ನೇರ, ಹರಿತ ನಿರೂಪ... ಅಂತರಂಗ-ಬಹಿರಂಗದ ಕೊಳಕುಗಳು ತಾವಾಗಿಯೇ ಕಂಡುಬಿಡುವಷ್ಟು... ಪಾರದರ್ಶಕ. ಮಾಂಟೊ ಹೀಗೆ ತನ್ನೊಳಗಿನ ಭಾವವನ್ನೂ ಮುಚ್ಚಿಟ್ಟುಕೊಳ್ಳದೆ... ಬರೆದು, ಅದನ್ನು ಕಂಡು ತಾನೇ ಬೆಚ್ಚಿಬಿಲ್ಲ, ತನ್ನ ಅಂತರಂಗವನ್ನು 'ಸೌಗಂಧಿ'ಯ... ಜೊತೆ ಲೀನವಾಗಿಸಿಕೊಂಡು ವಿಮೋಚನೆ ಯಾಚಿಸುವಂಥ ಲೇಖಕ ಅನಿಸಿತು... ಹೂಂ.... ನಮ್ಮ ಮೆಚ್ಚಿನ ಲೇಖಕನ ತಪ್ಪುಗಳೂ ನಮಗೆ ಹೀಗೆ ಕಾಣಬೇಕು... ಆಗ ಅವನ ಬರಹವೂ ಕಾಲದ ಪ್ರೊಜೆಕ್ಟರ್‌ನಿಂದ ನಮ್ಮ ಬುದ್ಧಿಭಾವದ... ಪರದೆಯ ಮೇಲೆ ಭಿನ್ನ ರಂಗುಗಳಲ್ಲಿ ಪ್ರದರ್ಶನವಾಗಬಹುದಲ್ಲವೆ ಅಂತಲೂ... ಅನಿಸಿತು. ಮಾಂಟೊನನ್ನು ಮೆಚ್ಚುತ್ತಲೇ ಅವನ ಬರಹವೊಂದರಲ್ಲಿನ ಊನವನ್ನು... ಎತ್ತಿ ತೋರಿದ ಗೆಳೆಯರಿಗೆ ಸಲಾಂ; ಇಂಥ ಅರಿವನ್ನು ಪ್ರಚೋದಿಸಬಲ್ಲ... ಮಾಂಟೊನ ಕಥನಾ ಕಲೆಗೆ ಸಲಾಂ.

ಲೋಲಾಕು



ಅಸಹನೆಯ ಉತ್ತುಂಗತೆ
ಪರಕೀಯಭಾವದ ಜೀವಗಳ ಸಂತೆ
ಒಮ್ಮಿಂದೊಮ್ಮೆಲೆ ಸೇಡಿಗೆ ಜೀವ ಬಂದಂತೆ
ಕುಣಿಯತೊಡಗುತ್ತಿದೆ ದ್ವೇಷ!
ಅಜ್ಞಾನಕ್ಕೆ ಅಜ್ಞಾನ ಸೋಕಿದಂತೆ...

ಮರ್ಮಕ್ಕೆ ಪೆಟ್ಟುಂಡ ಹಾವುಗಳು ಹೆಡೆಯೆತ್ತಿ ಭುಸುಗುಟ್ಟಿದಂ
ಆಗಣಿತ ಹಿಂಸೆಯ ಕುಣಿತ
ಕೊಂಬಿಗೆ ಕೊಂಬು ಢಿಕ್ಕಿಯಾದಂತೆ
ಮದವೇರಿದ ಟಗರುಗಳ ಮುಖಾಮುಖಿ
ಯಲ್ಲಿ ಅಪರಾಡಿಸುವ ಹಾಗೆ ಆಡುವ ಗೊಂಬೆಗಳು
ಯಾರದೋ ವಿಕೃತ ಅಟ್ಟಹಾಸಕ್ಕೆ ಕೊನೆಯುಸಿರೆಳೆವ
ಮುಗುದ ಜೀವಗಳು

ಅಲ್ಲಲ್ಲಿ ಕುಣಿಕೆಗೆ ಬೆಣ್ಣೆಸವರಿ ಜೀವ ತೆಗೆಯುವರು ಒಂದು ಕಲೆಯೆಂಬಂತೆ!
ಧಮಾರ್ ಎಂದು ಸ್ಫೋಟಿಸಿ ಕಿವಿಗಡಚಿಕ್ಕುವ ಸಪ್ಪಳದೊಂದಿಗೆ
ಚೆಲ್ಲಾಪಿಲ್ಲಿ ಮಾಡುವರು ದೇಹ, ಮನ, ಆತ್ಮಗಳ ಮತ್ತೊಂದೆಡೆ...
ಇಂದು ಇಲ್ಲಿ, ನಾಳೆ ಮತ್ತೆಲ್ಲಿಯೋ?

'ಅಸುರಕ್ಷಿತ' ಎಂಬ ಪದಕ್ಕೆ ಅರ್ಥವು ಬಂದು
ಗಡಗಡನೇ ನಡುಗಿಸಿ ಜೀವ
ಗೃಹಬಂಧನಕ್ಕೊಳಪಡಿಸಿ
ತಡೆದಿದೆ ಎಲ್ಲಿಯೂ ಹೋಗದಂತೆ
ಬದಲಾಗಿದೆ ಸ್ಥಿತಿ ಇದ್ದಕ್ಕಿದ್ದಂತೆ

ಇಂಥದ್ದರ ನಡುವಿನ ಜೀವನ
ಎರಡು ಅಭದ್ರ ಕೊನೆಗಳ ನಡುವೆ
ಜೀಕುತ್ತಿರುವ ಲೋಲಾಕು...

● ಡಾ.ಅಮೀರುದ್ದೀನ್ ಖಾಜಿ

...ಜಯಲಲ್ತ ಕೇಳಿದಾಗ ನೀವೂ ನೀರು ಬಿಟ್ಟಿದ್ರಲ್ಲ ಸಾರ್

...ಕಾವೇರಿ ನೀರಿನ ಐತೀರ್ಪು ಬಂದನಂತರ ಏನೋ ...ಬ ತೀರ್ಪು ಅಂತೂ ಬಂತಲ್ಲಾ ಮುಂದೆ ಬರೋದನ್ನ ...ದವಿಸೋಣ ಎಂಬಂತೆ ಕರ್ನಾಟಕದ ಜನತೆ ಬಿಸಿಲಿಗೆ ...ಹಾರಿದ್ದರೂ ಸುಮ್ಮನಿದ್ದಾರಂತಲ್ಲಾ. ಇದನ್ನು ಕಂಡು ...ರಿ ನದಿಯೊಳಗಣ ಬಂಡೆಯಂತೆ ಕಾಣುವ ...ಗೌಡರನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ. ...ದರೆ ಗೌಡರು ಕಾವೇರಿ ವಿಷಯದ ...ಗಳನ್ನು ಹೊತ್ತು ದೃಶ್ಯ ಮಾಧ್ಯಮದವರ ...ದಿಗೆ ಹೋಗುತ್ತಿರುವಾಗ ನಾವೂ ...ನ್ನು ಹಿಡಿದು ಮಾತನಾಡಿಸಿದರೆ ಹೇಗೆ ...ತು. ಫೋನ್ ಮಾಡಲಾಗಿ ರಿಂಗಾಯ್ತು. ...ಂಗ್ ಟೋನ್: "ಕೊಡಗಿನ ಕಾವೇರೀ ...ದೀ ನೀ ಒಲವಿನ ಸಿಂಗಾರಿ...."

"...ಹಲೋ?"

"...ಹಲೋ ಸಾರ್, ನಾನು ಯಾಹೂ."

"...ನಾನು ದತ್ತ ಮಾತಾಡ್ತಯಿರೋದು."

"...ದತ್ತಾನಾ? ಈ ಬಾರಿ ನೀವು ಕಡೂರಲ್ಲಿ ... ಕಂಡ್ರಿ."

"...ಎಲ್ಲಾ ದೇವೇಗೌಡ್ರ ಆಶೀರ್ವಾದದ ಫಲ ...ಹೂ. ಕೊಟ್ಟೆ ಇರಿ ಗೌಡ್ರಿಗೆ... ...ಡಿ."

"...ಹಲೋ, ನಮಸ್ಕಾರ ಸಾರ್. ನಾನು ...ಹೂ."

"...ಹೇಗಿದ್ದಿರಿ ಗುರುವೇ? ಗೌರಿ ಸಿಸ್ಟರ್ ...ದಾರೆ?"

"...ಚೆನ್ನಾಗಿದಾರೆ ಸಾರ್. ಕಾವೇರಿ ಐತೀರ್ಪಿನ ಬಗ್ಗೆ ...ಗೆ ಫೋನ್ ಮಾಡಿ ಅಂದ್ರು."

"...ಕೇಂದ್ರ ಸರಕಾರದಿಂದ ಆಗಿರತಕ್ಕಂತ ಅನ್ಯಾಯವನ್ನು ...ೂ ತಡಿಯೋದಕ್ಕೆ ಆಗಲಿಲ್ಲವಲ್ಲ ಹೇಳಿ."

"...ಈ ದೇಶದ ಮಾಜಿ ಪ್ರಧಾನಿಗಳ ಕೈಲೇ ಆಗಲಿಲ್ಲ ..., ನಾವು ಇನ್ನಾರನ್ನ ದೂರಣ ಸಾರ್?"

"...ಹಾಗಲ್ಲ, ಗರಿಗರಿಯಾದ ಬಟ್ಟೆ ಹಾಕೊಂಡು ...ನಾಡಕ್ಕಂತ ರಾಜಕಾರಣಿಗಳು ಪ್ರಾಮಾಣಿಕವಾದ ...ತ್ನ ಮಾಡಿದ್ದೇ ಆದ್ರೆ ಅನ್ಯಾಯವನ್ನು ತಡೆಯ ...ದಿತ್ತು."

...ಗರಿಗರಿ ಡ್ರೆಸ್ ಹಾಕೊಂಡೇ ಬೆಂಗಳೂರಿನಿಂದ ...ದವರೆಗೂ ಪಾದಯಾತ್ರೆ ಮಾಡುವಾಗ ನೀವು ...ವೇರಿಗೇ ಹೋಗಿ ಪೂಜೆ ಮುಖಾಂತರ ಪ್ರತಿಭಟಿಸಿದ್ರಿ. ಆ ತರ ಏನಾದ್ರು ಮಾಡಬೇಕಿತ್ತು ಸಾರ್."

"ಹತ್ತೊಂಬತ್ತು ನೂರ ಅರವತ್ತೆರಡನೆ ಇಸವಿಯಿಂದ ಈ ದೇವೇಗೌಡ ಕಾವೇರಿ ವಿಷಯದಲ್ಲಿ ಹೋರಾಡ್ತ ಬಂದಿದಾನೆ. ಈಗ್ಲೂ ಹೋರಾಡ್ತನೆ."

"ಇದೊಂದು ವ್ಯರ್ಥವಾದ ಹೋರಾಟ ಅಲ್ಲವಾ ಸಾರ್. ಒಂಥರ ಕಂಬಳಿಲಿ ನೀರ ತಗಂಡೋದಂಗೆ."



"ಕಾವೇರಿ ಈ ನಾಡನ್ನು ಆಳಿದ ಎಲ್ಲ ನಾಯಕರಿಂದ್ಲೂ ಕಡೆಗಣನೆಗೆ ಒಳಗಾಗಿದೆ. ಪಿ.ವಿ. ನರಸಿಂಗರಾವ್ ಜಯಲಲಿತ ಕೇಳಿದರು ಅಂತ ಹೇಳಿ ನೀರು ಬುಟ್ರು."

"ನೀವೂ ಬುಟ್ರಲ್ಲ ಸಾರ್. ಮುಖ್ಯಮಂತ್ರಿ ಆಗಿದ್ದಾಗ ಜಯಲಲ್ತ ಕೇಳಿದ್ಲು ಅಂತ ರಾತ್ರಿ ವೊತ್ತೆ ಬಿಟ್ಟಿದ್ರಿ. ಬೆಳಿಗ್ಗೆ ಎದ್ದು ನೋಡಿದಾಗ ನದಿ ಪಾತ್ರದ ಗರಿಕೆ ಹುಲ್ಲು ಒದ್ದೆಯಾಗಿದ್ದೊ!"

"ಇಲ್ಲಿ ಕೇಳ್ರಿ, ನೀವೇ ಮುಂದೆ ಮುಂದೆ ಮಾತಾಡಿದ್ರೆ ನಾನು ಫೋನ್ ಕಟ್ ಮಾಡಬೇಕಾಗುತ್ತೆ. ಕೇಂದ್ರ ಸರಕಾರ ಸಂಖ್ಯಾಬಲವನ್ನ ನಂಬಿಕೊಂಡು ಆಡಳಿತ ನಡೆಸಬೇಕಾದಂತಹ ಅನಿವಾರ್ಯ ಪರಿಸ್ಥಿತೀಲಿ ಕೆಲವೊಂದು ಹೊಂದಾಣಿಕೆ ಮಾಡಿಕೊಬೇಕಾಗುತ್ತೆ."

"ಅದು ನಿಜ ಸಾರ್. ನೀವು ಪ್ರಧಾನಿಯಾಗಿದ್ದಾಗ ಇಲ್ಲಿ ಜೆ.ಹೆಚ್. ಪಟೇಲ್ರು ಮುಖ್ಯಮಂತ್ರಿ ಆಗಿದ್ರು. ಆದ್ರು ಕಾವೇರಿಲಿ ನೀರು ಹರಿತು. ಪಟೇಲ್ರನ್ನ ಕೇಳಿದ್ರೆ 'ಅದೇನೊ ನನಿಗೊತ್ತಿಲ್ಲಪ್ಪ. ಪ್ರಧಾನಮಂತ್ರಿ ಆದೇಶಕೊಟ್ಟರಂತೆ, ಇವ್ರುರು ನೀರು ಬುಟ್ರಂತೆ. ಅವ್ರುರ ನದಿ, ಅವ್ರುರ ಆಜ್ಞೆ, ಮಧ್ಯದಲ್ಲಿ ನಂದೇನು. ಇದು ಜಯಲಲಿತ ದೇವೇಗೌಡನ ಪರಸನಲ್ ಮ್ಯಾಟ್ರು' ಅಂತ ನಗಾಡಿದ್ರು ಸಾರ್."

"ತೀರಿಕೊಂಡವರ ಬಗ್ಗೆ ಹಗುರವಾಗಿ ಮಾತನಾಡ ಬಾರ್ದು. ಪಾಪ ಇವತ್ತ ನಿಜಲಿಂಗಪ್ಪನವರೂ ಇಲ್ಲ. ಅವ್ರುರೇನು ಮಾಡಿದ್ರು ಅಂದ್ರೆ ಕರುಣಾನಿಧಿ ಭೇಟಿ ಮಾಡಿ ಎಷ್ಟು ನೀರು ಬೇಕು ಕೇಳಿ ಬಿಡ್ತಿನಿ ಅಂದಿದ್ರು. ಎಲ್ಲ ಮುಖ್ಯಮಂತ್ರಿಗಳಿಂದ್ಲೂ ಅನ್ಯಾಯ ಆಗಿದೆ."

"ಎಲ್ಲಾರಿಂದ್ಲೂ ಅನ್ಯಾಯವಾಯ್ತು ಅಂದ್ರೆ ನೀವು ಪಾಲ್ದಾರರಲ್ಲವ ಸಾರ್. ಮತ್ಯಾಕೆ ಎಲ್ಲರ ಮೇಲೆ ಐತೀರ್ಪಿನ ಅನಾಹುತದ ದೂರನ್ನ ಹೊರುಸ್ತೀರಿ?"

"ನೋಡಿ, ಕೆಲವರು ಹೆಚ್ಚು ತಪ್ಪಿತಸ್ಥರು. ಇರತರೆ. ಗೊತ್ತಿದೆಯಾ ನಿಮಗೆ, ಗಾಂಧಿ ಸಾಹಿತ್ಯ ಸಂಘದವರು ಸುಪ್ರೀಂಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದಾಗ ರಾಜ್ಯ ಸರಕಾರ ತಡವಾಗಿ ಎಚ್ಚೆತ್ತುಕೊಂಡು ಎಡವಟ್ಟು ಮಾಡಿಕೊಂಡಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಧರ್ಮಸಿಂಗ್ ಚುರುಕಾಗಿ ಕೆಲಸ ಮಾಡಲಿಲ್ಲ."

"ಸಾರ್, ಧರ್ಮಸಿಂಗ್ ಎಮ್ಮೆ ಬೆಣ್ಣೆ ಮುದ್ದೆ ತರದೊರು. ಕುಂತ್ರೆ ಏಳದು ಕಷ್ಟ. ಎದ್ರೆ ನಿಂತಿಗಳದು ಕಷ್ಟ. ಆದ್ರು ಬೆಳಗಾದಕೂಡ್ಲೆ ತಮ್ಮ ಮನೆಗೆ ಹಲವಾರು ಫೈಲ್ ತರ್ತಿದ್ದರಂತೆ. ಆಗ ನೀವು ಗಾಂಧಿ ಸಾಹಿತ್ಯ ಸಂಘದ ಅರ್ಜಿಗೆ ಕೂಡಲೇ ಬೆಂಬಲ ಕೊಡಬೇಕು ಅಂತ ಹೇಳಬೇಕಾಗಿತ್ತ ಅನ್ನೊ ವಾದ ಇದೆ ಸಾರ್."

"ವಾದಕ್ಕೇನಂತೆ, ಮಾಡ್ತರೆ. ಜೆಡಿಎಸ್ ಬಿಟ್ಟು ಕಾಂಗ್ರೆಸ್ಸಿಗೆ ಹೋದ ಮಹಾ ನಾಯಕರು ಜೆಡಿಎಸ್ ಪಕ್ಷವನ್ನು ನಿರ್ನಾಮ ಮಾಡತಕ್ಕಂತ ಆಲೋಚನೆ ಬಿಟ್ಟು ಕಾವೇರಿ ನದೀ ನೀರಿನ ಬಗ್ಗೆ ಯೋಚನೆ ಮಾಡಬೇಕಾಗಿತ್ತು."

"ಅಲ್ಲಿಗೆ ನೀವು ಜೆಡಿಎಸ್ ಉಳಿಸಿಕೊಳೋದಕ್ಕೆ ಹೋರಾಡಿದ್ರೆ ಹೊರತು ಕಾವೇರಿ ಬಗ್ಗೆ ಹೋರಾಡಲಿಲ್ಲ ಅನ್ನಂಗಾಯ್ತದಲ್ಲಾ ಸಾರ್."

ಥೂತ್ತೇರಿ

ಯಾಹೂ

"ನಾವು ಅಷ್ಟು ಹೋರಾಡಲಾಗಿ ಲೋಕಸಭೇಲಿ ಮೂರು ಸೀಟಾದ್ರು ಇವೆ. ಆ ಸಂಖ್ಯೆಯನ್ನ ಮುಂದಿಟ್ಟುಕೊಂಡು ಹತ್ತೊಂಬತ್ತು ಸಂಖ್ಯೆ ಎದುರು ಹೋರಾಡಕ್ಕಾಗಲ್ಲ ಗೊತ್ತಿದೆಯಾ."

"ನೀವು ಪ್ರಧಾನಿಯಾದಾಗ ಹದಿನೆಂಟು ಜನ ಎಂ.ಪಿ.ಗಳು ಗೆದ್ದಿದ್ರು. ಅದೂ ನಿಮ್ಮ ಲೀಡರ್‌ಷಿಪ್ಲಿ. ಈಗ ಮೂರು ಜನವ್ರೆ ಅಂದ್ರೇ ಅದಕ್ಕೆ ಯಾರು ಹೊಣೆ ಸಾರ್? ನೀವೇ ಹೊಣೆಗಾರರಲ್ವೇ? ಇವತ್ತು ನಿಮ್ಮ ಪಾರ್ಟಿ ಒಬ್ಬ ಮಾಜಿ ಪ್ರಧಾನಿ ಮತ್ತೆ ಮಾಜಿ ಮುಖ್ಯಮಂತ್ರಿ ಲೀಡರ್‌ಸಿಪ್ಪಿನಲ್ಲಿ ಇಪ್ಪತ್ತಾರು ಪ್ಲಸ್ ಮೂರು ಅನ್ನೋ ಅಂಕಿಗೆ ಬಂದಿದೆ. ಇದಕ್ಕೆ ನೀವೇ ಕಾರಣ ಅಲ್ಲವ ಸಾರ್? ಹೋಗ್ಲಿ ಇಡೀ ರಾಜ್ಯದ ಎಂಪಿಗಳನ್ನ ಕರೆದು, ನೀವೇ ಮುಂದೆ ನಿಂತು, ಕಾವೇರಿ ಐತೀರ್ಪಿಗೆ ಒತ್ತಡ ತರಬಹುದಿತ್ತು, ಅದ್ಯಾವುದನ್ನು ಮಾಡದೆ, ತೀರ್ಪಿನ ನಂತರ ಅದಕ್ಕೆ ಎಲ್ಲಾ ರಾಜಕಾರಣಿಗಳನ್ನೂ ಟೀಕೆ ಮಾಡ್ತ ತಪ್ಪಿತಸ್ಥರು ಅನ್ನಂಗೆ ಹೇಳಿಕೊಂಡು ಹೊರಟಿದ್ದೀರಲ್ಲಾ ಸಾರ್. ನಿಜವಾಗ್ಲು ಜನ ನಗತಾ ಅವ್ರೆ. ಏನಂತ ಗೊತ್ತ? 'ದೇವೇಗೌಡ್ರು ಕ್ಷೇತ್ರ ವಿಂಗಡಣೆ ಸಂದರ್ಭದಲ್ಲಿ ತುಂಬಾ ನಿಗಾ ವಹಿಸಿ ಯಾವ ಕ್ಷೇತ್ರದ ಯಾವ ಜನಾಂಗದ ಹೋಬಳಿಗಳನ್ನ ಎಲ್ಲಿ ಸೇರಿಸಿದ್ರೆ ತಾವು, ಕುಮಾರಣ್ಣ, ರೇವಣ್ಣ ಸುಲಭವಾಗಿ ಗೆದ್ದು ಬರಬಹುದು; ವೈರಿಗಳ ಕ್ಷೇತ್ರವೇ ಇಲ್ಲದಂತೆ ಮಾಡುವುದು ಹೇಗೆ ಅಂತ ಯೋಚನೆ ಮಾಡಿ ಕಾರ್ಯರೂಪಕ್ಕೆ ಇಳಿಸಿದ್ರು. ಅದರ ಅರ್ಧ ಶ್ರಮ ಹಾಕಿದ್ರೆ ಕಾವೇರಿ ಐತೀರ್ಪಿನಲ್ಲಿ ಇನ್ನೊಂದೆರಡು ಟಿ.ಎಂ.ಸಿ. ನೀರು ಕರ್ನಾಟಕಕ್ಕೆ ಸಿಗತಿತ್ತು' ಅಂತ ಜನ ಮಾತನಾಡ್ತಯಿದಾರೆ ಸಾರ್. ನಿಜಕ್ಕೂ ಆಡಿದ ಮಾತೆಲ್ಲಾ ತಪ್ಪಾಗಿ ಅವು ನಮ್ಮ ಕಡೆಗೇ ತಿರುಗಿ ಕೊಳ್ಳೊ ಸಂದರ್ಭ ಅಂದ್ರೆ ಇದು ಸಾರ್. ಈಗ ನೀವು ಏನು ಮಾಡಬಹುದು ಅಂದ್ರೆ ದಿನೇಶ್ ಅಮೀನ್ ಮಟ್ಟು ಜೊತೆ ಮಾತನಾಡಿ. ಫೋನ್ ನಂಬರ್ ಕೊಡ್ಲ ಸಾರ್.... ಸಾರ್.... ಹಲೊ... ಹಲೋ... ಹಲೋ...!"

"ಥೂತ್ತೇರಿ!!"

ವಿ.ಸೂ.: ಕಾರಣಾಂತರದಿಂದಾಗಿ ಈ ವಾರ ಕಟ್ಟೆಪುರಾಣ ಅಂಕಣ ಪ್ರಕಟವಾಗುತ್ತಿಲ್ಲ... ಮುಂದಿನ ವಾರದಿಂದ ಎಂದಿನಂತೆ ಪ್ರಕಟವಾಗುವುದು...

—ಸಂ


ಕ್ರಿಯಾಶೀಲತೆ ಕುಡಿಯೊಡೆಯುವಾಗ

ನಾನು ಕಂಡಿರುವಂತೆ ಮನುಷ್ಯ ಪ್ರತಿಭಾವಂತನಾಗಿದ್ದರೆ ಅವನ ಪ್ರತಿಭೆಯ ಸೂಚನೆ ದೊರೆಯುವುದು ಇಪ್ಪತ್ತೆರಡು, ಇಪ್ಪತ್ತಮೂರನೆಯ ವಯಸ್ಸಿನಲ್ಲಿ. ಆಟ, ಸಾಹಿತ್ಯ, ಸಂಗೀತ, ಚಿತ್ರದಲ್ಲಿ ಇದನ್ನು ಕಂಡು ...ಜಗಪಟ್ಟಿದ್ದೇನೆ; ಹದಿಹರಯ ಮುಗಿದ ಕೆಲವೇ ವರ್ಷಗಳಲ್ಲಿ ಇದು ಕಾಣುವುದು ವಿಚಿತ್ರವಾಗಿರುತ್ತದೆ. ...ಹರಯ ತುಂಬ ತಲ್ಲಣದ ಕಾಲ, ಸೆಡವಿನ ಅವಧಿ. ಹದಿಹರಯದಲ್ಲಿ ಯಾವುದೂ ಸ್ಥಿರಗೊಂಡಿರುವುದಿಲ್ಲ, ...ಕತೆ ಕೂಡ ಹುಡುಗನಿಗೆ ಕಿರಿಕಿರಿ ಉಂಟುಮಾಡುತ್ತದೆ. ಸಂಗಾತಿ ಸಿಕ್ಕುವ ಮೊದಲೇ ಸ್ವಪ್ನಸ್ಖಲನ, ಇತ್ಯಾದಿಗಳು ಶುರುವಾಗಿರುತ್ತವೆ. ಹಾಗೆಯೇ ಮನುಷ್ಯ ವಯಸ್ಕನಾಗುತ್ತ ಹೋದಂತೆ ಹದಿಹರೆಯದ ...ಹಕ ನೋವು ಕೂಡ ಇರುವುದಿಲ್ಲ. ಆದ್ದರಿಂದಲೇ ಹದಿಹರೆಯ ಮುಗಿದು ವಯಸ್ಕನ ಸ್ಥಿತಿಗೆ ...ಗುತ್ತಿರುವ ದಿನಗಳು ನಮ್ಮ ವಿಶಿಷ್ಟ ಶಕ್ತಿಯನ್ನು ಹೊಮ್ಮಿಸುತ್ತದೆ.

...ಇದು ಎಂಥ ಪರ್ವಕಾಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ತ್ರಾಣ ಹೆಚ್ಚುತ್ತಿರುತ್ತದೆ, ...ಕತೆ ನಿಲ್ದಾಣ ಕಂಡುಕೊಳ್ಳುತ್ತಿರುತ್ತದೆ, ಆದರ್ಶ ಕುಡಿಯೊಡೆಯುತ್ತದೆ, ಪ್ರೇಮ ಉಕ್ಕುತ್ತಿರುತ್ತದೆ. ಸ್ಪರ್ಶ, ಗಂಧ, ...ಇತ್ಯಾದಿ ಇಂದ್ರಿಯಗಳು ನಮ್ಮ ಪ್ರತಿಭೆ ರೂಪಿಸುವ ಶಕ್ತಿ ನೀಡಿರುತ್ತವೆ. ಜೀವನ ಕ್ಷಣಿಕ ಎನ್ನುವುದನ್ನು ...ಹೋದ ಬಾಲ್ಯ ತೋರಿರುತ್ತದೆ; ಜೀವಿಸಬೇಕಾದ ಹಲವಾರು ವರ್ಷಗಳಿವೆ ಎನ್ನುವ ಹುಮ್ಮಸ್ಸು ಕೂಡ ನಮ್ಮಲ್ಲಿ ...ರುತ್ತದೆ. ಶಿಕ್ಷಣ ಒಂದು ಘಟ್ಟವನ್ನು ತಲುಪಿ, ಲೋಕಾನುಭವ ಬೆಚ್ಚಗಿರುತ್ತದೆ. ಈ ಸಮಯದಲ್ಲಿ ಕಲ್ಪನೆ ಮತ್ತು ...ವ ಒಂದಾಗಿ ಕ್ರೀಡೆ, ಕಲೆ, ಚಿಂತನೆ ಸಾಧ್ಯವಾಗುತ್ತದೆ.

...ಈ ನನ್ನ **neat** ಅನ್ನಿಸಿಕೆಗೆ ಸಿಕ್ಕದಿರುವಂಥ ಪ್ರತಿಭಾವಂತರು ಇಲ್ಲವೆಂದಲ್ಲ. ಇಲ್ಲಿ ಬೇಕೆಂತಲೇ ನಾನು '...ವಾದ'ವನ್ನು **exception** ಎನ್ನುವುದಕ್ಕೆ ಬಳಸುತ್ತಿಲ್ಲ. ಅಪವಾದ ಎಂಥ ಕೆಟ್ಟ ಪದ ನೋಡಿ. 'ಜಾತಿ', '...ರ್ಣ'ದಂತೆಯೇ ಇದಕ್ಕೆ ಹಲವಾರು ಅರ್ಥಗಳಿವೆ. ಬೇರೆ ಮಾತು ಹುಡುಕಿದರೆ ಸಿಗುತ್ತಿಲ್ಲ, ಇರಲಿ. ಈ ನನ್ನ ...ಕೆಯ ಹೊರಗೆ ಅನೇಕ ಕಲಾವಿದರಿದ್ದಾರೆ; ಜೋಸೆಫ್ ಕಾನ್ರಾಡ್ ಮತ್ತು ಪಿರಾಂಡಲೋ ನನಗೆ ಕೂಡಲೆ ...ಯುತ್ತಿರುವ ಹೆಸರುಗಳು. ಕಾನ್ರಾಡ್ ತನ್ನ ಕೃತಿ ಮೊದಲ ರಚಿಸಿದಾಗ ನಲವತ್ತು ದಾಟಿದ್ದ; ಇಟಾಲಿಯನ್ ...ಕಾರ, ಕತೆಗಾರ ಪಿರಾಂಡಲೋ ಐವತ್ತು ದಾಟಿದ್ದ. ಆದರೆ ಅವರಲ್ಲಿ ಪ್ರತಿಭೆ ಕಾಯುತ್ತಿರುವಂತೆ ಇತ್ತು; ಅವರ ...ವ ಅವರ ಪ್ರತಿಭೆಯ ಮೇಲೆ ಕೂತು ಕಾವು ಕೊಡುತ್ತಿದ್ದಂತೆ ಇತ್ತು. ಅದರಲ್ಲೂ ಪ್ರತಿಯೊಬ್ಬ ಪ್ರತಿಭಾವಂತನ ...ನಡವಳಿಕೆ, ಮುಗ್ಧತೆ ನನಗೆ ಕುತೂಹಲ ಹುಟ್ಟಿಸುತ್ತದೆ. ಎಲ್ಲ ಬಲ್ಲಂತೆ ಇದ್ದ ಶೇಕ್ಸ್‌ಪಿಯರನ ನಾಟಕಗಳು ಅವನ ...ಶೀಲ ಮುಗ್ಧತೆಯಲ್ಲಿ ಅದ್ದಿದಂತೆ ಇರುತ್ತವೆ.

...ಇದೆಲ್ಲ ನನಗೆ ಕೋಲಾರದ ನೂರಾರು ಜನ ಹುಡುಗರನ್ನು ನೋಡಿ ಅನ್ನಿಸಿತು. ಮೊನ್ನೆ 12ನೇ ತಾರೀಖು ...ವಾರ ನಾನು ನನ್ನ ಗೆಳೆಯರೊಂದಿಗೆ ಕೋಲಾರದಲ್ಲಿದ್ದೆ. ಅಣುಬಾಂಬ್ ಸೃಷ್ಟಿಸಿದ ಕ್ಷುದ್ರ ಮನಸ್ಸುಗಳ ಬಗ್ಗೆ ...ಡಬೇಕೆಂದು ಒತ್ತಾಯಿಸಿ ನನ್ನನ್ನು ಕೋಲಾರದ ತರುಣರು ಕರೆದುಕೊಂಡು ಹೋಗಿದ್ದರು. 'ಚೆನ್ನಯ್ಯ ರಂಗಮಂದಿರದಲ್ಲಿ ...ರು ಸೇರಿದ್ದರು. ಇತರರು ಮಾತಾಡುತ್ತಿದ್ದಾಗ ನಾನು ಆ ತರುಣರ ಮುಖಗಳನ್ನು ನೋಡುತ್ತ ಕೂತಿದ್ದೆ. ಆ ...ಗಳು ಕೋಲಾರದ ಕಪ್ಪು ವಜ್ರಗಳು; ಇಡೀ ಭೂಲೋಕವನ್ನು ನಲ್ಮೆಯಿಂದ ಅಪ್ಪಿಕೊಳ್ಳುವ ವಯಸ್ಸಿನ ...ಗರ ಮುಖಗಳು. ಅವರನ್ನು ನೋಡುತ್ತ ನಾವು ಎಂಥ ಅನರ್ಘ್ಯ ಯೌವನವನ್ನು ಪೋಲು ಮಾಡುತ್ತಿದ್ದ ...ತು. ಹಾಗೆಯೇ ಮನುಷ್ಯರ ಪ್ರತಿಭೆಯ, ಸೃಷ್ಟಿಕರ್ಮದ ದ್ವಂದ್ವಗಳು ನನ್ನನ್ನು ಮುತ್ತಿದವು.



ಮಂಜುಗಡ್ಡೆಯಾದ ಮನುಷ್ಯರು

ನಾವೆಂಥ **frozen** ವ್ಯಕ್ತಿಗಳೆಂಬುದು ನಮಗೇ ಗೊತ್ತಿರುವುದಿಲ್ಲ. ನಿಜಜೀವನದಲ್ಲಿ ಕುಣಿದು ಕುಪ್ಪಳಿಸಲಾರದ, ಸದ್ದಿನ ಲಯಕ್ಕೆ ಪುಟಿಯಲಾರದ ನಮ್ಮ ಮಧ್ಯಮವರ್ಗ ಮಂಜುಗಡ್ಡೆಯಂತೆ ಆಗಿರುವುದನ್ನು ಕಂಡು ನಾನು ಅನೇಕ ಸಲ ಅಚ್ಚರಿಗೊಂಡಿದ್ದೇನೆ. ಭಾರತೀಯ ಸಂಗೀತ, ನೃತ್ಯಕ್ಕೆ ಆಗಿರುವುದು ನಿಮಗೆ ಗೊತ್ತಿರುತ್ತದೆ; ಸಾವಿರಾರು ವರ್ಷದಿಂದ ಗುರುಕುಲ, ಹಿರಿಯರ ನೇತೃತ್ವದಲ್ಲಿ ಬದುಕಿದ ಇವೆರಡೂ ಹೊಸ ಪ್ರಯೋಗ, ಸ್ಫೂರ್ತಿ, ಜೀವ ಪಡೆಯಲಿಲ್ಲ. ಇಲ್ಲಿಯ ಶಾಸ್ತ್ರೀಯ ನೃತ್ಯಕ್ಕೂ ಈ ದೇಶದ ಯುದ್ಧ ಕ್ಷಾಮ, ಪ್ರೇಮಕ್ಕೂ ಸಂಬಂಧವಿಲ್ಲ; ವ್ಯಕ್ತಿಯ ಖುಷಿ ಮತ್ತು ದುಃಖ ಇವುಗಳಿಂದ ಹೊರಗಿರುತ್ತದೆ. ಆಸ್ಥಾನದ ಮತ್ತು ಅಂತಃಪುರದ ಮುದ್ರೆಗಳ ಚೌಕಟ್ಟಿನಲ್ಲೇ ಬೆಳೆದ ಇದು **frozen** ಆಗಿದೆ. ಹಾಗೆಯೇ ನಮ್ಮ ಜಾನಪದ ನೃತ್ಯಗಳು. ಇದಕ್ಕೆ ನಮ್ಮ ಶಿಷ್ಟ ವರ್ಗದ ಕಲ್ಪನೆ, ಸೂಕ್ಷ್ಮತೆ ದೊರೆಯಲಿಲ್ಲ. ನಮ್ಮ ಕೋಲಾಟ ಅತ್ಯಂತ ಯಾಂತ್ರಿಕ ಕುಣಿತವಾಗಿ ಉಳಿಯಿತು. ಇವುಗಳಿಗೆ ಹೊರತಾಗಿ ಇದ್ದ ಅನೇಕ ಪ್ರಕಾರಗಳು ತಾವಾಗಿಯೇ ಇಂಗಿಹೋದವು.



ಉಷಾ ಉತ್ತುಪ್ ತರಹದ ಕೆಟ್ಟ ಮುಖದ ಹಾಡುಗಾರ್ತಿಯ 'ಛಂದ'ವನ್ನು ಜನರ ಕುಣಿತದ **participation** ಅನ್ನು ದೊರಕಿಸಿಕೊಳ್ಳುವುದು ನಮ್ಮ ಬಿ.ಕೆ.ಸುಮಿತ್ರ, ಮಂಜುಳಾ ಗುರುರಾಜ್ ತರಹದವರಿಗೆ ಅಷ್ಟು ಕಷ್ಟವಲ್ಲ. ಇವರಿಗೆ ಸಂಗೀತ ಜ್ಞಾನವಿದೆ; ಜಾನಪದದ ನೂರಾರು ಧಾಟಿಗಳ ಪರಿಚಯವಿದೆ. ಆದರೆ ಇವರ ವ್ಯಕ್ತಿತ್ವ ಕೂಡ **frozen** ಆಗಿರುವುದರಿಂದ ಯಾವುದೋ ಮೂಲೆಯಲ್ಲಿ ಕೂತು ಹಾಡುತ್ತಾರೆ. ಆ ಹಾಡುಗಳ ಕುಣಿತ ಯಾರ ತೊಡೆಯನ್ನೂ, ಎದೆಯನ್ನೂ ಕುಣಿಯಲು ಹೆಚ್ಚುವುದಿಲ್ಲ.

ನಮ್ಮ ಜನ ಎಲ್ಲದರಲ್ಲೂ ನಿಂತ ನೀರಿನಂತೆ ಆಗಿದ್ದಾರೆ. ಹಾಡು ಕೇಳಿದರೆ ಅವರ ಬೆರಳು ತಾಳ ಹಾಕುವುದಿಲ್ಲ; **rhythm** ನಿಂದಾಗಿ ಕುಣಿಯುವ ಕಾತರ ಮೂಡುವುದಿಲ್ಲ. ಊಟ ಎನ್ನುವುದು ತಿನ್ನುವ ಕೆಲಸ ಮಾತ್ರ ಆದಾಗ, ಮಾತಾಡುವುದು ಗಂಟಲ ಕೆಲಸ ಮಾತ್ರ ಆದಾಗ, ಹಾಡುವುದು ಯಾಂತ್ರಿಕ ಚೀರಾಟವಾದಾಗ ಹೀಗಾಗುತ್ತದೆ ಎನ್ನುವುದು ನನ್ನ ನಂಬಿಕೆ.

'ಬಿಥೋವನ್, ಮೊಜಾರ್ಟ್ ಹಾಡಿಗೆ ಯಾರೂ ಕುಣಿಯುವುದಿಲ್ಲ' ಅನ್ನಬೇಡಿ; ಅಲ್ಲಿಯ ಕ್ರಿಯಾಶೀಲತೆಗೆ ಇಡೀ ವ್ಯಕ್ತಿತ್ವ ಸ್ಪಂದಿಸುತ್ತದೆ. ನಮ್ಮ ಕ್ರಿಯಾಶೀಲತೆ ತಗ್ಗಿ, ವ್ಯಾಮೋಹ ಹೆಚ್ಚಿದಾಗ ಕೂಡ, ಚೆಂದದ ಜನಪ್ರಿಯ ಹಾಡು ಕೇಳಿದಾಗ ಕೂಡ... ಕುಣಿಯುವ ಆಸೆ ಇಲ್ಲದ ಜನತೆಗೆ ಜೀವ ಬರಲು ಸಾಧ್ಯವೆ? ಈ ಪ್ರಶ್ನೆಗೆ ಉತ್ತರ ಹೇಳಬೇಕಾದವರು ಸುಮಿತ್ರ ತರಹದವರು. ಉಷಾ ಉತ್ತುಪ್ ತರಹವೇ ಇರುವ ಸುಮಿತ್ರ ಆಕೆಗಿಂತ ನೂರು ಪಾಲು ಆಕರ್ಷಕ, ಜಾಣೆಯಾದ ವ್ಯಕ್ತಿ. ಉತ್ತುಪ್ ಎಲ್ಲರೊಂದಿಗೆ ಕುಣಿದು ಹಾಡುವುದು, ಸುಮಿತ್ರ ತರಹದವರು ಕಾರೆಕಂಟಿಯಂತೆ ಕುಂತು ಅಥವಾ ಒಣಗಿದ ಕಂಬದಂತೆ ನಿಂತು ಹಾಡುವುದು... ನಿಜಕ್ಕೂ **frozen** ಸ್ಥಿತಿ.

ತಪ್ಪಾಗಿದ್ದರೆ ಕ್ಷಮಿಸಿ.

● ಫೆಬ್ರುವರಿ 11, 1998

ಸೈಟ್ ನ್ಯಾಯಾಧೀಶರು


ಬೆಂಗಳೂರಿನಲ್ಲಿ ಗೆಳೆಯರೊಬ್ಬರನ್ನು ಕಾಣಬೇಕಾಗಿತ್ತು. ಅವರು ವಾಸಿಸುತ್ತಿದ್ದ ಬಡಾವಣೆ ತಿಳಿದಿತ್ತು. ಮನೆಯ ವಿಳಾಸದ ಅರಿವೂ ಚೆನ್ನಾಗಿತ್ತು. ಬೆಳಗ್ಗೆ ಬೇಗ ಹೋದರೆ ಅವರು ಮನೆಯಲ್ಲಿ ಸಿಗುತ್ತಾರೆಂಬ ನಂಬಿಕೆ. ಹೋದೆ. ಮನೆ ವಿಳಾಸ ಸರಿಯಾಗಿಯೇ ಇತ್ತು. ಆದರೆ ಅಲ್ಲಿ ಅಪರಿಚಿತರು ವಾಸವಾಗಿದ್ದರು! ಅವರು ಅಲ್ಲಿಗೆ ಹೊಸದಾಗಿ ಬಂದಿದ್ದರಂತೆ. ಗೆಳೆಯರು ಎಲ್ಲಿದ್ದಾರೆ ತಿಳಿಯುವ ಕಾತುರ. ಪಕ್ಕದ ಮನೆಯವರ ಪರಿಚಯವೇ ಇಲ್ಲದ ಊರಿನಲ್ಲಿ ಎಲ್ಲೋ ಇರುವವರ ವಿಳಾಸ ತಿಳಿಯಬಯಸುವುದು ಮೂರ್ಖತನ ಎಂಬ ಅರಿವಿತ್ತು. ಆದರೂ ಒಂದು ದೂರದ ಆಸೆ. ಅವರನ್ನು ವಿಚಾರಿಸಿಯೇಬಿಟ್ಟೆ. ಅದೃಷ್ಟ ನೆಟ್ಟಗಿತ್ತು. ಗೆಳೆಯರು ವಿಳಾಸವನ್ನು ಅವರ ಬಳಿ ಬಿಟ್ಟಿದ್ದರು. ವಿಳಾಸ ಹುಡುಕಿದೆ. ಸಿಕ್ಕಿದರು.

'ಮನೆ ಅನುಕೂಲವಾಗಿತ್ತು ಯಾಕೆ ಬದಲಾಯಿಸಿದಿರಿ?' ನನ್ನ ಪ್ರಶ್ನೆ. ಗೆಳೆಯರ ವಿವರಣೆ ಹೀಗಿತ್ತು:

ಬೆಂಗಳೂರು ವೇಗವಾಗಿ ಬೆಳೆಯುತ್ತಿದೆ. ಈಗ ಜನಸಂಚಾರವೇ ಇಲ್ಲದ ದೂರದ ಬಡಾವಣೆ ಅನ್ನುವಂತಹದ್ದು ಇನ್ನು ಕೆಲವೇ ದಿವಸಗಳಲ್ಲಿ ಜನನಿಬಿಡ ಪ್ರದೇಶ ಆಗುತ್ತೆ. ಮನೆ ಮಾಲೀಕರು ದುಬಾರಿ ಬಾಡಿಗೆಗಾಗಿ ಒತ್ತಾಯಿಸುತ್ತಾರೆ. ಅದನ್ನು ಕೊಡುವ ಚೈತನ್ಯ ಇದ್ದರೆ ಸರಿ. ಇಲ್ಲದಿದ್ದಲ್ಲಿ ಅದಕ್ಕಿಂತಲೂ ದೂರ ಇರುವ, ಸಮರ್ಪಕ ರಸ್ತೆ ನೀರು, ವಿದ್ಯುತ್ ಇಲ್ಲದ ಬಡಾವಣೆಗೆ ಹೋಗುವುದು ಅನಿವಾರ್ಯವಾಗುತ್ತದೆ. ಕೆಲವು ದಿವಸ ಮಾತ್ರ. ಅದೂ ಅಭಿವೃದ್ಧಿ ಹೊಂದುತ್ತೆ. ಅದರೊಂದಿಗೆ ಬಾಡಿಗೆ ಹೆಚ್ಚುತ್ತೆ. ಆಗ ಅಲ್ಲಿಂದ ದೂರ ಇರುವ ಇನ್ನೊಂದು ಬಡಾವಣೆ ಹುಡುಕಬೇಕಾಗುತ್ತದೆ. ಇದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವವರ ಅನಿವಾರ್ಯ ಸಂಕಟ.

ಹೀಗೆ ಅಗಾಧವಾಗಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ತಲೆಯ ಮೇಲೆ ಸೂರು ಇಲ್ಲದ ಅಲ್ಲಿನ ನಿವಾಸಿಗಳಿಗೆ ಹೇಗಾದರೂ ಮಾಡಿ ಅದನ್ನು ಮಾಡಿಕೊಳ್ಳಬೇಕು ಅನ್ನುವ ಆಸೆ ಸಹಜ. ಸೂರಿದ್ದವರೂ ಇನ್ನೊಂದು ಇದ್ದರೆ ವಾಸಿ ಅನ್ನುತ್ತಾರೆ. ಆ ಇನ್ನೊಂದು ಆದರೆ ಮಗದೊಂದೂ ಇರಲಿ, ಕಷ್ಟಕಾಲಕ್ಕೆ ಆಗುತ್ತೆ ಅನ್ನುವ ದುರಾಸೆ ತುಂಬುತ್ತೆ. ಬೇರೆ ಊರುಗಳಲ್ಲಿ ವಾಸಿಸುವವರಿಗೂ ಬೆಂಗಳೂರಿನ ಸೈಟಿನ ಮೇಲೆ ಎಂತಹದ್ದೋ ಮೋಹ. ಸೀತೆಯನ್ನು ಬಂಗಾರದ ಜಿಂಕೆ ಆಕರ್ಷಿಸಿದಂತೆ ಅದು ಸೆಳೆಯುತ್ತೆ. ಹಣ ಅಧಿಕಾರ ಇದ್ದರಂತೂ ಮುಗಿದೇಹೋಯಿತು. ಅದರ ಸೆಳೆತ ಬಲವಾಗಿಯೇ ಇರುತ್ತೆ.

ಇಂತಹ ವಿಷಯಗಳೆಲ್ಲ ಲೋಕಾಯುಕ್ತರನ್ನಾಗಿ ನ್ಯಾಯಮೂರ್ತಿ ಭಾಸ್ಕರ ರಾವ್ ಅವರ ನೇಮಕವನ್ನು ಬೆಂಗಳೂರಿನ ವಕೀಲರ ಸಂಘ ವಿರೋಧಿಸುತ್ತಿದೆ ಎಂದಾಗ ನೆನಪಾಯಿತು. ಅವರ ವಿರೋಧಕ್ಕೆ ಕಾರಣ ಎಂದರೆ ನ್ಯಾಯಮೂರ್ತಿಗಳ ಮಾತೃಭಾಷೆ ತೆಲುಗು ಅಂತೆ. ಅವರಿಗೆ ಕನ್ನಡ ಅಷ್ಟಾಗಿ ಬಾರದಂತೆ. ಲೋಕಾಯುಕ್ತಕ್ಕೆ ಬರುವ



ಬಹಳಷ್ಟು ದೂರುಗಳು ಕನ್ನಡದಲ್ಲಿರುತ್ತವೆ. ಅವುಗಳನ್ನು ಓದಿ, ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಿಲ್ಲವಂತೆ. ಅವರ ಬದಲಿಗೆ ಕರ್ನಾಟಕದ ಯಾರನ್ನಾದರೂ ನೇಮಿಸಬೇಕು ಎಂಬುದು ಅವರ ಆಗ್ರಹವಂತೆ.

ಏನ್ರಿ ವಕೀಲರುಗಳೆ, ಬುದ್ಧಿವಂತರಾದ ನೀವೇ ಇಂತಹ ಮಾತು ಆಡುತ್ತಿದ್ದಿರಲ್ರೀ. ಸರ್ಕಾರಕ್ಕೆ ಬೇರೆ ರಾಜ್ಯದ ನ್ಯಾಯಾಧೀಶರನ್ನು ತಂದು ಇಲ್ಲಿ ಕೂರಿಸಬೇಕು ಅನ್ನುವ ಮನಸ್ಸೇನೂ ಇಲ್ಲ. ಅದೂ ನಮ್ಮವರೇ ಅಲ್ಲಿದ್ದರೆ ಚೆನ್ನ ಎಂದೇ ಬಯಸುತ್ತೆ. ಆದರೇನು ಅವರು ತಾನೆ ಏನು ಮಾಡುತ್ತಾರೆ ಪಾಪ. ಕರ್ನಾಟಕ ಮೂಲದ ನ್ಯಾಯಾಧೀಶರುಗಳನ್ನೆಲ್ಲ ಬೆಂಗಳೂರು ಸೈಟುಸೂಜಿಗಲ್ಲಿನಲ್ಲಿ ಸೆಳೆದಿರುತ್ತೆ. ನಿವೃತ್ತಿ ಹೊಂದುವ ವೇಳೆಗೆ ಸೈಟುಗಳನ್ನು ಮಾಡಿಕೊಂಡಿರುತ್ತಾರೆ. ಬಹಳ ಸಲ ಅವು ಕಾನೂನುಬಾಹಿರ ಆಗಿರುತ್ತವೆ. ನಮಾಜು ಮಾಡಲು ಹೋಗಿ ಮಸೀದಿ ಮೈಮೇಲೆ ಕೆಡವಿಕೊಂಡ ಹಾಗೆ ಆಗಬಾರದಲ್ಲಾ, ಅದಕ್ಕೇ ಸರ್ಕಾರ ಹೀಗೆ ಮಾಡಿರಬಹುದು ಎಂದರೆ ಇವರ ಮೇಲೂ ಇಂತಹ ಆರೋಪ ಇದೆ ಕಣ್ರೀ ಅಂತಾರಲ್ಲಾ... ಅಲ್ಲ ನಮ್ಮ ನ್ಯಾಯಾಧೀಶರುಗಳೆಲ್ಲರೂ ಸೈಟ್ ನ್ಯಾಯಾಧೀಶರೇ ಆಗಿಹೋಗಿದರಾ ಅಂತಾವ.....!

ವಾಚ್ ಸ್ವಾಮಿ!

ಇದು ಎಂತಹ ಸ್ವಾಮಿ?

'ಕಾಮಿ ಸ್ವಾಮಿ' ಕೇಳಿದ್ದೆವು. ಈ ಹೆಸರು ಕಿವಿಯ ಮೇಲೆ ಬೀಳುತ್ತಿದ್ದಂತೆಯೇ ಬಸವರಾಜ ಕಟ್ಟೀಮನಿಯವರ 'ಜರತಾರಿ ಜಗದ್ಗುರು' ಅಂತಹ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಆದರೆ ಈ ಇದು? ಎಂತಹದ್ದದು ವಾಚ್ ಸ್ವಾಮಿ? ಮನುಷ್ಯ ಸರಿ ಇಲ್ಲ, ಅವನ ಮೇಲೆ ನಿಗಾ ಇಡಿ ಎಂದಾ? ಇಲ್ಲ ಮಾರಾಯರೆ ಅಂತಹದ್ದೇನೂ ಅಲ್ಲ, ನಮ್ಮ ಆದಿಚುಂಚನಗಿರಿ ಮಠ ಗೊತ್ತುಂಟು ಅಲ್ಲವೊ. ಅದು ಒಕ್ಕಲಿಗರ ಸಾಮ್ರಾಜ್ಯ ಎಂದೇ ಬಹುಜನರ ನಂಬಿಕೆ. ಕೆಲವು ದಿವಸಗಳ ಹಿಂದೆ ಒಕ್ಕಲಿಗ ಗುರುಗಳಾದ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಭೈರಪ್ಪನ ಪಾದ ಸೇರಿಕೊಂಡರು ಎಂಬುದು ಸರ್ವವೇದ್ಯ ಸಂಗತಿ ಆಗಿದೆ. ಅವರಿಗೆ ಉತ್ತರಾಧಿಕಾರಿಯಾಗಿ (ಅವರ ಮುಂದೆ ಎಷ್ಟು ಶ್ರೀಗಳನ್ನು ಸೇರಿಸಬೇಕೆಂದು ತಿಳಿಯದಾಗಿ ಅದನ್ನು ಹಾಗೆಯೇ ಬಿಡಲಾಗಿದೆ) ನಿರ್ಮಲಾನಂದನಾಥ ಸ್ವಾಮಿ ಪಟ್ಟಾಭಿಷೇಕ ನಡೆಯಬೇಕಿತ್ತು. ಅಂತಹ ಶುಭಮುಹೂರ್ತದಲ್ಲಿ ಹಲವಾರು ಜಾತಿಮಠದ ಸ್ವಾಮಿಗಳು ಸಾನ್ನಿಧ್ಯ ಇರುವುದು ಖಚಿತವಾಗಿತ್ತು. ಈ ಐತಿಹಾಸಿಕ ಘಟನೆಯ ವಿವರ ಭಕ್ತಾದಿಗಳ ಗಮನಕ್ಕೂ ಬರಬೇಕು ಎಂಬ ಸದುದ್ದೇಶದಿಂದ ಆದಿಚುಂಚನಗಿರಿ ಮಠದಲ್ಲಿ ಮಾಧ್ಯಮಗೋಷ್ಠಿ ಕರೆಯಲಾಗಿತ್ತಂತೆ. ಅಲ್ಲಿ ಆಶೀರ್ವಚನ ನೀಡಲು ಹಲವು ಸರ್ವಸಂಗಪರಿತ್ಯಾಗಿಗಳು ಉತ್ಸಾಹದಿಂದ ಇದ್ದರಂತೆ. ಅವರಲ್ಲಿ ಪೀಠಾರೋಹಣ ಮಾಡಬೇಕಿದ್ದ ಗುರುಗಳ ಸಾನ್ನಿಧ್ಯವೂ ಇತ್ತಂತೆ.

ಮಾಧ್ಯಮಗೋಷ್ಠಿ ಅಂತಿಮ ಘಟಕ್ಕೆ ಬಂದಿತಂತೆ. ಮುಕ್ತಾಯಗೊಳಿಸುವ ಮುನ್ನ ಗುರುಗಳು ವರದಿಗಾರರನ್ನ ಒಬ್ಬೊಬ್ಬರನ್ನಾಗಿ ವೇದಿಕೆ ಬಳಿಗೆ ಆಹ್ವಾನಿಸಿದರಂತೆ. ದೈವಸನ್ನಿಧಿ ಸೇರಿದ ಹಿರಿಯ ಸ್ವಾಮಿಗಳ ಚಿತ್ರವಿರುವ ಕೈಗಡಿಯಾರ ನೀಡಿದರಂತೆ! ವರದಿಗಾರರು, ಸಮಯಪ್ರಜ್ಞೆ ಇರಬೇಕು ಎನ್ನುವ ದಿವ್ಯ ದೃಷ್ಟಿಯಿಂದ ಇದನ್ನು ಅನುಗ್ರಹಿಸಿರಬಹುದು ಎಂದು ಭಾವಿಸಿದರೋ; ಸದಾ ಸತ್ಸಂಗ ಇರಬೇಕು ಎಂದು ಯೋಚಿಸಿ ಹಿರಿಯ ಗುರುಗಳ ಚಿತ್ರ ಅವರೊಂದಿಗೆ ಸದಾಕಾಲ ಇರುವಂತೆ ಮಾಡಲು ಹೀಗೆ ಆಶೀರ್ವದಿಸಿದರೋ ಎಂದು ತಿಳಿದರೋ; ಇದನ್ನು ಪ್ರತಿಭಟಿಸಿದರೆ, ತಿರಸ್ಕರಿಸಿದರೆ ಗುರುಗಳ ಶಾಪಕ್ಕೆ ಗುರಿಯಾಗಬೇಕೆಂಬ ಭಯದಿಂದ ಪೀಡಿತರಾಗಿದ್ದರೋ ತಿಳಿದುಬಂದಿಲ್ಲ. ಎಲ್ಲರೂ ಧನ್ಯತಾಭಾವದಿಂದ ಗಡಿಯಾರಗಳನ್ನು ಸ್ವೀಕರಿಸಿದರಂತೆ! ದೈವಕೃಪೆ ಇದೆಂದು

ಅಣಕ



• ಎಚ್.ಎಲ್.ಕೇಶವಮೂರ್ತಿ

ಗಡಿಯಾರವನ್ನು ಕಣ್ಣಿಗೆ ಒತ್ತಿಕೊಂಡು ಕೈಗೆ ಕಟ್ಟಿಕೊಂಡರು ಹೇಗೆ ಎಂಬುದರ ಮಾಹಿತಿ ದೊರೆತಿಲ್ಲ.

'ವಾಚ್‌ದಾನ' ಸ್ವೀಕಾರದಿಂದ ಕೃತಾರ್ಥರಾದ ಸ... ವರದಿಗಾರರು ನಿರ್ಮಲಾನಂದನಾಥ ಸ್ವಾಮೀಜಿ ಅ... ಮನೋಭಾವದಂತೆಯೇ ಪ್ರಚಾರ ನೀಡಿದ್ದಲ್ಲದೆ ಪಟ್ಟಾಭಿ... ಮಹೋತ್ಸವಕ್ಕೂ ಖುದ್ದು ಹಾಜರಾಗಿದ್ದರಂತೆ.

ಸ್ವಾಮೀಜಿ ಜಾಣರು. ಸಾರ್ವಜನಿಕ ನೆನಪು ಕ್ಷ... ಎಂಬುದನ್ನು ತಿಳಿದಿದ್ದರು. 'ವಾಚ್ ದಾನ' ನೆನಪು ಮೂ... ದಿನಗಳ ನಂತರವೂ ಇರಲಾರದು ಎಂಬುದನ್ನು ತಿಳಿದಿದ್ದ... ತಮ್ಮ ಪಟ್ಟಾಭಿಷೇಕ ಮಹೋತ್ಸವವು ಮಾಧ್ಯಮಗಳ... ವಿಜೃಂಭಿಸಿ ಭಕ್ತಿರಸ ಸಿಂಪಡಿಸಿ ಎಂಬ ಘನ ಉದ್ದೇಶದಿಂ... ಇದಕ್ಕೆ ಕಾರಣಕರ್ತರಾದವರಿಗೆ ತಲಾ ಒಂದು ಸಾವಿ... ರೂಪಾಯಿ ತಲುಪುವಂತೆ ವ್ಯವಸ್ಥೆ ಮಾಡಿದ್ದರಂತೆ! ದ... ಮಾಧ್ಯಮದವರು ಮಾತ್ರ ಇದರ ಫಲಾನುಭವಿಗಳಾದ... ಪರಂತು ಮುದ್ರಣ ಮಾಧ್ಯಮದವರಲ್ಲ ಎಂಬ ಗು... ಜಿಲ್ಲೆಯ ಎಲ್ಲೆಡೆ ಹರಿದಾಡುತ್ತಿದೆಯಂತೆ. ಹೇಗೋ ಎಂತೋ... ನಿರ್ಮಲಾನಂದನಾಥ ಸ್ವಾಮಿ ಕೃಪೆಯಿಂದ ಮಂಡ್ಯ... ವರದಿಗಾರರ ಕೈಯ್ಯಲ್ಲಿ ಬಾಲಗಂಗಾಧರನಾಥ ಸ್ವಾಮಿ ಚಿ... ಇರುವ ವಾಚುಗಳು ಲಕಲಕಿಸುತ್ತಿರುವುದಂತೂ ಸತ್ಯಸ...

ಮಾದಗುರು!

ಎಸ್. ಹೊನ್ನಯ್ಯ ಹಿರಿಯ ಸಮಾಜ ಸುಧಾರಕ... ಈಗ ಬೌದ್ಧ ಮತಾವಲಂಬಿ. ಅವರು ಇತ್ತೀಚೆಗೆ ಹೇಳಿ... ಸಂಗತಿ ಇದು.

ಹೊಲೆಯರಿಗೂ ಮತ್ತು ಮಾದಿಗರಿಗೂ ಬದ್ಧವೈ... ಸಂಬಂಧ ಬೆಳೆಸುವುದು ಹಾಗಿರಲಿ. ನೀರನ್ನ... ಕುಡಿಯಲಾರರು.

ಈ ಇಬ್ಬರೂ ಅಸ್ಪೃಶ್ಯರನ್ನು ಒಂದುಗೂಡಿಸಬೇಕು ಎಂ... ಹೊನ್ನಯ್ಯ ಪ್ರಯತ್ನಿಸಿದರಂತೆ. ಮೊದಲಿಗೆ ಮಾದಿಗ... ಮುಖಂಡನನ್ನು ಕಂಡರಂತೆ. ಎರಡೂ ಜಾತಿಗಳ... ಒಂದಾಗುವ ಅವಶ್ಯಕತೆಯನ್ನು ವಿವರಿಸಿದರಂತೆ. ಎಲ್ಲವನ್ನ... ಆಲಿಸಿದ ಮುಖಂಡ ಕೊನೆಗೆ ಕೇಳಿದನಂತೆ–

"ಸ್ವಾಮೀ, ಮಾದಿಗರು ಅಂದ... ಏನಂದುಕೊಂಡಿದೀರಿ?"

ಇವರು ಉತ್ತರಿಸಲಿಲ್ಲವಂತೆ. ಅವನನ್ನೇ ಹೇಳ... ಕೇಳಿದರಂತೆ.

"ಮಾದಿಗರು ಅಂದರೆ 'ಮಾದಗುರು'. ಅಂತಹದ್ದರ... ಹೊಲೇರೊಂದಿಗೆ ಹೆಂಗೆ ಒಂದಾಗಕಾಯ್ತದೆ?"

ನೋವು ತೋಡಿಕೊಂಡಿರುವ ಅಮಾಯಕ ಶಿಕ್ಷಕರು

ಮಾರ್ಚ್ 6, 2013ರ ಸಂಚಿಕೆಯಲ್ಲಿ Karnataka Residential Education Society (KREIS) ಬಗ್ಗೆ ಬರೆದದ್ದನ್ನು ಓದಿದೆವು. ನಾವು 11 ವರ್ಷಗಳಿಂದ ಗುತ್ತಿಗೆ ಶಿಕ್ಷಕರಾಗಿದ್ದು ಚಂದ್ರಶೇಖರ್ ಅವರು ಇ.ಡಿ.ಯಾಗಿದ್ದಾಗ ಕಾಯಂಗೊಂಡ ಶಿಕ್ಷಕರು. ಶಾಂತಪ್ಪ ಅವರು ಬಂದಮೇಲೆ ಚಂದ್ರಶೇಖರ್ ಬೆಂಬಲಿಗರೆಂದು ನಮ್ಮನ್ನೂ, ಕಚೇರಿಯಲ್ಲಿರುವ ಕೆಲವು ಸಿಬ್ಬಂದಿಯನ್ನೂ ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದಾರೆ. ಯಾರಾದರೂ ಅನಾರೋಗ್ಯ ತೊಂದರೆಗೊಳಗಾಗಿ ವೈದ್ಯಕೀಯ ಸೌಲಭ್ಯ ಕೇಳಿದರೆ "ನಿಮಗ್ಯಾಕೆ ನಾನು ವೈದ್ಯಕೀಯ ಸೌಲಭ್ಯ ನೀಡಬೇಕು. ರಜೆಯಲ್ಲಿ ನೀವು ಕೆಲಸ ಮಾಡಲ್ಲ, ನಾನ್ಯಾಕೆ ಸಂಬಳ ಕೊಡಬೇಕು" ಎಂದು ಬೈತಾರೆ. ಇನ್‌ಕ್ರಿಮೆಂಟ್ ಕೊಡಲ್ಲ, ಪಿಂಚಣಿ ಮಾಡ್ಕೊಟ್ಟಿಲ್ಲ, ಯಾರಾದರೂ ಸತ್ತರೆ ಯಾವ ಬೆನಿಫಿಟ್ಟೂ ಇಲ್ಲ, ಸೀನಿಯಾರಿಟಿ ಲಿಸ್ಟ್ ಬಿಟ್ಟಿಲ್ಲ, ಸಂಬಳ ನೆಟ್ಟಗೆ ಕೊಡಲ್ಲ, ಆದರೆ ಇದ್ದಬದ್ದ ಚಾರ್ಜ್ ಎಲ್ಲ ಹಾಕ್ತಾರೆ. ವಾರ್ಡನ್ ಚಾರ್ಜ್ ಹಾಕಿದರೆ ನಾವೇ ಹಣ ಹಾಕ್ಕೊಂಡು ನಿಭಾಯಿಸಬೇಕಾಗ್ತದೆ. ಸಂಬಳವೇ ಇಲ್ಲದೆ ಹಣ ಹಾಕ್ಕೊಳೋದೆಲ್ಲಿಗೆ? ನಮ್ಮ ಕಷ್ಟವನ್ನು ಹೇಳಿಕೊಳ್ಳಲು ಹೋದರೆ ಹೆದರಿಸಿ ಕಳಿಸ್ತಾರೆ. ಗಂಗಪ್ಪ ಗೌಡರು ನಮಗೆ ಸ್ವಲ್ಪ ಸಹಾಯ ಮಾಡ್ತಾರೆ. ನಮ್ಮನ್ನು ನೇಮಕ ಮಾಡಿದ ಎಸ್.ನಂಜುಂಡಯ್ಯ ಅವರು ಅರ್ಜಿ ಶುಲ್ಕವನ್ನೂ ನೇಮಕಾತಿ ಆದೇಶವನ್ನೂ ನಮ್ಮ ಮನೆಗೆ ತಲುಪಿಸಿದ್ದರು. ನಂಜುಂಡಯ್ಯ, ಚಂದ್ರಶೇಖರ್ ಅಂತಹವರು ಕೂರುತ್ತಿದ್ದ ಜಾಗದಲ್ಲಿ ಕೂರುವ ಧೂಳಿನ ಕಣವಾಗಲೂ ಶಾಂತಪ್ಪರಿಗೆ ಅರ್ಹತೆ ಇಲ್ಲ. ಫೆಬ್ರವರಿ 28 ಕ್ಕೆ ಶಾಂತಪ್ಪ ರಿಟೈರ್ಡ್ ಆಗ್ತಾರೆ. ಮುಂದೆ ಬರುವ ಇ.ಡಿ.ಯಾದರೂ ನಂಜುಂಡಯ್ಯ, ಚಂದ್ರಶೇಖರ್ ಅವರಿಗೆ ಈಗಲೂ ನಾವೇಕೆ ವಿಧೇಯರಾಗಿದ್ದೇವೆಂಬುದನ್ನು ಅರ್ಥ ಮಾಡಿಕೊಳ್ಳುವವರಾಗಲಿ.

- ಕ್ರೈಸ್‌ನಲ್ಲಿ ವಿಲೀನಗೊಂಡ ಶಿಕ್ಷಕರು

ಸಿಇಟಿ ಮೂಲಕ ಕ್ರೈಸ್‌ಗೆ ಆಯ್ಕೆಯಾದ ಶಿಕ್ಷಕರಾದ ನಮಗೆ ಕೋರ್ಟ್‌ನ ತಡೆಯಾಜ್ಞೆ ಇರುವಾಗಲೇ ನೇಮಕ ಮಾಡಿದ್ದಾರೆ. ಕೆಲವರು ಒಂದೇ ಹುದ್ದೆಯಲ್ಲಿ ಎರಡೆರಡು ಜನ ಇದ್ದೇವೆ. ಕೆಲವರನ್ನು ನಮಗಿಂತ ಕೆಳದರ್ಜೆಯ ಹುದ್ದೆಗಳಾದ ವಾರ್ಡನ್, ಎಫ್.ಡಿ.ಎ. ಹುದ್ದೆಗಳಿಗೆ ನಿಯೋಜನೆ ಮಾಡಿದ್ದಾರೆ. ಒಂದೇ ತಿಂಗಳಲ್ಲಿ ನಾಲ್ಕೈದು ಶಾಲೆಗಳಿಗೆ ಟ್ರಾನ್ಸ್‌ಫರ್, ಡೆಪ್ಯುಟೇಷನ್ ಎಲ್ಲ ಮಾಡ್ತಾರೆ. ನಮಗೆ ಬೇಕಾದ ಜಾಗಕ್ಕೆ ಟ್ರಾನ್ಸ್‌ಫರ್ ಆಗಬೇಕಾದರೆ ದುಡ್ಡು ಕೊಡಬೇಕು. ಟ್ರಾನ್ಸ್‌ಫರ್‌ಗೆ ಇಷ್ಟು, ನಿಯೋಜನೆಗೆ ಇಷ್ಟು ಎಂದೆಲ್ಲ ಕ್ರೈಸ್‌ನಲ್ಲಿ ರೇಟ್ ಫಿಕ್ಸ್ ಆಗಿಬಿಟ್ಟಿದೆ. ಎಸ್.ಆರ್.ಬುಕ್ ಮಾಡ್ಕೊಟ್ಟಿಲ್ಲ, ಸಂಬಳ ಕೊಡಲ್ಲ, ಶಿಕ್ಷಕರಾಗಲು ಬಂದ ನಮಗೆ ಕಸ ಗುಡಿಸುವ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ. ನಾವು ಸಿಇಟಿ ಬರೆದು ಆಯ್ಕೆ ಆಗಿದ್ದೇವೆ. ಆದರೆ ಹೊರಗುತ್ತಿಗೆ ಶಿಕ್ಷಕರು ಸಿಇಟಿ ಬರೆದಿಲ್ಲ, ಅವರಿಂದ ನಮಗೆ ತೊಂದರೆಯಾಗುತ್ತಿದೆ. ಅವರು ನಮ್ಮನ್ನು ಅವರ ಅನ್ನ ಕದಿಯಲು ಬಂದವರ ಹಾಗೆ ನೋಡುತ್ತಾರೆ. ಇ.ಡಿ.ಯವರಿಗೆ ಏನಾದರೂ ಹೇಳಿಕೊಂಡರೆ 'ನೀವು ಏನಾದ್ರು ಮಾಡ್ಕೊಂಡು ಹಾಳಾಗಿಹೋಗಿ' ಅಂತಾರೆ. ಸಿ.ಇ.ಟಿ.ಯಲ್ಲಿ ಆಯ್ಕೆಯಾದ ನಮ್ಮ ಸಾಮರ್ಥ್ಯಕ್ಕೆ ಇಲ್ಲಿ ಬೆಲೆಯೇ ಇಲ್ಲವಾಗಿದೆ. ಇವರ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗಲು ಆಗುತ್ತಾ?

- ಸಿಇಟಿ ಬರೆದೂ ನೊಂದಿರುವ ಶಿಕ್ಷಕರು



ರಾಮದಾಸನ ಅವ್ಯವಹಾರಗಳು, ಚುನಾವಣಾ ಗಿಮಿಕ್ಕುಗಳು

ಪತ್ರಿಕೆಯ ಫೆಬ್ರವರಿ 27ರ ಸಂಚಿಕೆಯಲ್ಲಿ ಮೂಡಿಬ... ಗೌರಿ ಅವರ 'ದೆಹಲಿ ಯುವತಿಗೆ ಮರುಗಿದ ಮ... ಈಗ ಮೌನವಾಗಿರುವುದೇ... ಸಂಪಾದಕೀಯ ಆತ್ಮೀಯವೆನಿಸಿ... ನಾನು ಬೆಂಗಳೂರು ವೈದ್ಯಕೀ... ಕಾಲೇಜಿನಲ್ಲಿ ಸೇವಾನಿರ... ಸ್ನಾತಕೋತ್ತರನಾಗಿದ್ದೇನೆ. ಅವತ್ತು ನಾ... ಆಸ್ಪತ್ರೆಯಲ್ಲಿದ್ದ ವೇಳೆ ಮಾಜಿ ಸಚಿ... ಶೋಭಾ ಕರಂದ್ಲಾಜೆಯವರು ಆಸ್ಪತ್ರೆ... ಭೇಟಿ ನೀಡಿ ಅನಾಮಿಕ ಯುವತಿ... ಆರೋಗ್ಯ ಕುರಿತು ವಿಚಾರಿಸಿಕೊಂ... ಹೋದರು. ಬಹುಶಃ ಪತ್ರಿಕೆ ಪ್ರಕಟಗೊಂಡ ದಿನ... ಇರಬೇಕು.

ಅದೇ ಸಂಚಿಕೆಯಲ್ಲಿ ಅಮೆರಿಕನ್ ಕಮಾಂಡೋ... ಲಾಡೆನ್ ಹತ್ಯೆಯ ಕುರಿತು ಬಿಚ್ಚಿಟ್ಟ ವಿವರಗಳ... ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು. ಈ ಕುರಿತು ಈ ವಾರ... ಇಂಗ್ಲಿಷ್ ಸಿನಿಮಾವೊಂದು ಬಿಡುಗಡೆಗೊಂಡಿದೆ.

ಡಾ. ವಾಸುರವರ 'ಅಂಚಿನಿಂದ' ಓದುಗರನ್ನು ಚಿಂತನೆ... ಹಚ್ಚುತ್ತದೆ. ಕಳೆದ ವಾರ ಎಚ್.ಎಲ್.ಕೆ.ಯವ... ಅಂಕಣವಿಲ್ಲದೇ ಕೊಂಚ ಬೇಸರವೆನಿಸಿತ್ತು.

ಮೈಸೂರಿನ ಉಸ್ತುವಾರಿ ಸಚಿವ ರಾಮದಾಸನ ಚರಿ...

ಟಿಪ್ಪು ಸುಲ್ತಾನನ ನ್ಯಾಯನಿಷ್ಠುರತೆ

ಅನೇಕ ಐತಿಹಾಸಿಕ ವ್ಯಕ್ತಿಗಳ ಬಗೆಗೆ ಸಮಂಜಸವಾದ ಹಾಗೂ ವಿಶ್ವಾಸಾರ್ಹವಾದ ಮಾಹಿತಿ ದೊರಕುವುದಿಲ್ಲ. ಅದರಲ್ಲೂ ಟಿಪ್ಪು ಸುಲ್ತಾನನಂಥ ಮಹತ್ವದ ವ್ಯಕ್ತಿಗಳ ಕುರಿತು ಬಹಳ ಕಾಲದಿಂದ – ಅಂದರೆ ಟಿಪ್ಪುವಿನ ವಿರೋಧಿಗಳಾದ ಬ್ರಿಟಿಷರ ಕಾಲದಿಂದಲೂ – ನಾನಾ ಅಭಿಪ್ರಾಯಗಳು ವ್ಯಕ್ತವಾಗುತ್ತ ಬಂದಿವೆ. ಇತಿಹಾಸ ಬರವಣಿಗೆಯಲ್ಲದೆ ಸೃಜನಶೀಲ ನಾಟಕ, ಕಾದಂಬರಿಗಳೂ ರಚಿತವಾಗಿವೆ. ಜನಶ್ರುತಿಯಲ್ಲೂ ಸಾಕಷ್ಟು ವಿವಾದಾಸ್ಪದ ಅಭಿಪ್ರಾಯಗಳು ಬೆಳೆದುಬಂದಿವೆ.

ಕೆಲವು ವರ್ಷಗಳ ಹಿಂದೆ ಕರಾವಳಿ ಕರ್ನಾಟಕ ಪ್ರದೇಶದಲ್ಲಿ ನಾನು ಕೇಳಿದ್ದ ಒಂದು ವೃತ್ತಾಂತ ಟಿಪ್ಪು ಸುಲ್ತಾನನ ನ್ಯಾಯನಿಷ್ಠುರತೆಯನ್ನು ಎತ್ತಿ ಹೇಳುತ್ತದೆ. ಈ ಪ್ರದೇಶದ ಉಸ್ತುವಾರಿ ವ್ಯವಸ್ಥೆಗೆ ಒಬ್ಬ ಮುಸ್ಲಿಂ ಅಧಿಕಾರಿಯನ್ನು ಟಿಪ್ಪುವೇ ನೇಮಿಸಿದ್ದ. ಆತನು ಮೊದಲಿಗೆ ಸಂಭಾವಿತನಂತಿದ್ದು ಕಾಲಕ್ರಮೇಣ ಕ್ರೂರನೂ, ಲಂಪಟನೂ ಆಗಿ ಈ ಭಾಗದಲ್ಲಿ ಪ್ರಜಾಕಂಟಕನೇ ಆದ. ಕೆಲಕಾ... ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿದ್ದ ಜನರು ಯಾರ ಮೂಲಕವೋ ಈತ... ಅನ್ಯಾಯಗಳ ಕುರಿತಾಗಿ ಸುಲ್ತಾನನಿಗೆ ದೂರಿತ್ತರು. ಒಡನೆಯೇ ಆತನ... ನಿಜಸಂಗತಿಯನ್ನು ಸ್ವತಃ ಪರಿಶೀಲಿಸಲು ಇಲ್ಲಿಗೆ ಧಾವಿಸಿ ಬಂದು ಜನ... ಸಮ್ಮುಖದಲ್ಲೇ ಆ ಅಧಿಕಾರಿಯ ವಿಚಾರಣೆ ಕೈಗೊಂಡ.




ಆ ಅಧಿಕಾರಿಯದು ಪರಮ ಅನ್ಯಾಯವೆಂದು ತಿಳಿದ ಟಿಪ್ಪು ಸುಲ್ತಾ... ಜನರ ಮೂಲಕವೇ ಆ ಅಧಿಕಾರಿಯನ್ನು ಅನಾಮತ್ತಾಗಿ ಎ... ದೊಡ್ಡದೊಂದು ಗೋಣಿ ಚೀಲದಲ್ಲಿ ತುಂಬಿಸಿ, ಬಾಯಿ ಕಟ್ಟಿ ಮೊರೆಯು... ಸಮುದ್ರಕ್ಕೆ ಬಿಸಾಡಿಸಿದ.

ಜನರು ಸುಲ್ತಾನನ ನ್ಯಾಯತತ್ಪರತೆಯನ್ನು ಬಾಯ್ತುಂಬಾ ಕೊಂಡಾಡಿದರು...

- ಅಮೃತ ಸೋಮೇಶ್ವರ, ಮಂಗಳೂರು

...ೀಹಜೀವಿ ಆರ್.ಜಿ.ವಿ. ಇನ್ನಿಲ್ಲ




...ನ್ನಡ ಚಿತ್ರೋದ್ಯಮದಲ್ಲಿ ಹಳೆ ತಲೆಮಾರು ಮತ್ತು ಹೊಸ ತಲೆಮಾರಿನ ಕಲಾವಿದರು ... ಪತ್ರಕರ್ತರ ನಡುವೆ ಕೊಂಡಿಯಾಗಿದ್ದ ಸ್ನೇಹಜೀವಿ ಆರ್.ಜಿ.ವಿಜಯಸಾರಥಿ ಮೊನ್ನೆ ...ವಾದದ್ದು ನಿಜಕ್ಕೂ ಚಲನಚಿತ್ರೋದ್ಯಮಕ್ಕೆ ದೊಡ್ಡ ನಷ್ಟವೇ ಸರಿ.

...ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿದ್ದ ವಿಜಯಸಾರಥಿಯವರು ಪತ್ರಿಕೋದ್ಯಮದ ಮೇಲಿನ ...ಯಿಂದ ಅದಕ್ಕೆ ರಾಜೀನಾಮೆ ಕೊಟ್ಟು, ಫುಲ್‌ಟೈಂ ಪತ್ರಕರ್ತರಾಗಿ ಕೆಲಸ ಆರಂಭಿಸಿದ್ದರು. ... ಯಾವುದೇ ಒಂದು ಪತ್ರಿಕೆಯಲ್ಲಿ ಕೆಲಸ ಮಾಡುವ ಬದಲಿಗೆ ಬೇರೆ ಬೇರೆ ಪತ್ರಿಕೆಗಳಿಗೆ ...ಣಕಾರರಾಗಿದ್ದು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಇವರು ಮೂಲತಃ ಸಿನಿಮಾ ...ರ್ತರಾದರೂ ಸಹ ಕ್ರೀಡೆ, ಬ್ಯಾಂಕ್ ವಹಿವಾಟು ಮತ್ತು ಧಾರ್ಮಿಕ ವಿಷಯಗಳ ಬಗ್ಗೆಯೂ ...ವಾಗಿ ಬರೆಯುತ್ತಿದ್ದರು. ಸಿನಿಮಾ ಪತ್ರಿಕೋದ್ಯಮದಲ್ಲಿ ಸಿನಿಮಾಗಳ ಬಾಕ್ಸ್ ಆಫೀಸ್ ...ರ್ ಬಗ್ಗೆ ಬರೆಯುವ ಪರಂಪರೆಯನ್ನು ಆರಂಭಿಸಿದ್ದೇ ಇವರು. ಕನ್ನಡ ... ಇಂಗ್ಲಿಷ್‌ನಲ್ಲಿ ನಿರಾತಂಕವಾಗಿ ಬರೆಯುತ್ತಿದ್ದ ವಿಜಯಸಾರಥಿಯವರು ...ಚೆಗಷ್ಟೇ ಸಿನಿಮಾ ಮತ್ತು ಟಿ.ವಿಗಳಲ್ಲಿ ನಟಿಸಲೂ ಆರಂಭಿಸಿದ್ದರು. ...ೋದ್ಯಮದಲ್ಲಿ ಅತ್ಯಂತ ಜನಪ್ರಿಯ, ವಿವಾದಾತೀತ, ಪ್ರತಿಭಾನ್ವಿತ ಮತ್ತು ...ಶತ್ತು ಪತ್ರಕರ್ತರಾಗಿ ಸುಮಾರು ಮೂರೂವರೆ ದಶಕಗಳಿಗಿಂತಲೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ ವಿಜಿ ದಿಢೀರನೆ ನಮ್ಮನ್ನೆಲ್ಲ ...ಹೋದದ್ದು ನಿಜಕ್ಕೂ ನೋವಿನ ವಿಷಯ. 'ವಿಜಿ' ಅವರಿಗೆ ನಮ್ಮ ಪ್ರೀತಿಪೂರ್ವಕ ಶ್ರದ್ಧಾಂಜಲಿ.

...ೊರಗೆ ರಾಧಾ, ಒಳಗೆ ರಾಧಿಕಾ

ಕೋಮಲ್ ನಾಯಕನಾಗಿ ನಟಿಸಿರುವ 'ರಾಧಿಕಳ ಗಂಡ' ...ಆರಂಭದಿಂದಲೂ ಶೀರ್ಷಿಕೆಯ ಕಾರಣಕ್ಕೆ ವಿವಾದಕ್ಕೆ ಒಳಗಾಗಿದ್ದು ...ಗೆಲ್ಲ ಗೊತ್ತೇ ಇದೆ. ಈ ಚಿತ್ರದ ಶೀರ್ಷಿಕೆಗೆ ನಟಿ ರಾಧಿಕಾ ...ಾರಸ್ವಾಮಿ ಮತ್ತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ...ೇಧ ವ್ಯಕ್ತಪಡಿಸಿದ್ದರಿಂದ ನಿರ್ಮಾಪಕ ಕಿಂಗ್ ರವಿ ತಮ್ಮ ಚಿತ್ರದ ...ನ್ನು 'ರಾಧಾಳ ಗಂಡ' ಎಂದು ಬದಲಾಯಿಸಿದರು. ಈ ಚಿತ್ರವನ್ನು ...ಲ್ಲೇ ಬಿಡುಗಡೆ ಮಾಡಲು ಕಿಂಗ್ ...ಓಡಾಡುತ್ತಿದ್ದಾರೆ.



...ಶ್ಚರ್ಯವೆಂದರೆ ಈ ಚಿತ್ರದ ಹೆಸರನ್ನು ... ಬದಲಾಯಿಸಿರುವ ಕಿಂಗ್ ರವಿ ... ಹಾಡಿನಲ್ಲಿ ರಾಧಿಕಾ ಎಂಬ ಹೆಸರನ್ನೇ ...ಸಿಕೊಂಡಿದ್ದಾರಂತೆ. ಅಷ್ಟೇ ಅಲ್ಲ ...ದಕ್ಕೂ ಸಂಭಾಷಣೆಯಲ್ಲೂ ರಾಧಿಕಾ ...ೀ ನಾಯಕಿಯ ಪಾತ್ರವನ್ನು ...ಲಾಗುತ್ತದೆಯಂತೆ. ಅಂದರೆ ಚಿತ್ರದ ... ನಾಯಕಿಯ ರಾಧಿಕಾ ಆಗಿದ್ದರೆ, ... ಟೈಟಲ್‌ನಲ್ಲಿ ಮಾತ್ರ ರಾಧಾಳಾಗಿ ಬದಲಾಗಿದ್ದಾಳೆ.

...ಈ ಬದಲಾವಣೆಗೆ ರಾಧಿಕಾ ಕುಮಾರಸ್ವಾಮಿ ತಮ್ಮ ಒಪ್ಪಿಗೆ ...ದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಇನ್ನೆರಡು ವಾರಗಳಲ್ಲಿ ...ಚಿತ್ರದ ಬಿಡುಗಡೆಯಾಗಲಿದ್ದು ರಾಧಿಕಾ ಕುಮಾರಸ್ವಾಮಿ ಕಡೆಯವರು ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಸಾಧ್ಯತೆ ಇದೆ ಎಂಬ ಮಾತು ಕೇಳಿಬರುತ್ತಿದೆ. ಅಂದರೆ 'ರಾಧಿಕಾಳ ಗಂಡ' ಚಿತ್ರಕ್ಕೆ ಹಿಡಿದಿದ್ದ ಶನಿ ಸದ್ಯಕ್ಕೆ ಬಿಡುವ ಲಕ್ಷಣ ಕಾಣಿಸುತ್ತಿಲ್ಲ.

****


ಬಂದ್ ಆದ ಕೋಮಲ್ 'ಪುಂಗಿ'

ಇತ್ತೀಚೆಗೆ ನಟ ಕೋಮಲ್ ಆರಂಭಿಸುವ ಚಿತ್ರದೊಂದಿಗೆ ಒಂದು ವಿವಾದವೂ ಪ್ರಾರಂಭವಾಗುತ್ತಿದೆ. ಅವರು ಸದ್ಯದಲ್ಲೇ ಆರಂಭಿಸಲಿರುವ 'ಪುಂಗಿದಾಸ' ಎಂಬ ಚಿತ್ರದೊಂದಿಗೂ ಒಂದು ವಿವಾದ ಭುಗಿಲೆದ್ದಿದೆ.

ಅದೇನೆಂದರೆ ನಿರ್ಮಾಪಕ ರಾಮು ಅವರು ಈಗಾಗಲೇ 'ಪುಂಗಿದಾಸ' ಎಂಬ ಟೈಟಲ್‌ಅನ್ನು ಫಿಲಂ ಚೇಂಬರ್‌ನಲ್ಲಿ ರಿಜಿಸ್ಟರ್ ಮಾಡಿದ್ದಾರಂತೆ. ಆದ್ದರಿಂದ ಅವರೀಗ "ಯಾವುದೇ ಕಾರಣಕ್ಕೂ ನಾನು ಇಂತಹ ಟೈಟಲ್‌ಅನ್ನು ಬಿಟ್ಟುಕೊಡುವುದಿಲ್ಲ" ಎಂದು ಹೇಳುತ್ತಿದ್ದಾರಂತೆ. ಆದ್ದರಿಂದ ಕೋಮಲ್ ಅವರು "'ಪುಂಗಿದಾಸ' ಟೈಟಲ್ ಇಲ್ಲದಿದ್ದರೇನಂತೆ, ನಾನು ನನ್ನ ಸಿನಿಮಾಗೆ 'ಭಂಗಿದಾಸ' ಎಂದು ಹೆಸರಿಡುತ್ತೇನೆ" ಎನ್ನುತ್ತಿದ್ದಾರಂತೆ. ಆದರರ್ಥ ಕೋಮಲ್ ಸಿನಿಮಾಗೆ ಯಾವ ಹೆಸರಾದರೂ ಪರವಾಗಿಲ್ಲ ಎಂಬುದಲ್ಲವೇ!

ಸತ್ಯಮೇವ ಜಯತೇ

ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಛಾಯಾಗ್ರಾಹಕರು ನಾಯಕ ನಟರಂತೆ ತಾರಾ ವರ್ಚಸ್ಸು ಮತ್ತು ತಾರಾಮೌಲ್ಯವನ್ನು ಗಳಿಸುತ್ತಿದ್ದಾರೆ. ಕಳೆದ ವಾರ ಬಿಡುಗಡೆಯಾದ 'ಮೈನಾ' ಚಿತ್ರದ ನಾಯಕನಾಗಿ ಚೇತನ್ ಮತ್ತು ನಾಯಕಿಯಾಗಿ ನಿತ್ಯಾ ಮೆನನ್ ಕಾಣಿಸಿಕೊಂಡಿದ್ದರೂ ನಿಜವಾಗಿಯೂ ಆ ಚಿತ್ರದ ಹೀರೋ ಛಾಯಾಗ್ರಾಹಕ ಸತ್ಯ ಹೆಗಡೆ ಎಂದು ಬಹುತೇಕ ಪತ್ರಕರ್ತರು, ವಿಮರ್ಶಕರು ಹಾಡಿಹೊಗಳಿದ್ದಾರೆ.



ಕರ್ನಾಟಕ ಮತ್ತು ಗೋವಾ ಗಡಿ ಪ್ರದೇಶದಲ್ಲಿರುವ ದೂದ್ ಸಾಗರ್ ಜಲಪಾತವನ್ನು 'ಮೈನಾ' ಚಿತ್ರದಲ್ಲಿ ಸತ್ಯ ಹೆಗಡೆ ತಮ್ಮ ಕ್ಯಾಮರಾ ಕಣ್ಣಲ್ಲಿ ಸೆರೆಹಿಡಿದಿರುವುದು ಅದ್ಭುತವಾಗಿದೆ. ಸತ್ಯ ಹೆಗಡೆ ಅವರೊಂದಿಗೆ ಚಿಕ್ಕ ಸಂದರ್ಶನ ಇಲ್ಲಿದೆ.

ಪತ್ರಿಕೆ: 'ಮೈನಾ' ಚಿತ್ರಕ್ಕೆ ಬಂದಿರುವ ಪ್ರತಿಕ್ರಿಯೆ ಬಗ್ಗೆ ಹೇಳಿ.

ಸತ್ಯ ಹೆಗಡೆ: ಇದು ನನ್ನ 16ನೇ ಚಿತ್ರ. ಆದ್ದರಿಂದ ಇದನ್ನು ನನ್ನ ವೃತ್ತಿ ಜೀವನದ 'ಸ್ವೀಟ್ ಸಿಕ್ಸ್ಟೀನ್' ಎಂದು ಕರೆಯುತ್ತೇನೆ. ಚಿತ್ರದ ಕಥೆ ಮತ್ತು ನಿರೂಪಣೆಯಲ್ಲಿ ಕ್ಯಾಮರಾ ಕೆಲಸಕ್ಕೆ ಸಾಕಷ್ಟು ಅವಕಾಶ ಇದ್ದುದರಿಂದ ಮತ್ತು ನಿರ್ದೇಶಕ ರಾಜಶೇಖರ್ ಹಾಗು ನಿರ್ಮಾಪಕ ರಾಜ್‌ಕುಮಾರ್ ಎಲ್ಲ ರೀತಿಯ ಸೌಲಭ್ಯ ನೀಡಿದ್ದರಿಂದ ನಾನು ಈ ರೀತಿ ಕೆಲಸ ಮಾಡಲು ಸಾಧ್ಯವಾಯಿತು.

** ದೂದ್ ಸಾಗರ್ ಜಲಪಾತವನ್ನು ಚಿತ್ರೀಕರಿಸುವಲ್ಲಿ ಸಮಸ್ಯೆಗಳು ಎದುರಾದವೇ?*

- ಇದರ ಚಿತ್ರೀಕರಣ ಸಂದರ್ಭದಲ್ಲಿ ಆನಂದ್ ಗೂಡ್ಸ್ ರೈಲಿನಲ್ಲಿ ಡ್ರೈವರ್ ಪಕ್ಕ ಕುಳಿತು ಒಂದು ಗಂಟೆ ಪ್ರಯಾಣ ಮಾಡಬೇಕಿತ್ತು. ಆನಂತರ ಕಾಲ್ನಡಿಗೆಯಲ್ಲಿ ಒಂದು ಗಂಟೆ ಬೆಟ್ಟವನ್ನು ಹತ್ತಬೇಕಿತ್ತು. ಇದೆಲ್ಲದರ ನಡುವೆ ಮಳೆ, ಗಾಳಿ ಬಂದರೆ ಅದನ್ನು ಸಹಿಸಿಕೊಂಡು ಶೂಟಿಂಗ್ ಸ್ಥಳವನ್ನು ತಲುಪಬೇಕಿತ್ತು. ಈ ನಿಟ್ಟಿನಲ್ಲಿ ನಮ್ಮ ಇಡೀ ತಂಡ ಕಷ್ಟಪಟ್ಟಿದ್ದರಿಂದ ಬೆಳ್ಳಿತೆರೆಯ ಮೇಲೆ ಒಳ್ಳೆಯ ಫಲಿತಾಂಶ ಕಾಣಿಸುತ್ತಿದೆ. ಅದರಲ್ಲಿ ನನ್ನ ವಿಶೇಷ ಸಾಧನೆಯೇನೂ ಇಲ್ಲ.

** ಈ ಚಿತ್ರಕ್ಕೆಂದು ಏನಾದರು ವಿಶೇಷ ಸಿದ್ಧತೆ ಮಾಡಿಕೊಂಡಿದ್ದಿರಾ?*

- ವಿಶೇಷವಾದ ತಯಾರಿಯನ್ನೇನೂ ನಾನು ಮಾಡಿಕೊಂಡಿರಲಿಲ್ಲ. ನಿಜ ಹೇಳಬೇಕೆಂದರೆ ನನಗೆ ದೂದ್ ಸಾಗರ್ ಚಿತ್ರೀಕರಿಸಿದ್ದಕ್ಕಿಂತ ನಾನು ಲೈಟಿಂಗ್ ಮಾಡಿ ನಾಯಕ-ನಾಯಕಿಯ ಮಾತನಾಡುವ ದೃಶ್ಯಗಳನ್ನು ಶೂಟ್ ಮಾಡಿದ್ದೇ ನನಗೆ ಹೆಚ್ಚು ಖುಷಿ ನೀಡಿದೆ. ಅದರಲ್ಲೂ ಸುಂದರಿಯಾದ ನಾಯಕಿ ನಿತ್ಯಾ ಮೆನನ್ ಅವರ ಒಳಸೌಂದರ್ಯವನ್ನು ಪ್ರೇಕ್ಷಕರಿಗೆ ತೋರಿಸುವುದು ನನಗೆ ಒಂದು ಸವಾಲಿನ ಕೆಲಸವಾಗಿತ್ತು. ಅದನ್ನು ಸಮರ್ಥವಾಗಿ ನಿರ್ವಹಿಸಿದ್ದೇನೆ ಎಂಬ ಭಾವನೆ ನನ್ನದು.


** ಇವತ್ತು ಕನ್ನಡ ಚಿತ್ರರಂಗದಲ್ಲಿ ನೀವು ಅತ್ಯಂತ ದುಬಾರಿಯ ಮತ್ತು ಬೇಡಿಕೆಯಲ್ಲಿರುವ ಛಾಯಾಗ್ರಾಹಕ ಆಗಿದ್ದೀರಿ. ನಿಮ್ಮ ಯಶಸ್ಸಿನ ಗುಟ್ಟೇನು?*

- ನನ್ನ ಅದೃಷ್ಟಕ್ಕೆ ಆರಂಭದಲ್ಲಿ ನನಗೆ ಒಳ್ಳೆಯ ಗುರುಗಳು ಸಿಕ್ಕಿದರು. ನಾನು ಗೌರಿಶಂಕರ್, ರಾಜನ್, ವೇಣು ಮತ್ತು ಅಶೋಕ್ ಕಶ್ಯಪ್ ಅವರ ಜೊತೆ ಕೆಲಸ ಮಾಡಿದೆ. ಆನಂತರ ಸೂರಿ, ಯೋಗರಾಜ್ ಭಟ್, ನಾಗಶೇಖರ್ ಮತ್ತು ಅರ್ಜುನ್ ತರಹದ ದೊಡ್ಡ ದೊಡ್ಡ ನಿರ್ದೇಶಕರು ಮತ್ತು ಒಳ್ಳೆಯ ಅಭಿರುಚಿಯನ್ನು ಹೊಂದಿರುವವರೊಂದಿಗೆ ಕೆಲಸ ಮಾಡುವ ಅವಕಾಶಗಳು ಸಿಕ್ಕವು. ಹೀಗಾಗಿ ನನಗೆ ಚಿತ್ರರಂಗದಲ್ಲಿ ಒಳ್ಳೆಯ ಓಪನಿಂಗ್ಸ್ ಅಲ್ಲದೆ ಇಲ್ಲಿಯ ತನಕ ಒಳೆಯ ರನ್‌ರೇಟ್ ಸಿಕ್ಕಿದೆ ಎನ್ನಬಹುದು. ಮುಂದೆ ಏನಾಗುತ್ತೋ ನೋಡಬೇಕು.

● ಶೆಣೈ

...ಕಂತೆ ಸಕಾಲದಲ್ಲಿ ಪತ್ರಿಕೆಯಲ್ಲಿ ವರದಿಗಳು ...ವಾಗುತ್ತಿದೆ. ಈತನ ವೈದ್ಯಕೀಯ ಶಿಕ್ಷಣ ...ಯಲ್ಲಿನ ಮಿತಿಮೀರಿದ ಅವ್ಯವಹಾರಗಳು, ...ಳ್ಳತನ, ಚುನಾವಣಾ ಗಿಮಿಕ್ಸ್‌ಗಳ ಬಗ್ಗೆ ಸವಿವರವಾದ ...ಗಳನ್ನು ಪ್ರಕಟಿಸಿದ್ದೀರಿ. ಧನ್ಯವಾದಗಳು.

- ಡಾ. ಕೆ.ಎಸ್. ಯತೀಶ್, ಮೈಸೂರು



ಕನ್ನಡದ ಕೋಟ್ಯಾಧಿಪತಿ ಪಾರದರ್ಶಕವಾಗಿದೆಯೇ?

...ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮ ಸುವರ್ಣ ...ನಲ್ಲಿ ಮತ್ತೆ ಶುರುವಾಗಲಿದೆ ಎಂಬ ತಮ್ಮ ಮಾರ್ಚ್ ...ಸಂಚಿಕೆಯಲ್ಲಿ ಬಂದ ಸುದ್ದಿಯ ಬಗ್ಗೆ ಹೇಳಬೇಕೆಂದರೆ: ...ಕಾರ್ಯಕ್ರಮ ಕಿರುತೆರೆಯ ಮೇಲೆ ಕಂಡಷ್ಟು ...ನಾಗಿಯೂ ಪಾರದರ್ಶಕ ಹಾಗು ...ಾಣಿಕವಾಗಿದೆಯೇ? ಅಮಿತಾಭ್ ಬಚ್ಚನ್ ನಡೆಸುವ ...ಯ 'ಕೌನ್ ಬನೇಗಾ ಕರೋಡಪತಿ' ಬಗ್ಗೆ ಈಗಾಗಲೆ ...ವಾರು 'ಫಿಕ್ಸಿಂಗ್' ಆರೋಪಗಳು ಕೇಳಿಬರುತ್ತಿವೆ.

...ಮಾರ್ಚ್ 11 ರಿಂದ ಸುವರ್ಣ ಚಾನೆಲ್‌ನಲ್ಲಿ ...ವಾಗಲಿರುವ 'ಕನ್ನಡದ ಕೋಟ್ಯಾಧಿಪತಿ'ಗೆ ...ಾಗೆರೆಯಲ್ಲಿ ಜನವರಿ ತಿಂಗಳಲ್ಲಿ ನಡೆದ ಸಂದರ್ಶನದ ... ಸ್ಪರ್ಧಿಯಾಗಿ ಆಯ್ಕೆಯಾಗಿದ್ದ 58 ವರ್ಷದ ನನ್ನ ... ಅನುಭವ ಕೇಳಿದಾಗ ಎಲ್ಲವೂ ಪಾರದರ್ಶಕವಾಗಿಲ್ಲ ...ಸುತ್ತದೆ. ದಾವಣಗೆರೆಯಲ್ಲಿ ಸಂದರ್ಶನಕ್ಕೆ ಹೋಗಿದ್ದಾಗ ...ಕ್ಕನಿಗೆ ಓರ್ವ 24 ವರ್ಷ ವಯಸ್ಸಿನ ಶ್ರೀಮಂತ ...ಗಿಯ ಪರಿಚಯವಾಯಿತು. ಅವಳೇ ನನ್ನ ಆಕ್ಕನಿಗೆ ...ದಳು "ನಿಮ್ಮ ಜೀವನದಲ್ಲಿ ನಡೆದಿರುವ ದುಃಖದ ...ಗಳನ್ನು ಉತ್ಪ್ರೇಕ್ಷಿಸಿ ಸಂದರ್ಶನದಲ್ಲಿ ಹೇಳಬೇಕು ಮತ್ತು ಜೋರಾಗಿ ಅಳಬೇಕು". ಅದಕ್ಕೆ ನನ್ನ ಅಕ್ಕ "ನನ್ನ 58 ವರ್ಷದ ಜೀವನದಲ್ಲಿ ಅಂತಹ ದುಃಖದ ಘಟನೆಗಳೇನೂ ನಡೆದಿಲ್ಲ, ಹಾಗಾಗಿ ಕೇವಲ ಆಯ್ಕೆಗೊಳ್ಳಲು ಕಟ್ಟುಕಥೆ ಏನೂ ಹೇಳಲಾರೆ" ಎಂದು ಹೇಳಿದರು. ಆಗ ಆ ಹುಡುಗಿ "ನನ್ನ ಜೀವನದಲ್ಲೂ ಅಂತಹ ಏನೂ ಕೆಟ್ಟ ಘಟನೆಗಳು ನಡೆದಿಲ್ಲ, ನನ್ನ ಕುಟುಂಬ ಮೂರು-ನಾಲ್ಕು ತಲೆಮಾರಿನಿಂದ ಸುಖವಾಗೇ ಇದೆ. ಆದರೆ ಹಾಗೆ ಹೇಳಿದರೆ ಸಂದರ್ಶನದಲ್ಲಿ ನಾವು ಆಯ್ಕೆ ಆಗುವುದಿಲ್ಲ" ಎಂದಳಂತೆ.

ಅವಳ ಸರದಿ ಬಂದಾಗ ಅವಳು ಸಂದರ್ಶನ ಕೋಣೆಗೆ ಹೋಗಿ ಐದು ನಿಮಿಷದ ನಂತರ ಅವಳು ಗೋಳೋ ಎಂದು ಅಳುವುದು ಹೊರಗೂ ಕೇಳಿಸಿತು. ಸ್ವಲ್ಪ ಹೊತ್ತಿನ ನಂತರ ಅವಳು ನಗುತ್ತಾ ಹೊರಬಂದು "ನಾನು ಹೇಳಿದ ದುಃಖದ ಕಟ್ಟು ಕಥೆ ಅವರಿಗೆ ಇಷ್ಟವಾಯಿತು. ನನ್ನ ಆಯ್ಕೆ ಖಚಿತ" ಎಂದು ಹೇಳಿದಳು.


ಕೊನೆಗೆ ಹಾಗೆಯೇ ಆಯಿತು. ಫಾಸ್ಟೆಸ್ಟ್ ಫಿಂಗರ್‌ನಲ್ಲೂ ಅವಳು ಗೆದ್ದು ಹಾಟ್-ಸೀಟ್‌ಗೆ ಬಂದು ಅದೇ ಕಟ್ಟು ಕಥೆ ಹೇಳಿದನ್ನು ಮಾರ್ಚ್- 11 ರ ನಂತರ ಮೊದಲನೇ ಕಂತಿನಲ್ಲೇ ಪ್ರೇಕ್ಷಕರು ಸ್ವತಃ ನೋಡಬಹುದು.

ನನ್ನ ಅಕ್ಕನ ಸಂದರ್ಶನದ ವೇಳೆ ಸಂದರ್ಶಕರೆ "ನಿಮ್ಮ ಜೀವನದ ದುಃಖದ ಘಟನೆಗಳನ್ನು ಹೇಳಿ" ಎಂದು ಕೇಳಿದರು. ಆದರೆ ಅವಳು ಹೇಳಲಿಲ್ಲ, ಆದರೂ ವಯಸ್ಸಿನ ಆಧಾರದ ಮೇಲೆ ಹಾಗು 'ಅಜ್ಜಿ' ಎಂಬ ಪದವಿಯಿಂದಾಗಿ ಫಾಸ್ಟೆಸ್ಟ್ ಫಿಂಗರ್‌ಗೆ ಆಯ್ಕೆ ಆದಳು. ಆನಂತರ ಮೇಲಿಂದ ಮೇಲೆ ಅವರು ಫೋನ್ ಮಾಡಿ "ಒಂದು ವೇಳೆ ಹಾಟ್ ಸೀಟ್‌ಗೆ ನೀವು ಆಯ್ಕೆಯಾದರೆ ಯಾವ ಯಾವ ವಿಷಯಗಳನ್ನು ಪುನೀತ್ ಜೊತೆ ಮಾತನಾಡಬೇಕು, ಸಂದಿಗ್ಧ ವಿಷಯಗಳನ್ನು ಮಾತನಾಡಬಾರದು, ಡಾ.ರಾಜ್‌ಕುಮಾರರನ್ನು ಹೊಗಳಬೇಕು, ಅವರ ಹಳೆಯ ಚಿತ್ರಗಳನ್ನು ನೋಡಿರದಿದ್ದರೂ ನೋಡಿದ್ದೇವೆ ಎಂದು ಹೇಳಬೇಕು, ಸಣ್ಣ ವಯಸ್ಸಿನಲ್ಲಿ ಅವರ ಹುಚ್ಚು ಅಭಿಮಾನಿಯಾಗಿದ್ದೆ ಎಂದು ಹೇಳಬೇಕು" ಮುಂತಾಗಿ ಫೋನಿನಲ್ಲೇ ಬಾಯಿಪಾಠ ಮಾಡಿಸುತ್ತಾರೆ. ಅವರು ಬಾಯಿಪಾಠ ಮಾಡಿಸಿದ ವಾಕ್ಯಗಳನ್ನು ಬಿಟ್ಟು ನಮ್ಮ ಸ್ವಂತದ ಬೇರೆ ಒಂದು ವಾಕ್ಯವನ್ನೂ ನಾವು ಹೇಳುವಂತಿಲ್ಲ.

ಹಾಗಾದರೆ ಇದನ್ನು 'ರಿಯಾಲಿಟಿ ಶೋ' ಎನ್ನಬೇಕೇ ಅಥವಾ 'ಸ್ಟೇಜ್ ಮ್ಯಾನೇಜ್-ನಾಟಕ' ಎನ್ನಬೇಕೇ? ಹಾಟ್‌ಸೀಟ್‌ಗೆ ಬಂದ ಸ್ಪರ್ಧಿಗಳು ಗೋಳೋ ಎಂದು ಅಳುವುದು ಮತ್ತು ತಮ್ಮ ಜೀವನದ ಕಷ್ಟದ ಕಥೆಗಳನ್ನು ಬಿಕ್ಕಿ-ಬಿಕ್ಕಿ ಹೇಳುವುದು, ಅದಕ್ಕೆ ತಕ್ಕಂತೆ ಅವರ ಕಹಿ ಜೀವನದ ಹಿನ್ನೆಲೆಯನ್ನು ಚಿತ್ರಿಸಿ ಪ್ರೇಕ್ಷಕರಿಗೆ ತೋರಿಸುವುದು ಇವೆಲ್ಲಾ ಕೃತಕ. ಭಾವುಕ ಪ್ರೇಕ್ಷಕರ ಸಿಂಪತಿ ಗೆದ್ದು ಟಿ.ಆರ್.ಪಿ ಹೆಚ್ಚಿಸುವ ಟ್ರಿಕ್‌ಗಳು ಅಷ್ಟೇ.

- ಗಿರೀಶ್ ಟಿ.ಜಿ. ಬೆಳಗಾವಿ

ಚರ್ಚೆ ಮತ್ತು ಭೀತಿ ಹುಟ್ಟುಹಾಕಿದ ಕಾಟ್ಜು



ಮಾರ್ಕಂಡೇಯ ಕಾಟ್ಜು ಅವರ 'ಅರೇಬಿಯಾದ ಎಲ್ಲ ಅತ್ತರಗಳನ್ನು ಪೂಸಿದರೂ' ಲೇಖನವನ್ನು 'ದಿ ಹಿಂದೂ' ಪತ್ರಿಕೆಯಲ್ಲಿ ಓದಿದಾಗಲೇ ಇದೊಂದು ಚರ್ಚೆ ಹುಟ್ಟು ಹಾಕಬಲ್ಲ ಲೇಖನ ಎಂದು ಅನ್ನಿಸಿತ್ತು. ವಿಚಾರವಂತರ ನಡುವೆ ಅದು ಚರ್ಚೆಯನ್ನು ಹುಟ್ಟು ಹಾಕಿತ್ತು. ಆದರೆ ಬಿಜೆಪಿಯವರಲ್ಲಿ ಭೀತಿಯನ್ನು ಹುಟ್ಟುಹಾಕಿತು. ಸಮೂಹ ಸನ್ನಿಯಲ್ಲಿ ಸತ್ಯ ಕಳೆದುಹೋಗದಂತೆ ಮಾಡುವ ಪ್ರಯತ್ನ ಇಂದಿನ ಜರೂರಾಗಿದೆ.

ಕಾಟ್ಜು ಮತ್ತು ಅವರ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ ಸುರೇಶ್ ಭಟ್ ಬಾಕ್ರಬೈಲ್ ಅವರಿಗೆ ವಂದನೆಗಳು.

- ರವಿಕುಮಾರ್, ಹಾಸನ

ನನ್ನ ತೇಜೋವಧೆ ಮಾಡಿ ನಿಮಗೇನು ಲಾಭ ಬರುತ್ತೆ?

ಪತ್ರಿಕೆಯ ಫೆಬ್ರವರಿ 27ರ ಸಂಚಿಕೆಯ ಪುಟ ಸಂಖ್ಯೆ 12 ರಲ್ಲಿ 'ಬಿಎಂಟಿಸಿ ಜೀತ ಪದ್ಧತಿ' ಎಂಬ ಲೇಖನದಲ್ಲಿ ನನ್ನ ಬಗ್ಗೆ ಈ ಕೆಳಕಂಡಂತೆ ಬರೆದಿರುವುದು ಕಂಡುಬಂದಿದೆ: "ಕೆಎಸ್‌ಆರ್‌ಟಿಸಿ ತಾಂತ್ರಿಕ ನಿರ್ದೇಶಕ ಎಸ್.ಕೆ. ಪರಮೇಶ್ 1992 ರಿಂದಲೂ ಶಿಸ್ತುಪಾಲನಾಧಿಕಾರಿಯಾಗಿದ್ದಾಗ ಹಣದ ಆಮಿಷಕ್ಕೆ ಸಿಬ್ಬಂದಿಗೆ ಮನಸೋಇಚ್ಛೆ ಶಿಕ್ಷೆ ನೀಡಿದ್ದು ಇದೀಗ ಬೆಳಕಿಗೆ ಬಂದಿದೆ."

ಇಡೀ ಲೇಖನದ ಧಾಟಿಯನ್ನು ನೋಡಿದರೆ ನನ್ನ ಮೇಲೆ ಮಾಡಿರುವ ಆರೋಪಕ್ಕೂ ಜೀತ ಪದ್ಧತಿಗೂ ಏನೂ ಸಂಬಂಧವಿಲ್ಲ.

ನಾನು 31 ವರ್ಷಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಿವಿಧ ಹಂತದ ಹಲವಾರು ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿದ್ದೇನೆ. ನಿವೃತ್ತಿಯಾಗಲು ಇನ್ನು ಕೇವಲ ಎರಡು ತಿಂಗಳು ಮಾತ್ರ ಬಾಕಿ ಉಳಿದಿದೆ. ಸುದೀರ್ಘವಾದ ಸೇವೆಯಲ್ಲಿ ಯಾವುದೇ ಭ್ರಷ್ಟಾಚಾರದ ಆರೋಪಗಳಿಲ್ಲ. ಅಸೂಯೆ ಹಾಗೂ ಪೂರ್ವಾಗ್ರಹಪೀಡಿತರಾಗಿ ಮಾಡಿದ್ದ ಒಂದು ಆಪಾದನೆಯಲ್ಲಿಯೂ ಸಹ ನಾನು ನಿರ್ದೋಷಿಯಾಗಿ ಹೊರಬಂದಿದ್ದೇನೆ. ಪರಿಸ್ಥಿತಿ ಹೀಗಿರುವಾಗ ನಾನು ಹಣದ ಆಮಿಷಕ್ಕೆ "ಸಿಬ್ಬಂದಿಗೆ ಮನಸೋಇಚ್ಛೆ ಶಿಕ್ಷೆ ನೀಡಿದ್ದು ಈಗ ಬೆಳಕಿಗೆ ಬಂದಿದೆ" ಎಂದು ನನ್ನ ಬಗ್ಗೆ ಬರೆದಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

ಸಾರಿಗೆ ನಿಗಮದಂತಹ ಒಂದು ದೊಡ್ಡ ಸಂಸ್ಥೆಯ ಹಿರಿಯ ಅಧಿಕಾರಿಯ ಬಗ್ಗೆ ಬರೆಯುವಾಗ ನೀವು ಎಚ್ಚರ ವಹಿಸಬೇಕಿತ್ತು. ನನ್ನ ತೇಜೋವಧೆ ಮಾಡಿ ನಿಮಗೇನು ಲಾಭ ಬರುತ್ತದೊ ನನಗೆ ತಿಳಿಯದು. ಯಾರದ್ದೊ ಹೇಳಿಕೆ ಮಾತು ಕೇಳಿಕೊಂಡು ಪತ್ರಿಕೆಯಲ್ಲಿ ಬರೆಯುವುದು ನನ್ನ ತೇಜೋವಧೆಗೆ ಮಾಡಿದ ಪ್ರಯತ್ನ ಎಂದು ನಾನು ಭಾವಿಸುತ್ತೇನೆ. ಮೌಲ್ಯಗಳನ್ನು ಪ್ರತಿಪಾದಿಸುವ ನಿಮ್ಮಂತಹ ಪತ್ರಿಕೆಯಲ್ಲಿ ಹೀಗೆ ಬರೆದಿರುವುದು ನನಗೆ ನೋವುಂಟುಮಾಡಿದೆ.

"ಇತ್ತೀಚೆಗೆ ಲೋಕಾಯುಕ್ತ ಬಲೆಗೆ ನಾನು ಬಿದ್ದೆ" ಎನ್ನುವುದು ಬಹುಶಃ ನನ್ನ ಬಗ್ಗೆ ಅಪಪ್ರಚಾರ ಮಾಡಲು ಕೆಲ ದುಷ್ಟಶಕ್ತಿಗಳು ನಿಮ್ಮ ಪತ್ರಿಕೆಯನ್ನು ಉಪಯೋಗಿಸಿರಬಹುದು. ಲೋಕಾಯುಕ್ತ ದಾಳಿಯು ಕೆಲ ಮಾಧ್ಯಮಗಳಲ್ಲಿ ಪ್ರಚಾರವಾದ ಕಾರಣಕ್ಕೆ ನಾನು ಖಂಡನಾರ್ಹ ವ್ಯಕ್ತಿಯಲ್ಲ. ಈ ಬಗ್ಗೆ ವಿಚಾರಣೆಯ ಹಂತದಲ್ಲಿರುವುದರಿಂದ ಅದರ ಬಗ್ಗೆ ಹೇಳುವುದು ಉಚಿತವಲ್ಲ. ಇಂತಹ ಹುರುಳಿಲ್ಲದ ಆಪಾದನೆ ಮಾಡಿರುವುದನ್ನು ನಾನು ತೀವ್ರವಾಗಿ ಪ್ರತಿಭಟಿಸುತ್ತೇನೆ.

- ಎಸ್.ಕೆ. ಪರಮೇಶ್, ಪ್ರಾಂಶುಪಾಲರು, ಕ.ರಾ.ರ.ಸಾ. ನಿಗಮ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 13-03-2013 RNI No. KARKAN2005/14

ಮನಮುಟ್ಟುವ ಮಕ್ಕಳ ಸಿನಿಮಾ 'ಶೇಷು'


ಸುಭಾಷ್ ಚಂದ್ರ

ದಾವಣಗೆರೆಯ ಎಸ್.ಬಿ. ಸುಭಾಷ್ ಚಂದ್ರ ಮತ್ತು ಚಂದ್ರಿಕಾ ಅವರು ಜಂಟಿಯಾಗಿ 'ಶೇಷು' ಎಂಬ ಮಕ್ಕಳ ಸಿನಿಮಾವನ್ನು ನಿರ್ಮಿಸಿದ್ದಾರೆ. ಮಲೆನಾಡಿನ ಪಾರ್ವತಿಪುರ ಎಂಬ ಕಾಲ್ಪನಿಕ ಹಳ್ಳಿಯಲ್ಲಿ ವಾಸಿಸುವ, ಕನಸು ಕಾಣುವ, ಚೇಷ್ಟೆಗಳಲ್ಲಿ ಭಾಗಿಯಾಗುವ ಬಡ ಬಾಲಕ ಶೇಷುವಿನ ಕತೆ ಹೇಳುವ ಸಿನಿಮಾ ಇದು.

ಓಟದಲ್ಲಿ ಆಸಕ್ತಿ ಹೊಂದಿರುವ ಶೇಷುವಿಗೆ ಕ್ರೀಡಾ ಸ್ಪರ್ಧೆಯಲ್ಲಿ ಗೆಲ್ಲುವ ಆಸೆ. ಆದರೆ ಆತನದ್ದು ಎಂತಹ ದಾರುಣ ಬದುಕೆಂದರೆ ಅವನ ತಂದೆಗೆ ಜ್ವರ ಬಂದು ಹಾಸಿಗೆ ಹಿಡಿದಾಗ ಶೇಷುವೇ ಸಾಹುಕಾರನ ಮನೆಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಹಗಲು ಇರುಳು ಸಾಹುಕಾರನ ಮನೆಯಲ್ಲಿ ಕೆಲಸ ಮಾಡುವಾಗ ಶೇಷುವಿನ ಕಾಲಿಗೆ ಪೆಟ್ಟಾಗುತ್ತದೆ. ಸೂಕ್ತ ವೈದ್ಯಕೀಯ ನೆರವು ಸಿಗದೆ ಶೇಷು ಕ್ರೀಡಾ ಸ್ಪರ್ಧೆಯಿಂದ ದೂರ ಉಳಿಯುವಂತಾಗುತ್ತದೆ. ಇದರಿಂದ ಆ ಬಾಲಕ ಖಿನ್ನನಾಗುತ್ತಾನೆ. ಆಗ ಆತನ ಶಾಲೆಯ ಶಿಕ್ಷಕಿ (ಸಹ ನಿರ್ಮಾಪಕಿ ಚಂದ್ರಿಕಾ ಅವರೇ ನಿರ್ವಹಿಸಿರುವ ಪಾತ್ರ) ಶೇಷು ಖಿನ್ನತೆಯಿಂದ ಹೊರಬರಲು ನೆರವಾಗುತ್ತಾರೆ. ಪರಿಣಾಮವಾಗಿ ಕೊನೆಗೂ ಶೇಷು ತನ್ನ ಕನಸುಗಳನ್ನು ನನಸಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ.


ಚಂದ್ರಿಕಾ

ಗಾರ್ಗಿ ಕಾರೆಹಕ್ಲು ನಿರ್ದೇಶಿಸಿರುವ, ನಾಗರಾಜ್ ಆದ್ವಾನಿ ಅವರ ಛಾಯಾಗ್ರಹಣವನ್ನು ಹೊಂದಿರುವ ಈ ಸಿನಿಮಾ ಮಲೆನಾಡಿನ ಸೌಂದರ್ಯವನ್ನು ಮತ್ತು ಮಕ್ಕಳ ಮನಸ್ಸಿನ ಮುಗ್ಧತೆಯನ್ನು ಚೆನ್ನಾಗಿ ಸೆರೆಹಿಡಿದಿದೆ.

ಇತ್ತೀಚೆಗೆ ಬಂದಿರುವ ಮಕ್ಕಳ ಸಿನಿಮಾ ಪೈಕಿ ಇದೊಂದು ಉತ್ತಮ ಚಿತ್ರವಾಗಿದೆ.



'ಮೈನಾ'ದಲ್ಲೊಂದು ಅಪಸ್ವರ

'ಮೈನಾ' ಚಿತ್ರದ ನಿರ್ಮಾಪಕ ರಾಜ್‌ಕುಮಾರ್ ಮತ್ತು ನಿರ್ದೇಶಕ ನಾಗಶೇಖರ್ ನಡುವಿನ ಮುಸುಕಿನ ಗುದ್ದಾಟ ಕೊನೆಗೂ ಚಿತ್ರ ಬಿಡುಗಡೆಯಾದ ನಂತರ ಬಹಿರಂಗವಾಗಿದೆ.

ಈ ಚಿತ್ರದ ಉತ್ತರಾರ್ಧದಲ್ಲಿ ಬರುವ ಒಂದು ಹಾಡನ್ನು ನಿರ್ಮಾಪಕ ರಾಜ್‌ಕುಮಾರ್ ಬದಲಾಯಿಸಿ ವಿರಾಮದ ಮೊದಲೇ ಸೇರಿಸಿದ್ದಾರೆ. ಹಾಗೆಯೇ ಈ ಚಿತ್ರದ ತೆಲುಗು ಮತ್ತು ತಮಿಳು ಅವತರಣಿಕೆಯನ್ನು ಬಿಡುಗಡೆ ಮಾಡುವ ಮುನ್ನ ಹಲವು ದೃಶ್ಯಗಳನ್ನು ರೀ ಶೂಟ್ ಮಾಡಲು ನಿರ್ಧರಿಸಿದ್ದಾರೆ. ಅಷ್ಟೇ ಅಲ್ಲ, ಕನ್ನಡದಲ್ಲಿ ದುಃಖದಲ್ಲಿ ಅಂತ್ಯಗೊಳ್ಳುವ ಚಿತ್ರ ಇತರೆ ಭಾಷೆಗಳಲ್ಲಿ ಸುಖಾಂತ್ಯವನ್ನು ಕಾಣಲಿದೆ. ಈಗಾಗಲೇ ತಮಿಳು ನಿರ್ದೇಶಕರೊಬ್ಬರ ಸಹಾಯವನ್ನು ಪಡೆದಿರುವ ರಾಜ್‌ಕುಮಾರ್ ನಾಯಕ ನಟ ಚೇತನ್, ನಾಯಕಿ ನಿತ್ಯಾ ಮೆನನ್ ಅವರ ಕಾಲ್‌ಶೀಟ್‌ಗಳನ್ನೂ ಪಡೆದಿದ್ದಾರೆ. ಜೊತೆಗೆ ಈ ಚಿತ್ರದಲ್ಲಿರುವ ಸಾಧುಕೋಕಿಲ ಮತ್ತು ಇನ್ನಿತರ ಹಾಸ್ಯ ನಟರ ಟ್ರ್ಯಾಕ್‌ನ್ನು ತಮಿಳು-ತೆಲುಗು ಅವತರಣಿಕೆಯಲ್ಲಿ ಬದಲಾಯಿಸಲು ಸಜ್ಜಾಗಿದ್ದಾರೆ. "ಈ ಚಿತ್ರ ಈಗಿರುವಂತೆಯೇ ಇದ್ದರೆ ನನಗೆ ಕನಿಷ್ಠವೆಂದರೂ ನಾಲ್ಕು ಕೋಟಿ ರೂ.ಗಳು ನಷ್ಟವಾಗುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ನಿರ್ದೇಶಕ ಚಿತ್ರ ಬಿಡುಗಡೆಯಾದ ನಂತರ ಜನಾಭಿಪ್ರಾಯವನ್ನು ಮನ್ನಿಸಿ, ಕೆಲವು ಬದಲಾವಣೆಗಳನ್ನು ಮಾಡುವ ಮನೋಭಾವವನ್ನು ತೋರಿಸಬೇಕು. ಅದನ್ನು ಬಿಟ್ಟು ನಾನು ಮಾಡಿದ್ದೇ ಸರಿ ಎಂದು ಹಠತೊಟ್ಟು ಕುಳಿತರೆ ನಿರ್ಮಾಪಕನಾಗಿ ನಾನು ಹಾಕಿದ ಬಂಡವಾಳ ವಾಪಸ್ ಬರುವುದು ಹೇಗೆ?" ಎಂದು ರಾಜ್‌ಕುಮಾರ್ ಪ್ರಶ್ನಿಸುತ್ತಿದ್ದಾರೆ.

ತಮ್ಮ ಚಿತ್ರದಲ್ಲಿ ನಿರ್ಮಾಪಕ ಇಂತಹ ಬದಲಾವಣೆಗಳನ್ನು ಮಾಡಲು ಹೊರಟಿದ್ದರೂ ನಿರ್ದೇಶಕ ನಾಗಶೇಖರ್ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ, ಅವರ ಫೋನ್ ಈಗ ಆಫ್ ಆಗಿದೆ. 'ಮೈನಾ' ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕರ ನಡುವಿನ ಈ ಸಣ್ಣ ಮನಸ್ತಾಪ ದೊಡ್ಡದಾಗಿ ಬೆಳೆದು ಬಾಕ್ಸ್ ಆಫೀಸಿನಲ್ಲಿ ಚಿತ್ರಕ್ಕೆ ತೊಂದರೆಯಾಗದಿದ್ದರೆ ಸಾಕು ಎಂಬುದೇ ಎಲ್ಲರ ಆಶಯ.



ಉಮೇಶ್ ರೆಡ್ಡಿಗೆ 'ಶಿಕ್ಷೆ'



ಕೊನೆಗೂ ರೌಡಿಗಳ, ದರೋಡೆಕೋರರ, ವಿಕೃತಕಾಮಿಗಳ ಕುರಿತು ಸಿನಿಮಾ ಮಾಡುವ ಕನ್ನಡ ಚಿತ್ರರಂಗದ ಪರಂಪರೆಗೆ ಒಂದ ಸಣ್ಣ ಹಿಂದೇಟಾಗಿದೆ.

ಕಳೆದ ವಾರ 'ಉಮೇಶ್ ರೆಡ್ಡಿ' ಚಿತ್ರದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ನಿರ್ದೇಶಕ ಮಳವಳ್ಳಿ ಸಾಯಿಕೃಷ್ಣ ಅವರು "ಯಾರು ವಿರೋಧಿಸಿದರೂ ಯಾವುದೇ ಕಾರಣಕ್ಕೂ ನಾನು ಈ ಚಿತ್ರದ ಶೀರ್ಷಿಕೆಯನ್ನಾಗಲಿ, ಕತೆಯನ್ನಾಗಲಿ ಬದಲಾಯಿಸುವುದಿಲ್ಲ" ಎಂದು ಗುಡುಗಿದ್ದರು. ಅದಕ್ಕೆ ಸರಿಯಾಗಿ ಈ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡಲು ಒಪ್ಪಿಕೊಂಡಿರುವ ನಟ ರವಿಕಾಳೆ ಕೂಡ "ನನಗೆ ಈ ವಿಕೃತಕಾಮಿ, ಕೊಲೆಗಾರನ ಪಾತ್ರ ಮಾಡಲು ಯಾವುದೇ ನಾಚಿಕೆಯಿಲ್ಲ, ಏಕೆಂದರೆ ನಾನು ಈ ಪಾತ್ರವನ್ನು ನಿರಾಕರಿಸಿದರೆ ಇನ್ನಾರಾದರೂ ಮಾಡುತ್ತಾರೆಂಬುದು ನನಗೆ ಗೊತ್ತು, ಆದ್ದರಿಂದ ಒಬ್ಬ ಕಲಾವಿದನಾಗಿ ನನಗೆ ಬಂದ ಪಾತ್ರವನ್ನು ನಿರ್ವಹಿಸುವುದಷ್ಟೇ ನನ್ನ ಜವಾಬ್ದಾರಿ" ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದರು.

ಆದರೆ ಈಗ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಈ ಚಿತ್ರದ ಶೀರ್ಷಿಕೆಯನ್ನು ಬಳಸಬ... ಎಂದೂ, ಇಂತಹ ವ್ಯಕ್ತಿಗಳ ಕತೆಯನ್ನೇ ಸಿನಿಮಾದವರು ಆಯ್ಕೆ ಮಾಡಬಾರದು ಎಂದೂ ಆದೇ... ಮಾತ್ರವಲ್ಲ ಉಮೇಶ್ ರೆಡ್ಡಿ ತರಹದ ವಿಕೃತಕಾಮಿಗಳ ಕತೆಯನ್ನು ದೃಶ್ಯಮಾಧ್ಯಮಕ್ಕೆ ಇ... ನಮ್ಮ ಸಮಾಜಕ್ಕೆ ಒಂದು ಕೆಟ್ಟ ಸಂದೇಶವನ್ನು ನೀಡಿದಂತಾಗುತ್ತದೆ ಎಂದೂ ವಾದಿಸಿ...

ಇಲ್ಲಿಯತನಕ ಒಳ್ಳೆಯ ಸಂಭಾಷಣಾಕಾರರಾಗಿ ಹೆಸರು ಮಾಡಿದ್ದ ಮಳವಳ್ಳಿ ಸಾ... ಅವರು 'ಉಮೇಶ್ ರೆಡ್ಡಿ' ಎಂಬ ವಿಕೃತಕ ಕೊಲೆಗಡುಕನ ಕತೆಯನ್ನೇ ತಮ್ಮ ಚಿ... ನಿರ್ದೇಶನದ ಸಿನಿಮಾಗೆ ಆಯ್ಕೆ ಮಾಡಿ ಎಡವಟ್ಟುಮಾಡಿಕೊಂಡಿದ್ದಾರೆ.

ಒಂದು ಮಾತಂತೂ ನಿಜ. ವಿಕೃತಕಾಮಿಗಳ, ದರೋಡೆಕೋರರ, ಸುಲಿಗೆಗಾರರ ಚಿ... ಮಾಡುವುದು ಕನ್ನಡ ಚಿತ್ರ... ಶೋಭೆ ತರುವಂತಹದ್ದಲ್ಲ... ನಿಟ್ಟಿನಲ್ಲಿ ರಾಷ್ಟ್ರೀಯ ಮ... ಹಕ್ಕುಗಳ ಆಯೋಗ ... ಚಿತ್ರರಂಗದ ವಿರುದ್ಧ ಬಂಡಾ... ಬಾವುಟ ಹಾರಿಸಿರುವುದು ಸಂತೋ... ವಿಷಯ.


ಸೋಲಿಗೆ ವಾ... ಕಾರಣ ಎಂದ ನಾ...

ನಿರ್ದೇಶಕ ಎಸ್.ನಾರಾಯಣ್ ಈಗೆಲ್ಲಿದ್ದಾರೆ ಎಂಬ ... ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಹಲವರ ಪ್ರಕಾರ ಅವರು ... ತುಮಕೂರು ಹತ್ತಿರವಿರುವ ರೆಸಾರ್ಟ್‌ನಲ್ಲಿದ್ದಾರಂತೆ. ಇನ್ನೂ ಕೆಲವರ ಪ್ರ... ಅವರು ಈಗ ಬೆಂಗಳೂರಿನ ಸದಾಶಿವನಗರ ಏರಿಯಾದ ಮನೆಯೊಂ... ವಾಸಿಸುತ್ತಿದ್ದಾರಂತೆ. ಅವರೀಗ ಎಲ್ಲಿದ್ದಾರೆ ಎಂಬುದಕ್ಕಿಂತ ಅವರು ಇಲ್ಲಿಯ... ವಾಸಮಾಡುತ್ತಿದ್ದ ಬಸವೇಶ್ವರ ನಗರದ ಮನೆಯನ್ನು ಯಾಕೆ ತೊರೆದರು ಎಂಬ... ಮುಖ್ಯ. ಕಳೆದ ಒಂದೆರಡು ವರ್ಷಗಳಿಂದ ನಾರಾಯಣ್ ಅವರ ಯಾವ ಯೋಜನೆ... ಫಲಪ್ರದವಾಗಿಲ್ಲ, ಮೊದಲು ಅವರು ತಮ್ಮ ಮಗ ಪಂಕಜ್‌ಗಾಗಿ ನಿರ್ಮಿಸಿ ನಿರ್ದೇ... ಚಿತ್ರಗಳು ಸೋತು ಅವರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಆಮೇಲೆ ಅ... ಚಿತ್ರರಂಗಕ್ಕೆ ದಿಢೀರ್ ನಿವೃತ್ತಿಯನ್ನು ಘೋಷಿಸಿದರು. ಈಗ ಅವರ ನಿರ್ಮಾಣದ 'ಅಪ್ಪಯ್ಯ' ... ರೆಡಿ ಆಗಿದ್ದರೂ ಬಿಡುಗಡೆಯಾಗಿಲ್ಲ, ಇದೆಲ್ಲದರ ಮಧ್ಯೆ ಫೈನಾನ್ಶಿಯರ್ ಪ್ರಸಾದ್ ತಾನು ಕೊ... ಹಣವನ್ನು ನಾರಾಯಣ್ ಹಿಂತಿರುಗಿಸಿಲ್ಲ ಎಂದು ಫಿಲಂ ಛೇಂಬರ್‌ಗೆ ದೂರು ನೀಡಿದರು. ... ಟಿ.ವಿ ಚಾನೆಲ್‌ಗಳಲ್ಲೆಲ್ಲ ದೊಡ್ಡ ರಾದ್ಧಾಂತವಾಯಿತು.

ತಾನು ಇಷ್ಟೆಲ್ಲ ರಗಳೆ ಮತ್ತು ಸೋಲುಗಳನ್ನು ಕಾಣಲು ತಾವು ವಾಸವಿದ್ದ ಬಸವೇಶ್ವರ ನ... ಮನೆಯ ವಾಸ್ತು ಕಾರಣ ಎಂದು ಯಾರೋ ಜ್ಯೋತಿಷಿ ಅವರಿಗೆ ಹೇಳಿದನಂತೆ. ಅ... ನಂಬಿರುವ ನಾರಾಯಣ್ ಆ ಮನೆಯನ್ನು ತೊರೆದಿದ್ದಾರೆ.

ಒಂದು ಕಾಲದಲ್ಲಿ ಇದೇ ನಾರಾಯಣ್ ಬಸವೇಶ್ವರ ನಗರದಲ್ಲೇ ಬಾಡಿಗೆ ಮನೆ... ವಾಸಿಸುತ್ತಿದ್ದರು. ಅವರು ಅಲ್ಲಿದ್ದಾಗಲೇ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನು ಏರಿದ್ದರು. ಅದೇ ಮನೆಯಲ್ಲಿದ್ದಾಗ ಅವರು ಆರಂಭಿಸಿದ ಅನೇಕ ಚಿತ್ರಗಳು ಸೆಂಚುರಿ ಬಾರಿಸಿದ್ದವು. ಅಷ್ಟೇ ಅಲ್ಲ ಬಸವೇಶ್ವರನಗರದ ಮನೆಯ ಸುತ್ತಮುತ್ತ ಇದ್ದ ಅನೇಕ ಖಾಲಿ ನಿವೇಶನ ಮತ್ತು ಮನೆಗಳನ್ನು ಖರೀದಿಸಿದ ನಾರಾಯಣ್ ಅಲ್ಲೊಂದು ತಮ್ಮ ಸಾಮ್ರಾಜ್ಯವನ್ನೇ ಸ್ಥಾಪಿಸಿದ್ದರು. ಈಗ ಅದನ್ನೆಲ್ಲ ಅವರು ಮರೆತಿರುವಂತಿದೆ.

ತನ್ನ ಸೋಲಿಗೆ ನಿಜಕ್ಕೂ ಕಾರಣವೇನು ಎಂದು ಅರ್ಥಮಾಡಿಕೊಳ್ಳುವ ಬದಲು ಮನೆಯ ವಾಸ್ತುವನ್ನು ದೂಷಿಸಿ ನಾರಾಯಣ್ ಬೇರೆ ಮನೆಗೆ ಹೋಗಿರುವುದು ಪೆದ್ದುತನದ ಪರಮಾವಧಿ ಎನಿಸುತ್ತದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh...